ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 37

ಸೆಪ್ಟೆಂಬರ್ 13, 2009

ರೂ. 5/-

ಅನ್ನ ಅನ್ನ...
ತಿನ್ನುವುದೇನನ್ನ....



ಅಂಗವಿಕಲರ ಬವಣೆ
ಸಮಾಜದ ಹೊಣೆ



ಚಿಗುರುತ್ತಿರುವ
ಅಂಗವಿಕಲರ ಒಕ್ಕೂಟ




ಚಂದ್ರಯಾನದ ಕೊನೆ :
ಆದರೂ ಯಶಸ್ಸೇನೆ

6000 ರೂ. ಕನಿಷ್ಟ ವೇತನ
ಇಲ್ಲದೆ ಎಲ್ಲಿಯ ಜೀವನ
ನಡೆ ನಡೆ ಕರೆದಿದೆ ಆಂದೋಲನ

ಮನುಷ್ಯ ಮಾತ್ರ ಅಪವಿತ್ರ - ಕುಂ.ವೀ.

ಹೆಚ್.ಆರ್.ನವೀನ್‌ಕುಮಾರ್

ಇದೊಂದು ಸಾಂಸ್ಕೃತಿಕ ಕೇಂದ್ರ. ಈ ಪ್ರದೇಶಕ್ಕೆ ಪ್ರವೇಶಿಸಿದರೆ ನಿಜಕ್ಕೂ ಒಂದು ರೀತಿಯ ವಿಶೇಷ ಅನುಭವ. ಮಂಗಳೂರಿಗೆ ಕಾಲಿಟ್ಟಾಗ ಎಲ್ಲೋ ಒಂದು ರೀತಿಯ ಭಯ ಹಾಗೆ ಸಾಗಿದರೆ ಎಲ್ಲರಿಗೂ ಸ್ಫೂರ್ತಿಯ ಚಿಲುಮೆಯಂತಿರುವ ಅತ್ಯಂತ ಪ್ರಶಾಂತವಾದ ಈ ಪ್ರದೇಶ ಸಿಗುತ್ತದೆ. ಇದು ಮಂಗಳೂರಿನ ಶಕ್ತಿ ನಗರದಲ್ಲಿರುವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಾಂಸ್ಕೃತಿಕ ಕೇಂದ್ರ "ಕಲಾಂಗಣ್" ಈ ಪ್ರದೇಶದ ಬಗ್ಗೆ ಇಷ್ಟೊಂದು ಹೇಳುವ ಅವಶ್ಯಕತೆ ಏನಿದೆ ಅಂತೀರಾ? ಅವಶ್ಯಕತೆ ಇದೆ. ಎಂದು ಭಾವಿಸಿಯೇ ಇದನ್ನು ಉದ್ದೇಶಪೂರ್ವಕವಾಗಿ ಹೇಳುತ್ತಿರುವುದು. ಆಗಸ್ಟ್ 28 ರಿಂದ 31ರವರೆಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನ ರಾಜ್ಯಮಟ್ಟದ ಅಧ್ಯಯನ ಶಿಬಿರ ಇದೇ ಪ್ರದೇಶದಲ್ಲಿ 4 ದಿನಗಳ ಕಾಲ ಅತ್ಯಂತ ಯಶಸ್ವಿಯಾಗಿ ಸ್ಫೂರ್ತಿದಾಯಕವಾಗಿ ನಡೆದಿದೆ. ಈ ಶಿಬಿರದ ಯಶಸ್ಸಿನ ಹಿಂದೆ ಈ ಕಲಾಂಗಣ್‌ನ ಸಾಂಸ್ಕೃತಿಕ ವಾತಾವರಣವೂ ಕಾರಣವಾಗಿದೆ ಎನಿಸುತ್ತದೆ.



ಶಿಬಿರ ಉದ್ಘಾಟನೆ ಮಾಡಿದ ಸಾಹಿತಿ 'ಕುಂ.ವಿ'

ಈ ಶಿಬಿರದ ಉದ್ಘಾಟನೆಗೆಂದು ರಾಯಲಸೀಮದ ಅನುಭವಗಳನ್ನು ಹೊತ್ತು ಕರ್ನಾಟಕ ಮತ್ತು ಆಂಧ್ರದ ಗಡಿಭಾಗದಲ್ಲಿರುವ ಬಳ್ಳಾರಿ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲಿ ಮೇಷ್ಟ್ರಾಗಿ ಕೆಲಸ ನಿರ್ವಹಿಸಿ, ಆ ಸಂದರ್ಭ ಸಹಜವಾಗಿ ಅವರ ಜೀವನದಲ್ಲಿ ಎದುರಾದ ಜಾತಿ ಅಸ್ಪೃಶ್ಯತೆಯ ಆಚರಣೆಗಳ ವಿರುದ್ಧ ಸಿಡಿದೆದ್ದು ದಲಿತ ಮಕ್ಕಳಿಗಾಗಿ ಇಡೀ ಸರ್ಕಾರಿ ಶಾಲೆಯನ್ನೇ ದಲಿತ ಕೇರಿಗೆ ಕೊಂಡೊಯ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ, "ಕುಂ.ವೀ" ಎಂದೇ ಚಿರಪರಿಚಿತರಾದ ಕುಂಬಾರ ವೀರಭದ್ರಪ್ಪನವರು ಬಂದಿದ್ದರು. ಅವರು ಮಾತನಾಡುತ್ತಾ ಭಾರತದಲ್ಲಿ ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮದ ಅಗತ್ಯವಿದೆ. ಏಕೆಂದರೆ ಭಾರತದಲ್ಲಿ 12,972 ಜಾತಿಗಳಿದ್ದು, ಜಾತಿ ಅಸ್ಪೃಶ್ಯತೆ ಕಂದಾಚಾರ, ಅಸಮಾನತೆ ಎನ್ನುವುದು ತಾಂಡವವಾಡುತ್ತಿದೆ. ಈ ನೆಲದ ಮೇಲೆ ಮನುಷ್ಯನನ್ನು ಬಿಟ್ಟು ಕಲ್ಲು ಮಣ್ಣು ಎಲ್ಲ ವಸ್ತುಗಳೂ ಪವಿತ್ರವಾದವು. ಆದರೆ ಮನುಷ್ಯ ಮಾತ್ರ ಅಪವಿತ್ರ. ಮಂಗಳೂರಿ ನಂತರ ಪ್ರದೇಶಗಳಲ್ಲಿ ಬುರ್ಕಾ ಅಥವ ತಲೆಗೆ ಬಟ್ಟೆ ಕಟ್ಟಿಕೊಂಡು ಅಲ್ಪಸಂಖ್ಯಾತ ಹೆಣ್ಣುಮಕ್ಕಳು ಶಾಲಾ, ಕಾಲೇಜುಗಳಿಗೆ ಹೋದರೆ ಅವರನ್ನು ಕಾಲೇಜುಗಳಿಂದ ಹೊರಗಟ್ಟುವ ಈ ಸಂಸ್ಕೃತಿ ನಮ್ಮ ವ್ಯವಸ್ಥೆಯ ಕರಾಳ ಮುಖವನ್ನೇ ತೋರಿಸುತ್ತದೆ. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನೇ ನಿರಾಕರಿಸುತ್ತಿರುವ ಸಂದರ್ಭದಲ್ಲಿ ಈ ರೀತಿಯ ಕಾರಣಗಳಿಗಾಗಿ ಅಲ್ಪಸಂಖ್ಯಾತರ ಹೆಣ್ಣುಮಕ್ಕಳನ್ನು ಶಿಕ್ಷಣದಿಂದ ದೂರವಿಡುವ ವ್ಯವಸ್ಥಿತ ಹುನ್ನಾರವಾಗಿದ್ದು ಇದು ಹಿಂದೂ ತಾಲಿಬಾನೀಕರಣ ಎಂದರು.

ಜಾಗತೀಕರಣದ ಪರಿಣಾಮಗಳಿಂದಾಗಿ ಗ್ರಾಮೀಣ ಸಂಸ್ಕೃತಿ ನಾಶವಾಗುತ್ತಿದೆ. ನಮ್ಮ ಭಾಷೆಗಳು ನಶಿಸುತ್ತವೆ. ನಾವು ಮಾತನ್ನೇ ಕಳೆದುಕೊಳ್ಳುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಈ ಸಮಾಜವನ್ನು ವಿದ್ಯಾರ್ಥಿ ಸಮುದಾಯಕ್ಕೆ ಅರ್ಥ ಮಾಡಿಸುವಂತಹ ಸಂದರ್ಭದಲ್ಲಿ ಈ ಸಮಾಜವನ್ನು ವಿದ್ಯಾರ್ಥಿ ಸಮುದಾಯಕ್ಕೆ ಅರ್ಥ ಮಾಡಿಸುವ ಇಂತಹ ಶಿಬಿರಗಳು ಅತ್ಯಂತ ಉಪಯುಕ್ತವಾಗಿದ್ದು, ಬಸವ ಪಂಪ, ರನ್ನ, ಭಗತ್‌ಸಿಂಗ್, ಚೆಗೆವಾರರ ಕನಸುಗಳನ್ನು ನನಸಾಗಿಸಲು ನೈಜ ಸ್ವಾತಂತ್ರ್ಯಕ್ಕಾಗಿ ಹೋರಾಟಗಳು ನಡೆಯಬೇಕಿದೆ ಎಂದರು.



ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು

ಇಡೀ ಅಧ್ಯಯನ ಶಿಬಿರದ ವ್ಯವಸ್ಥೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಎಸ್‌ಎಫ್‌ಐ, ಡಿವೈಎಫ್‌ಐ ಸಂಗಾತಿಗಳು ಪ್ರಜಾಸತ್ತಾತ್ಮಕ ಚಳುವಳಿ ಸಂಗಾತಿಗಳು ಅತ್ಯಂತ ಜಾಗರೂಕತೆ ಮತ್ತು ಮುತುವರ್ಜಿಯಿಂದ ಮಾಡಿದ್ದರು.

ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಎಸ್‌ಎಫ್‌ಐನ ಅಖಿಲ ಭಾರತ ಅಧ್ಯಕ್ಷರು ಹಾಗೂ ಲೋಕಸಭಾ ಸದಸ್ಯರು ಆಗಿರುವ ಸಂಗಾತಿ ಪಿ.ಕೆ.ಬಿಜು ರವರು ಮಾತನಾಡಿ ರಾಜ್ಯದಲ್ಲಿ ಕೋಮುವಾದಿ ಬಿ.ಜೆ.ಪಿ ಅಧಿಕಾರಕ್ಕೆ ಬಂದು ಶೈಕ್ಷಣಿಕ ವ್ಯವಸ್ಥೆಯನ್ನು ಸಂಪೂರ್ಣ ಕೋಮುವಾದೀಕರಿಸುತ್ತಿರುವ ಮತ್ತು ರಾಜ್ಯಾದ್ಯಂತ ವ್ಯವಸ್ಥಿತವಾಗಿ ಕೋಮುಗಲಭೆಗಳನ್ನು ಹುಟ್ಟುಹಾಕುತ್ತಿರುವ ಇಂತಹ ಸಂದರ್ಭದಲ್ಲಿ ಜೊತೆಗೆ ಕೇಂದ್ರದ ಕಾಂಗ್ರೆಸ್ ಸರ್ಕಾರ ಅನುಸರಿಸುತ್ತಿರುವ ಶಿಕ್ಷಣ ವಿರೋಧಿ ನವ ಉದಾರವಾದಿ ನೀತಿಗಳನ್ನು ಅನುಸರಿಸುತ್ತಿರುವ ಸಂದರ್ಭದಲ್ಲಿ ಇವುಗಳ ವೈಜ್ಞಾನಿಕ ವಿಶ್ಲೇಷಣೆ ಮತ್ತು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ನಡೆಯುತ್ತಿರುವ ಈ ಶಿಬಿರ ಅತ್ಯಂತ ಮಹತ್ವದ್ದಾಗಿದ್ದು ಯಶಸ್ವಿಯಾಗಲಿ ಎಂದು ಹಾರೈಸಿದರು.

ಪುಟ 15 ಕ್ಕೆ

ಸಂಸ್ಕೃತ ವೇದ ವಿ.ವಿ. ಅವಶ್ಯಕತೆ ಇಲ್ಲ

ಡಾ.ವಸು

ಸರ್ವಜ್ಞನ ನಾಡು ಹಾವೇರಿಯಲ್ಲಿ ಎಸ್‌ಎಫ್‌ಐ ರಾಜ್ಯಮಟ್ಟದ ಅಧ್ಯಯನ ಶಿಬಿರ ಆಗಸ್ಟ್ 1 ರಿಂದ 4 ರವರೆಗೆ ಜಿಲ್ಲಾ ಗುರುಭವನದಲ್ಲಿ ಯಶಸ್ವಿಯಾಗಿ ನಡೆಯಿತು. ಈ ಶಿಬಿರದ ಉದ್ಘಾಟನೆಯನ್ನು ಮಾಡಿ ಮಾತನಾಡಿದ ಬೆಂಗಳೂರು ವಿ.ವಿ.ಯ ಇತಿಹಾಸ ಉಪನ್ಯಾಸಕರಾದ ಡಾ. ವಸುರವರು ರಾಜ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಸಂಸ್ಕೃತ ವೇದ ವಿಶ್ವವಿದ್ಯಾಲಯದ ಅವಶ್ಯಕತೆಯಿಲ್ಲ. ಬದಲಾಗಿ ಪ್ರಾಚೀನ ಭಾಷೆಗಳ ಅಧ್ಯಯನಕ್ಕೆ ಗಮನ ನೀಡಬೇಕಿದೆ. ಸಂಸ್ಕೃತವು ಜನರ ಆಡುಭಾಷೆಯಾಗಿ ಯಾವತ್ತೂ ಬಳಕೆಯಲ್ಲಿರಲಿಲ್ಲ. ಬದಲಾಗಿ ಇದು ಗ್ರಾಂಥಿಕ ಭಾಷೆ, ವೇದಗಳನ್ನು ಉದ್ಗರಿಸಲು ರಚಿಸಲಾಗಿದೆ ಅಷ್ಟೇ ಎಂದರು. ಬಿಜೆಪಿ ಸರ್ಕಾರ ಹಿಂದುತ್ವವನ್ನು ಪ್ರತಿಪಾದಿಸುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಭಯೋತ್ಪಾದನಾ ಜಾಗೃತಿ ಅಭಿಯಾನ ನಡೆಸಿತು. ಈಗಿನ ಶಿಕ್ಷಣವೂ ಜಾತಿ ವ್ಯವಸ್ಥೆಯನ್ನೇ ಪ್ರತಿಪಾದಿಸುತ್ತಿದೆ. ಶಿಕ್ಷಣದಲ್ಲಿ ಕೋಮುವಾದಿ ವಿಚಾರಗಳನ್ನು ವ್ಯವಸ್ಥಿತವಾಗಿ ತುಂಬಲಾಗುತ್ತಿದ್ದು ವಿದ್ಯಾರ್ಥಿಗಳು ಎಲ್ಲದನ್ನು ಪ್ರಶ್ನಿಸುವಂತಾಗಬೇಕೆಂದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದ ಸ್ವಾಮಿ ಮಾತನಾಡಿ ವಿದ್ಯಾರ್ಥಿ ಸಮುದಾಯ ಹೆಚ್ಚೆಚ್ಚು ಅಧ್ಯಯನಶೀಲರಾಗಿ ಈ ಸಮಾಜವನ್ನು ಅರ್ಥ ಮಾಡಿಕೊಳ್ಳಬೇಕು. ಜೊತೆಗೆ ಸಮಾಜದ ಅಸಮಾನತೆಯನ್ನು ಹೋಗಲಾಡಿಸಲು ಹೋರಾಟಗಳನ್ನು ನಡೆಸಬೇಕು. ಅದಕ್ಕಾಗಿಯೇ ಎಸ್‌ಎಫ್‌ಐ ನಂತಹ ಸಂಘಟನೆ ಅಭ್ಯಾಸ ಮತ್ತು ಹೋರಾಟ ಎಂಬ ಘೋಷಣೆಯನ್ನು ನೀಡಿರುವುದು ಎಂದರು. ಮತ್ತೋರ್ವ ಮುಖ್ಯ ಅತಿಥಿಗಳಾಗಿದ್ದ ಕವಿ, ಸಾಹಿತಿ ಸತೀಶ್ ಕುಲಕರ್ಣಿಯವರು ತಾವೇ ರಚಿಸಿದ ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು ಕಟ್ಟೇ ಕಟ್ಟುತ್ತೇವ ಕವಿತೆಗೆ ರಾಗ ಸಂಯೋಜಿಸಿ ಹಾಡಿದರು. ಎಸ್‌ಎಫ್‌ಐನ ರಾಜ್ಯ ಕಾರ್ಯದರ್ಶಿ ಅನಂತ್‌ನಾಯಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ರಾಜ್ಯ ಅಧ್ಯಕ್ಷರಾದ ಹೆಚ್.ಆರ್ .ನವೀನ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಹಾವೇರಿ ಜಿಲ್ಲಾ ಕಾರ್ಯದರ್ಶಿ ಬಸವರಾಜ್ ಪೂಜಾರ್ ಮತ್ತು ಜಿಲ್ಲಾ ಅಧ್ಯಕ್ಷ ನಾರಾಯಣ ಕಾಳೆಯವರ ಕಾರ್ಯಕ್ರಮವನ್ನು ನಿರೂಪಿಸಿ ಸ್ವಾಗತಿಸಿದರು.



ಶಿಬಿರ ಉದ್ಘಾಟಿಸಿದ ಡಾ. ವಸು

ಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ : 4 ದಿನಗಳ ಶಿಬಿರದಲ್ಲಿ 2 ದಿನಗಳು ಪ್ರತಿ ದಿನ ಸಂಜೆ ಪ್ರತಿನಿಧಿಗಳಿಗಾಗಿ ಸತೀಶ್ ಕುಲಕರ್ಣಿಯವರ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲಾಯಿತು. ಅಲ್ಲಿಯ ಕಲಾವಿದರ ನಟನೆ, ಅವರಿಂದ ಹೊರಬಂದ ಕ್ರಾಂತಿಗೀತೆಗಳು ನಿಜಕ್ಕೂ ಸಮಾಜದ ಅಂಕುಡೊಂಕುಗಳನ್ನು ಎತ್ತಿ ತೋರಿಸಿ ಅವುಗಳ ವಿರುದ್ಧ ಹೋರಾಡಲು ಸ್ಫೂರ್ತಿಗಳಾಗಿದ್ದವು. ಕುಂ.ವೀರಭದ್ರಪ್ಪನವರ "ಸಾಯೋ ಆಟ" ಎಂಬ ಏಕಪಾತ್ರಾಭಿನಯವನ್ನು ನೋಡುತ್ತಿದ್ದರೆ ಹಸಿದವರ ಸಂಕಟ ಕಣ್ಮುಂದೆ ನಿಲ್ಲುತ್ತದೆ. ನಿಜಕ್ಕೂ ಆ ಕಲಾವಿದನ ನಟನೆ ಅದ್ಭುತವಾದದ್ದು ಎಂದರೆ ಅತಿಶಯೋಕ್ತಿಯಾಗಲಾರದು. ಈ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಪ್ರಭಾವಕ್ಕೊಳಗಾದ ಪ್ರತಿನಿಧಿಗಳು ಕ್ರಾಂತಿಗೀತೆಗಳನ್ನು ಗುನುಗಲಾರಂಭಿಸಿದರು.

ಸಂಪಾದಕೀಯ

ಬರದ ಬೇಗೆಯಲ್ಲಿ ಜನ ನಿಷ್ಕ್ರಿಯಗೊಂಡಿರುವ ಸರ್ಕಾರಗಳು

'ಬಂದಪುಟ್ಟ ಹೋದಪುಟ್ಟ' ಎಂಬುದು ಕನ್ನಡದ ಜನಪ್ರಿಯ ಗಾದೆ. ಬರದ ಅಧ್ಯಯನಕ್ಕೆಂದು ರಾಜ್ಯಕ್ಕೆ ಬಂದುಹೋದ ಕೇಂದ್ರದ ಹಾಗೂ ರಾಜ್ಯದ ತಂಡಗಳಿಗೆ ಈ ಮಾತು ಸರಿಯಾಗಿ ಅನ್ವಯಿಸುತ್ತದೆ. ಬರದ ಹಾನಿಯನ್ನು ಖುದ್ದಾಗಿ ಅಳೆಯಲೆಂದು ಬಂದ ಕೇಂದ್ರದ ಮೂರು ತಂಡಗಳು ಬೀದರ್, ಗುಲಬರ್ಗಾ, ತುಮಕೂರು, ಕೋಲಾರ, ಕೊಪ್ಪಳ, ಬಿಜಾಪುರಗಳಿಗೇನೋ ಭೇಟಿ ನೀಡಿದರು. ಕೆಲವೆಡೆಗಳಲ್ಲಿ ರಸ್ತೆಗಳ ಮೇಲೆ, ಊರಿನ ಅಂಗಳದಲ್ಲಿ ಐದೈದು ನಿಮಿಷ ನಿಂತು ಪರಿಶೀಲಿಸಿ ವರದಿ ಬರೆದುಕೊಂಡರು. ಬಳಿಕ ಪ್ರಕೃತಿ ವಿಕೋಪ ನಿರ್ವಹಣಾ ಸಮಿತಿಗೆ ಹಾನಿ ವರದಿ ಪರಿಹಾರ ಯೋಜನೆ ಕೊಡಲಿದ್ದಾರಂತೆ. ರಾಜ್ಯ ಸರ್ಕಾರದ ಈಗಿನ ವರದಿಯಂತೆ 20 ಜಿಲ್ಲೆಗಳಲ್ಲಿ, 86 ತಾಲ್ಲೂಕುಗಳು ಬರಪೀಡಿತವಾಗಿವೆ. 394 ಕೋಟಿ 91 ಲಕ್ಷದ 70 ಸಾವಿರ ರೂಪಾಯಿಗಳ ಹಾನಿಯ ಪರಿಹಾರದ ಅಂದಾಜು ನೀಡಿದೆ. 72 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಇರಿಸಲಾಗಿದ್ದರೂ ಬಿತ್ತಿದ್ದು 53.14. ಲಕ್ಷ ಹೆ. ಬಿತ್ತನೆ ಸ್ಥಗಿತವಾಗಿರುವುದು 19 ಲಕ್ಷ ಹೆಕ್ಟೇರ್. ಬಿತ್ತನೆಯಾದ ಭೂಮಿಯಲ್ಲಿ 20 ಲಕ್ಷ ಹೆ. ನಷ್ಟು ಭೂಮಿಯ ಪೈರು ಒಣಗಿ ಹೋಗಿದೆ. ಬೀಜ, ಗೊಬ್ಬರ, ಹಾಕಿದ ರೈತರ ತಲೆಮೇಲೆ ಸಾಲದ ಹೊರೆ ಹೆಚ್ಚಿದೆ. ಆಹಾರ ಧಾನ್ಯ, ಎಣ್ಣೆಕಾಳು, ದ್ವಿದಳ ಧಾನ್ಯ ಫಸಲು ಹಾನಿಗೊಳಗಾಗಿದೆ. ಮಳೆ ಕೊರತೆಯಿಂದಲೇ 700 ಕೋಟಿ ರೂಪಾಯಿಗಳ ಬೆಳೆ ನಷ್ಟದ ಅಂದಾಜಿದೆ.

ನಿರ್ಲಕ್ಷ್ಯತನ

ಬರಪೀಡಿತವೆಂದು ರಾಜ್ಯ ಸರ್ಕಾರ ಗಮನಿಸಿರುವ ತಾಲ್ಲೂಕುಗಳಲ್ಲದೇ ಇನ್ನೂ ಹಲವಾರು ತಾಲ್ಲೂಕುಗಳು ಬರದ ದವಡೆಗೆ ಸಿಲುಕಿವೆ. ಸಮೀಕ್ಷೆ ಸರಿಯಾಗಿಲ್ಲ ಎಂಬ ಮಾತುಗಳೂ ಕೇಳುತ್ತವೆ. ಬಳ್ಳಾರಿ ಹೂವಿನ ಹಡಗಲಿಯಂತಹ ತಾಲ್ಲೂಕನ್ನು ಕೈಬಿಟ್ಟಿರುವಲ್ಲಿ ರೆಡ್ಡಿಗಳ ರಾಜಕೀಯ ಸೇಡಿದೆ ಎಂತಲೂ ಟೀಕೆ ಬಂದಿರುವುದು ಬಿಜೆಪಿ ಸರ್ಕಾರದ ರಾಜಕೀಯ ದ್ವೇಷಕ್ಕೆ ಜನರನ್ನು ಬಲಿ ಮಾಡುತ್ತಿರುವುದರ ಒಂದು ಉದಾಹರಣೆ. ಅಂದರೆ ದ್ವೇಷದ ರಾಜಕಾರಣಕ್ಕೆ, ಯೋಜನೆಗಳಲ್ಲಿ ಹಣ ಮೇಯಲು ಬರವು ಒಂದು ಸಂದರ್ಭವಾಗಿದೆ. ಇನ್ನೊಂದೆಡೆ ಬರದ ವಿವರ ಅಂದಾಜು ಮಾಡಿರುವ ರಾಜ್ಯ ಸರ್ಕಾರ ಜನರನ್ನು ರಕ್ಷಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಕೈಗೊಂಡಿಲ್ಲ. ಸರ್ಕಾರದ ನಿರ್ಧಾರ ವಿಧಾನಸೌಧದಿಂದ ಜಿಲ್ಲಾಧಿಕಾರಿಗಳ ಕಛೇರಿಯ ಕಡತ ಸೇರಿವೆ ಅಷ್ಟೇ.

ಒಂದು ವೇಳೆ ಸರ್ಕಾರ ಹೇಳಿಕೊಳ್ಳುವಂತೆ ಸಮರೋಪಾದಿಯಲ್ಲಿ ಕ್ರಮಗಳನ್ನು ಕೈಗೊಂಡಿದ್ದರೆ ಮುಖ್ಯವಾಗಿ ಕೂಲಿಕಾರರು - ಬಡ ರೈತರು ಕುಟುಂಬ ಸಮೇತ ಊರು ಬಿಟ್ಟು ಕೆಲಸ ಹುಡುಕಿಕೊಂಡು ಗುಳೇ ಹೊಗುತ್ತಿರಲಿಲ್ಲ. ಕನಿಷ್ಟ ಈಗಿರುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಆಡಳಿತ ಯಂತ್ರ, ಸ್ಥಳೀಯ ಸಂಸ್ಥೆಗಳು ಇಳಿದಿದ್ದರೆ ಗುಳೇ ನಿಲ್ಲಿಸಿ ಜೀವನಾಧಾರ ಕಲ್ಪಿಸಬಹುದಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ದುಡಿವವರಿಗೆ ಕೂಲಿ ನೀಡದೇ ಸತಾಯಿಸಲಾಗುತ್ತಿದೆ, ವಂಚಿಸಲಾಗುತ್ತಿದೆ. ಕೆಲಸ ಪಡೆದಲ್ಲಿ ಅಡ್ಡಿ ಪಡಿಸಲಾಗುತ್ತದೆ. ರಾಜ್ಯದಲ್ಲಿರುವ ಸಣ್ಣ-ಮಧ್ಯಮ ಗಾತ್ರದ ಕೆರೆಗಳು ಬತ್ತಿ ಹೋಗಿದ್ದು , ಅಂತರ್ಜಲವೂ ಕುಸಿದು ನೀರಿನ ಕೊರತೆಯುಂಟಾಗಿದೆ. ಕುಡಿವ ನೀರು, ಮೇವು ಪೂರೈಕೆ ಬಹುತೇಕ ಆರಂಭಗೊಂಡಿಲ್ಲ. ಧವಸ-ಧಾನ್ಯಗಳ ಕೊರತೆಯನ್ನು ಗಮನಿಸಿರುವ ವ್ಯಾಪಾರಿಗಳು ಕಾಳಸಂತೆಯಲ್ಲಿ ವಹಿವಾಟಿಗೆ ಮುಂದಾಗಿದ್ದಾರೆ. ಬೆಲೆ ಹೆಚ್ಚಿಸಿ ಲೂಟಿ ಯೋಜನೆಗಿಳಿದಿದ್ದಾರೆ. ಇದಕ್ಕೆ ಸರ್ಕಾರದ ನಿಯಂತ್ರಣವೂ ಇಲ್ಲ. ಜನರಿಗೆ ಕಡಿಮೆ ದರದಲ್ಲಿ ಎಲ್ಲರಿಗೂ ರೇಷನ್ ನೀಡಿಕೆಯೂ ಇಲ್ಲ. ಅಕ್ಕಿಸಂತೆಯೆಂಬ ಅಗ್ಗದ ಪ್ರಚಾರ ಮಾತ್ರ ಕಾಣಿಸಿಕೊಂಡಿದೆ. ವಿದ್ಯುತ್ ಸಮಸ್ಯೆ ಬಗೆಹರಿಸಲು ರಾಜ್ಯಸರ್ಕಾರ ಸಂಪೂರ್ಣ ವಿಫಲವಾಗಿದ್ದು ಪಂಪ್ ಸೆಟ್ ರೈತರನ್ನು ಇನ್ನೊಂದು ಬಗೆಯ ಸಮಸ್ಯೆಗೆ ನೂಕಲಾಗಿದೆ.

ವಂಚನೆಯ ಆಟ

ಹೀಗೆ ಕೇಂದ್ರಕ್ಕೆ ಒಂದು ಬೇಡಿಕೆ ಸಲ್ಲಿಸಿ ದೂರುತ್ತಾ ಕೂತು ಬಿಡುವುದೇ ತನ್ನ ಕೆಲಸವೆಂದು ಭಾವಿಸಿರುವ ಯಡ್ಯೂರಪ್ಪನವರ ಸರ್ಕಾರ ಕ್ರಮ ವಹಿಸದೇ ಸಂಪೂರ್ಣ ನಿಷ್ಕ್ರಿಯವಾಗಿದೆ. ತನ್ನ ಪಾಲಿನ ಕೆಲಸವನ್ನು ಮಾಡಿಲ್ಲ. ಅತ್ತ ಕೇಂದ್ರ ಸರ್ಕಾರವೂ ಒಂದು ತಂಡ ಕಳಿಸಿ ವರದಿ ತರಿಸಿಕೊಂಡು ಬಿಟ್ಟರೆ ತನ್ನ ಕೆಲಸವೂ ಮುಗಿಯಿತು ಎಂದುಭಾವಿಸಿರುವುದು, ಇಂತಹುದೇ ನಿಲುವು ತಳೆದಿರುವ ಎರಡು ಸರ್ಕಾರಗಳ ಕ್ರೌರ್ಯ, ಅಮಾನವೀಯ, ಜನವಿರೋಧಿಯಾಗಿದೆ. ಎಲ್ಲೆಲ್ಲಿ ಮಳೆ ಇಲ್ಲ, ಬೆಳೆ ಹಾನಿಯಾಗಿದೆ ಎಂಬಿತ್ಯಾದಿ ವಿವರಗಳನ್ನು ಪಡೆಯಲು ಅಧ್ಯಯನ ತಂಡಗಳ ಪ್ರವಾಸವೇ ಬೇಕಿಲ್ಲ. ಚಂದ್ರನ ಮೇಲೆ, ಒಳಗೆ ಏನೆಲ್ಲಾ ಇದೆ ಎಂದು ಭೂಮಿಯೊಳಗಿನ ಖನಿಜ, ತೈಲ ಇತ್ಯಾದಿ ಸಂಪತ್ತು ಗುರುತಿಸುವ ಉಪಗ್ರಹಗಳ ದೂರಗ್ರಾಹಿ ತಂತ್ರಜ್ಞಾನ ಕೇಂದ್ರ ಸರ್ಕಾರದಲ್ಲಿದೆ. ಬರದ-ಅತೀವೃಷ್ಠಿಯ ಹಾನಿ ಕಂಡುಕೊಳ್ಳಲು ತಿಂಗಳುಗಳೇ ಬೇಕಿಲ್ಲ. ಕೆಲವು ನಿಮಿಷ, ಗಂಟೆಗಳೇ ಸಾಕು. ಆದರೆ ಇದು ರಾಜ್ಯ - ಕೇಂದ್ರ - ರಾಜ್ಯ ಸರ್ಕಾರಗಳಿಗೆ ಬೇಕಿಲ್ಲ. ಸ್ಥಾಪಿತ ಹಿತಾಸಕ್ತಿಗಳಿಗೆ, ಲೂಟಿಕೋರರಿಗೆ ಬರವೂ ಸಮೃದ್ಧಿ ತರುವ ಸಂಗತಿಯಾಗಿದೆ. ಶ್ರಮಜೀವಿಗಳ ಶೋಷಣೆಗೆ ಹೊಂಚುಹಾಕಿವೆ. ಆದ್ದರಿಂದಲೇ ಪರಸ್ಪರ ದೋಷಾರೋಪಣೆಯಲ್ಲಿ ಕೇಂದ್ರ - ರಾಜ್ಯ ಸರ್ಕಾರಗಳು, ಆಡಳಿತ ಪಕ್ಷಗಳೂ ನಿರತವಾಗಿವೆ.

ಸಂಕಷ್ಟದಲ್ಲಿರುವ ಜನರ ಬವಣೆಗಳೊಂದಿಗೆ ಆಟವಾಡದೇ ಕೇಂದ್ರ - ರಾಜ್ಯ ಸರ್ಕಾರಗಳು ತಕ್ಷಣವೇ ಪರಿಹಾರದ ಸಮಗ್ರ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು. ಈಗಾಗಲೇ ಜನತೆಬೀದಿಗಿಳಿದು ಹೋರಾಟ ಆರಂಭಿಸಿದ್ದಾರೆ. ಅದು ವ್ಯಾಪಕಗೊಳ್ಳಲಿದೆ.

ಗುಲಬರ್ಗಾದಲ್ಲಿ ಸಂಪುಟ ಸಭೆ

ಭ್ರಮೆ ಸೃಷ್ಟಿಸುವ ನಾಟಕ



ಬಾಯ್ತುಂಬ ಅಭಿವೃದ್ಧಿಯ ಮಾತನಾಡಿ ಸಚಿವ ಸಂಪುಟದ ಒಂದು ಸಭೆಯೇ ನಡೆಸಿ, ಟಿ.ವಿ.ಪತ್ರಿಕೆಗಳಲ್ಲಿ ಭರ್ಜರಿ ಪ್ರಚಾರ ಮಾಡಿಸಿಕೊಂಡರೆ ಸಾಲದು ಆ ಪ್ರದೇಶದ ಹಾಗೂ ರಾಜ್ಯದ ಅಭಿವೃದ್ಧಿ ಸಾಧಿತವಾಗಿಯೇ ಬಿಡುತ್ತದೆ ಎಂದು ಯಡಿಯೂರಪ್ಪನವರ ಸರ್ಕಾರ ಜನರನ್ನು ನಂಬಿಸಲು ಯತ್ನಿಸುತ್ತಿದೆ. ಇತ್ತೀಚೆಗೆ ಗುಲಬರ್ಗಾ ನಗರದಲ್ಲಿ ಜರುಗಿದ ಸಚಿವಸಂಪುಟದ ಸಭೆ ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಗೆಂದು ಕೈಗೊಂಡ ಯೋಜನೆಗಳು ತೀರ್ಮಾನಗಳು ಜನರಿಗೆ ಮಂಕುಬೂದಿ ಎರಚುವ ಯತ್ನಗಳೇ ಆಗಿವೆ. ಅವರೇ ಹೇಳಿಕೊಂಡಂತೆ 48 ವಿಷಯಗಳ ನಿರ್ಧಾರಗಳಲ್ಲಿ 36 ಹೈ.ಕ. ದ್ದೆ. ಅದಕ್ಕೆ 900 ಕೋಟಿ ಹಣ ನೀಡಲಾಗುವುದಂತೆ. ಆದರೆ ಇವ್ಯಾವೂ ಆ ಭಾಗದ ಜನರ ಸಂಕಷ್ಟಗಳ ಪರಿಹಾರವಿರಲೀ ಮೂಲಭೂತ ಸಮಸ್ಯೆಗಳ ಇತ್ಯರ್ಥಕ್ಕೆ ಸಹಾಯಕವಾಗದೇ ಬಿಜೆಪಿ ಹಿಂಬಾಲಕ ಪುಡಾರಿಗಳ ಕಂಟ್ರಾಕ್ಟ್‌ಗಿರಿ ದಂಧೆಯ ಅಭಿವೃದ್ಧಿಯನ್ನೇ ಗುರಿಯಾಗಿಸಿದಂತಿವೆ. ಕಳೆದ ವರುಷವೂ ಇಲ್ಲಿ ಸಭೆ ನಡೆಸಿ ಕೈಗೊಂಡಿರುವ ಬಹುತೇಕ ತೀರ್ಮಾನಗಳನ್ನು ಜಾರಿಗೊಳಿಸದೇ ಹೊಸ ತೀರ್ಮಾನಗಳನ್ನು ಕೈಗೊಂಡಿರುವುದು ಸರ್ಕಾರದ ವಚನಭ್ರಷ್ಟತೆ. ಇಂತಹ ಘನಕಾರ್ಯಕ್ಕೆ ಕೋಟ್ಯಾಂತರ ರೂಪಾಯಿಗಳ ಖರ್ಚು ಮಾಡಿದ್ದಲ್ಲದೇ, ಇದೇ ಸಚಿವರು ಆಡಳಿತ ಯಂತ್ರ ಕೆಲಸ ಬಿಟ್ಟು ಹೀಗೆಲ್ಲಾ ವ್ಯರ್ಥ ಮಾಡಬೇಕಿತ್ತೇ? ಅದೂ ಬರದ ಭೀಕರತೆಯ ಬಿಸಿಯಲ್ಲಿ ಇದು ಅಗತ್ಯವಿತ್ತೇ ಎಂಬ ಪ್ರಶ್ನೆ ಏಳುತ್ತದೆ.

ಯಾಕೆಂದರೆ ಬರದ ನಾಡಿನಲ್ಲಿ ನಡುವೆಯೇ ಕೂತುಕೊಂಡಿದ್ದರೂ ಅದರ ಬಗ್ಗೆ ವಿಶೇಷ ಕ್ರಮಗಳ ಬಗ್ಗೆ ಪ್ರಸ್ತಾಪವಿಲ್ಲ. ಹಣವೂ ಇಲ್ಲ. ಪ್ರಾದೇಶಿಕ ಅಸಮಾನತೆಯ ನಿವಾರಣೆ ಬಗ್ಗೆ ಮಾತುಗಳು ಕೇಳಿದರೂ ಅದನ್ನು ತೊಲಗಿಸಲು ಮೂಲಭೂತ ಯೋಜನೆಗಳಿಲ್ಲ. ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಹಾಗೂ ಆರ್ಥಿಕ, ಸಾಮರ್ಥ್ಯದಲ್ಲಿಯೂ ಹೈ.ಕ. ಪ್ರದೇಶ ತುಂಬಾ ಹಿಂದುಳಿದಿದೆ. ಈ ಎಲ್ಲಾ ಅಂಶಗಳೂ ಒಳಗೊಂಡಿರುವ ರಾಜ್ಯದ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ 26 ಸ್ಥಾನ ಹೈ.ಕ. ಭಾಗವಾಗಿರುವ ಗುಲಬರ್ಗಾದ್ದು. ಬೀದರ್ 20, ಇಂತಹ ಸ್ಥಿತಿ ನಿರ್ಮಾಣವಾಗಿರುವುದೇ ಅಪಾರ ಪ್ರಮಾಣದಲ್ಲಿ ಭೂಹೀನರೇ ಇರುವ ಆ ಕಾರಣದಿಂದ ಕೂಲಿಕಾರರೇ ಅತ್ಯಧಿಕವಾಗಿರುವ ಮಹಿಳೆಯರ ಸಂಖ್ಯೆಯಲ್ಲಿ ಶೇ.47 ರಷ್ಟು ಕೂಲಿಕಾರರು) ಈ ಪ್ರದೇಶದಲ್ಲಿ ಸಮಗ್ರ ಭೂಸುಧಾರಣೆಯಾಗದೇ ಅಭಿವೃದ್ಧಿಯೂ ಸಾಧಿತವಾಗಲಾರದು. ಕೃಷಿ, ಕೈಗಾರಿಕೆಗಳಂತಹ ಮೂಲಭೂತ ಅಭಿವೃದ್ಧಿ ಕ್ರಮ ಕೈಗೊಳ್ಳದೇ ಅಸಮಾನತೆ ತೊಲಗಿಸುವುದೂ ಅಸಾಧ್ಯ. ಇದು ಮೂಲಭೂತ ಪ್ರಶ್ನೆಯಾಯಿತು. ಕನಿಷ್ಟ ಬರದ ಹಿನ್ನೆಲೆಯಲ್ಲಿಯೂ ಕೂಲಿಕಾರರ ವಲಸೆಯನ್ನು ತಡೆಗಟ್ಟಲು ಬರದ ಬವಣೆಯಿಂದ ಜನರನ್ನು ಪಾರು ಮಾಡಲು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪೂರ್ಣ ಅನುಷ್ಠಾನಕ್ಕೆ ಒತ್ತು ನೀಡಲಿಲ್ಲ. ಕುಡಿವ ನೀರು, ಮೇವು ಪೂರೈಕೆಗೆ ನೀಡಿದ ಹಣವೂ ಕನಿಷ್ಟವೇ. (ಬರಕ್ಕೆಂದು ಈ ಭಾಗದ ಐದು ಜಿಲ್ಲೆಗಳಿಗೆ ಘೋಷಿತ ಹಣ ಕೇವಲ 30 ಕೋಟಿ ಮಾತ್ರ) ಇನ್ನು ಸಾರ್ವತ್ರಿಕ ರೇಷನ್ ನೀಡಿಕೆ,

ಪುಟ 5 ಕ್ಕೆ

ನೈತಿಕತೆ ಎಲ್ಲಿ?

ರಾಜ್ಯದ ಸಾರ್ವಜನಿಕ ಒತ್ತಡ ಹಾಗೂ ಬಿಜೆಪಿಯೊಳಗಿನ ಭಿನ್ನಮತದಿಂದಾಗಿ ಯಡ್ಯೂರಪ್ಪನವರ ಸಂಪುಟದಲ್ಲಿ ಅಂತೂ ವಾರಾನುಗಟ್ಟಲೆ ಜಗ್ಗಾಟದ ಬಳಿಕ ಸಚಿವರಾಗಿರುವ ಸೋಮಣ್ಣ ರಾಜಿನಾಮೆ ಕೊಟ್ಟಿದ್ದಾರೆ. ಇನ್ನೊಬ್ಬ ಸಚಿವ ಸುಧಾಕರ್ ರಾಜಿನಾಮೆ ಸಲ್ಲಿಸಲು ಒಂದು ವಾರದ 'ಜೀವದಾನ' ಕೇಳಿದ್ದಾರೆ. ಆಪರೇಷನ್ ಕಮಲದಿಂದಾಗಿ ಉಪ ಚುನಾವಣೆಯಲ್ಲಿ 'ಸೋಲರಿಯದ ಸೋಮಣ್ಣ'ನಿಗೆ ಜನತೆ ಕಪಾಳಮೋಕ್ಷ ಮಾಡಿ ಜಾಗ ತೋರಿಸಿದ್ದಾರೆ. ಮಂತ್ರಿಯಾಗುವ ಆಶೆಯಿಂದಲೇ ಬಿಜೆಪಿ ಡೇರೆಯೊಳಗೆ ಕಾಲಿಟ್ಟ ಸುಧಾಕರ್, ಬ್ಯಾಂಕ್ ವೊಂದಕ್ಕೆ ಹಣ ವಂಚಿಸಿದ ಕೇಸ್‌ನಲ್ಲಿ ಆರೋಪ ಎದುರಿಸುತ್ತಿದ್ದಾರೆ. ಅಧಿಕಾರದ ಗದ್ದುಗೆ ಸುತ್ತಲೇ ತಿರುಗುತ್ತಿರುವ ಇಬ್ಬರು ಮಹನೀಯರು ಮುಖಕ್ಕೆ ಗುದ್ದು ಬೀಳಲಾರಂಭಿಸಿದಾಕ್ಷಣ ಕುರ್ಚಿ ಖಾಲಿ ಮಾಡಲು ಸಿದ್ಧರಿಲ್ಲದೇ ಇರುವುದು ಭಂಡತನಕ್ಕೆ ಒಂದು ಉದಾಹರಣೆ. ಅಷ್ಟು ಮಾತ್ರವಲ್ಲ ಸ್ವತಃ ಬಿಜೆಪಿಯೇ ಸೋಮಣ್ಣನನ್ನು ಉಳಿಸಿಕೊಳ್ಳಲು ಸಿ.ಎಂ. ರಾಜಿನಾಮೆ ಪಡೆಯಲು ನಿರಾಕರಿಸಿತ್ತು. ಸೋತ ಕೂಡಲೇ ರಾಜಿನಾಮೆ ಒಪ್ಪಿಸಿದ್ದರೆ ಅಷ್ಟಿಷ್ಟು ಮಾನವಾದರೂ ಉಳಿಯುತ್ತಿತ್ತು. ಜನಾದೇಶಕ್ಕೆ ಕೊಂಚವಾದರೂ ಮಾನ್ಯತೆ ನೀಡಿದಂತಾಗುತ್ತಿತ್ತು. ಆದರೆ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಸದಾ ಬೊಗಳೆ ಹೊಡೆಯುವ ಬಿಜೆಪಿಗೆ ಇಲ್ಲವಾದ ಮಾನ, ರಾಜಕೀಯ ಸಂದರ್ಭಸಾಧಕತನಕ್ಕೆ ಮಿತಿಯುಂಟೇ?

ಸಿ.ಎಂ.ಕುಟುಂಬ ಚೀನಾಕ್ಕೆ ಹಾರಿದ್ದು ಏನನ್ನು ಆಕರ್ಷಿಸಲು?

ಯಡ್ಯೂರಪ್ಪನವರು ತಮ್ಮ ಪರಿವಾರದೊಂದಿಗೆ ಚೀನಾಕ್ಕೆ ಹಾರಿದ್ದಾರೆ. ವಿದೇಶಿ ಬಂಡವಾಳವನ್ನು ರಾಜ್ಯಕ್ಕೆ ಆಕರ್ಷಿಸುವುದೇ ಪ್ರಯಾಣದ ಉದ್ದೇಶವಂತೆ. ಅಷ್ಟಕ್ಕೇ ಹೋಗಿದ್ದರೆ ಬಹುಶಃ ಹೆಚ್ಚಿನ ತಕರಾರು ಇರಲಿಕ್ಕಿಲ್ಲ. ಆದರೆ ಇದಕ್ಕೆ ಸಂಬಂಧವಿರದ ಸಚಿವರು, ಮುಖ್ಯಮಂತ್ರಿಗಳ ಮಕ್ಕಳು, ಅವರ ಪತ್ನಿಯವರಜೊತೆಗೆ 'ಸಾಥ್' ನೀಡಿ ಸರ್ಕಾರದ ಅತಿಥಿಗಳಾಗಿರುವುದು ಯಾಕೆ? ಏನನ್ನು ಆಕರ್ಷಿಸಲು ಇವರ ಭೇಟಿ?

ಸರ್ಕಾರದ ಹಣ, ಸ್ಥಾನದ ದುರ್ಬಳಕೆ ಮಾಡುತ್ತಿರುವುದು ಸ್ಪಷ್ಟ ಗೋಚರವಾಗಿದ್ದರೂ ಸಿ.ಎಂ. ಸಮರ್ಥಿಸಿಕೊಳ್ಳುವುದು ಅರ್ಥಹೀನ ವಾಗಿದೆ. ಕನಿಷ್ಟ ಸಾರ್ವಜನಿಕ ಅಭಿಪ್ರಾಯಕ್ಕೆ ಕಿಂಚಿತ್ತೂ ಮನ್ನಣೆ ನೀಡದೆ, ನೈತಿಕ ಪ್ರಶ್ನೆಯೂ ಇಲ್ಲದ ವರ್ತನೆ ಖಂಡನೀಯ.

ಮನುಸ್ಮೃತಿಯು ಅಸ್ಪೃಶ್ಯತೆಗೆ ಮಾತ್ರವಲ್ಲ ಸ್ತ್ರೀ ಶೋಷಣೆಯನ್ನೂ ವಿಧಿಸುವ ವಿಚಾರಗಳಿಗೆ ಕುಖ್ಯಾತವಾಗಿದೆ. ಇಂತಹ ಮುನುಸ್ಮೃತಿಯನ್ನು ಹಾಡಿ ಹೊಗಳುವವರು ಇದ್ದಾರೆ.

'ನಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಮನು ಸ್ಮೃತಿಯಲ್ಲಿ ಮಹಿಳೆಯರು

ಜಿ.ಎನ್.ನಾಗರಾಜ್

ಪಿತಾರಕ್ಷತಿ ಕೌಮಾರೇ ಭರ್ತಾರಕ್ಷತಿ ಯೌವನೇ ರಕ್ಷಂತಿ ಸ್ಥವಿರೇಪುತ್ರಾ ನಸ್ತ್ರಿ ಸ್ವಾತಂತ್ರ್ಯ ಮರ್ಹತಿ

9(3) (ಮನುಸ್ಮೃತಿ 9ನೇ ಅಧ್ಯಾಯ 3ನೇ ಶ್ಲೋಕ)

ಸ್ತ್ರೀಯನ್ನು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಕ್ಕಳು ರಕ್ಷಿಸುತ್ತಾರೆ. ಆದ್ದರಿಂದ ಸ್ತ್ರೀಯು ಸ್ವಾತಂತ್ರಳಾಗಿ ಇರಲು ಅರ್ಹಳಲ್ಲ.

ಮನುಸ್ಮೃತಿಯ ಈ ಶ್ಲೋಕ ಸಾವಿರಾರು ವರ್ಷಗಳಿಂದ ಇಡೀ ದೇಶದಲ್ಲಿ ಕೋಟಿಗಟ್ಟಲೆ ಸಾರಿ ರಾಜಾಸ್ಥಾನ, ದೇವಸ್ಥಾನ, ಭಜನೆ, ಹರಿಕಥೆ, ಪುರಾಣ ಚರ್ಚಾಗೋಷ್ಠಿಗಳಲ್ಲಿ ಉದ್ಘೋಷಿತ ವಾಗುತ್ತಲೇ ಇದೆ. ಈ ಶ್ಲೋಕದ ತಿರುಳು ಭಾರತದಲ್ಲಿ ಸರ್ವ ವ್ಯಾಪಕವಾಗಿದೆ. ಪುರುಷರಲ್ಲಿ ಕೇವಲ ಕೆಲವರ ಹೊರತು ಬೃಹತ್ಪ್ರಮಾಣದಲ್ಲಿ, ಈ ವಿಚಾರವನ್ನು ಪ್ರಜ್ಞಾಪೂರ್ವಕವಾಗಿ, ಅಪ್ರಜ್ಞಾಪೂರ್ವಕವಾಗಿ ತಮ್ಮ ದೇಹದ ರಕ್ತ ಚಲನೆಯಂತೆಯೇ ತಮ್ಮ ಚಿಂತನೆಯ ಭಾಗವಾಗಿಸಿಕೊಂಡಿದ್ದಾರೆ. ಈ ವಿಚಾರದ ಆಧಾರದ ಮೇಲೆಯೇ ಕೋಟ್ಯಾಂತರ ಮಹಿಳೆಯರು ಅನುದಿನವೂ ನಿರ್ಬಂಧಗಳು, ನಿಂದೆ, ದೌರ್ಜನ್ಯಗಳನ್ನು ಎದುರಿಸಬೇಕಾಗಿದೆ. ಮಹಿಳೆಯರಲ್ಲಿ ಬಹುಭಾಗ ಇದನ್ನು ನಂಬಿದ್ದಾರೆ. ತಮ್ಮ ಮಕ್ಕಳು, ಮೊಮ್ಮಕ್ಕಳು, ಸೋದರಿಯರು ಇತರ ಸ್ತ್ರೀಯರ ಮೇಲೆ ಈ ನಂಬಿಕೆಯನ್ನು ಹೇರುವುದರಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ.

ಯತ್ರ ನಾರ್ಯಸ್ತು ...

21ನೆಯ ಶತಮಾನಕ್ಕೆ ಭಾರತ ಪ್ರವೇಶಿಸಿರುವಾಗಲೂ, ಈಗಾಗಲೇ ಸುಮಾರು ಒಂದು ಶತಮಾನದಿಂದಲೂ ಆಧುನಿಕ ವಿಚಾರಗಳು, ಪ್ರಜಾಪ್ರಭುತ್ವದ ಚಿಂತನೆಗಳು ದೇಶದ ಜನರನ್ನು ಪ್ರಭಾವಿಸಿರುವಾಗಲೂ, ಮಹಿಳೆಯರು ಶಿಕ್ಷಣ, ಬದುಕಿನಲ್ಲಿ ಅನೇಕ ಸಾಧನೆಗಳನ್ನು ಮಾಡಿ ತೋರಿಸಿರುವಾಗಲೂ ಮಹಿಳಾ ಮೀಸಲಾತಿ ಪಂಚಾಯತ್ ರಾಜ್ಯ ಹಾಗೂ ಪುರಸಭೆ, ನಗರ ಸಭೆಗಳಲ್ಲಿ ಕೆಲವರ್ಷಗಳಿಂದ ಜಾರಿಯಲ್ಲಿರುವಾಗಲೂ ಈ ಭಾವನೆ ಇನ್ನೂ ವ್ಯಾಪಕವಾಗಿಯೇ ಇದೆ. ವಿದ್ಯಾವಂತ, ಉದ್ಯೋಗಸ್ಥ ಮಹಿಳೆಯರ ಬಗ್ಗೆ ಕೂಡ ಈ ಭಾವನೆ ಗಣನೀಯವಾಗಿದೆ ಎಂದರೆ ಪತಿಯ ಆದಾಯದ, ಆಸ್ತಿಯ ಮೇಲೆ ಅವಲಂಬಿತವಾಗಿರುವ ಗೃಹಿಣಿಯರ ಪಾಡೇನು?

ಈ ಬಗ್ಗೆ ಸ್ತ್ರೀ ಸಮಾನತೆಯನ್ನು ಒಪ್ಪುವವರು ಮನುಸ್ಮೃತಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಅದಕ್ಕೆ ಉತ್ತರವಾಗಿ ಮನುಸ್ಮೃತಿಯ ಬೆಂಬಲಿಗರು ಅದರಲ್ಲಿರುವ ಮತ್ತೊಂದು ಶ್ಲೋಕವನ್ನು ಉದಾಹರಣೆಯಾಗಿ ನೀಡುತ್ತಿರುತ್ತಾರೆ. ಇದು ಕೂಡ ಸಾಕಷ್ಟು ಪ್ರಸಿದ್ಧವಾಗಿರುವ ಶ್ಲೋಕವೇ. ಭಾರತೀಯ ಸಂಸ್ಕೃತಿಯ ಹಿರಿಮೆ, ಗರಿಮೆಗಳನ್ನು ಕೊಂಡಾಡುವವರು ಈ ಶ್ಲೋಕವನ್ನು ಮತ್ತೆ ಮತ್ತೆ ಹೇಳುತ್ತಿರುತ್ತಾರೆ.

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ:

ಯತ್ರೈತಾಸ್ತು ನಪೂಜ್ಯಂತೆ ಸರ್ವಾಸ್ತತ್ರಾ ಫಲಾ ಕ್ರಿಯಾ:

-3(56)

ಎಲ್ಲಿ ಸ್ತ್ರಿಯರಿಗೆ ಗೌರವ ಸನ್ಮಾನಗಳು ದೊರೆಯುತ್ತವೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಯಾವ ಮನೆಯಲ್ಲಿ ಸ್ತ್ರೀಯರು ಗೌರವಿಸಲ್ಪಡುವುದಿಲ್ಲವೋ ಅಲ್ಲಿ ಮಾಡುವ ಎಲ್ಲ ಯಜ್ಞ, ಪೂಜೆಗಳೂ ನಿಷ್ಫಲವಾಗುತ್ತವೆ. ಅದೇ ರೀತಿ ಯಾವ ಕುಲದಲ್ಲಿ ಸ್ತ್ರೀಯರು ದು:ಖಪಡುತ್ತಾರೋ ಆ ವಂಶವು ನಿರ್ವಂಶವಾಗುತ್ತದೆ. (3(57)) ಗೌರವ, ಮಾನ, ಮರ್ಯಾದೆಗಳನ್ನು ಪಡೆಯದೇ ಯಾವ ಸ್ತ್ರೀಯರು ಬರೀ ನೋವಿನಿಂದ ಶಾಪ ಹಾಕುತ್ತಾರೋ ಆ ಮನೆ , ಮನೆತನಗಳು ದುರ್ವಿಧಿಗೆ ಗುರಿಯಾಗುತ್ತವೆ (3(58))

ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾಭಾರ್ಯಾ ತಥೈವಚ

ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈಧ್ರುವಂ

-3(60)



ಯಾವ ಮನೆಯಲ್ಲಿ ಗಂಡನು ಹೆಂಡತಿಯನ್ನು ಹಾಗು ಹೆಂಡತಿಯು ಗಂಡನನ್ನು ಪರಸ್ಪರರು ಅನುರಾಗ ಹಾಗೂ ಸಂತೃಪ್ತಿಗಳಿಂದ ಸುಖಪಡಿಸುತ್ತಾರೋ ಆ ಮನೆಯಲ್ಲಿ ಯಾವಾಗಲೂ ಕಲ್ಯಾಣವು, ಸಮೃದ್ಧಿಯು ಶಾಶ್ವತವಾಗಿರುತ್ತದೆ.

ಅನೇಕ ಪುರೋಹಿತಶಾಹಿ, ಪಾಳೆಯಗಾರಿ ಸಂಸ್ಕೃತಿಯ ವಕ್ತಾರರು ಈ ಶ್ಲೋಕಗಳನ್ನು ಉದ್ಘೋಷಿಸುತ್ತಾ ಮನುಸ್ಮೃತಿಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಸಂಘ ಪರಿವಾರ, ಆರೆಸ್ಸೆಸ್ ಅನೇಕ ಬುದ್ಧಿಜೀವಿಗಳನ್ನು ಮನುಸ್ಮೃತಿಯನ್ನು ಕೊಂಡಾಡಲೆಂದೇ ನಿಯೋಜಿಸಿದೆ. ಅದರಲ್ಲಿ ಕರ್ನಾಟಕದಲ್ಲಿ ಮಾಜಿ ಮುಖ್ಯ ನ್ಯಾಯಾಧೀಶರಾಗಿದ್ದ ಆರೆಸ್ಸೆಸ್ ಭಕ್ತ ರಾಮಾಜೋಯಿಸ್‌ರವರು, ಸಾಹಿತಿ ಎಸ್.ಎಲ್.ಭೈರಪ್ಪನವರು ಪ್ರಮುಖರು. ರಾಮಾಜೋಯೀಸರವರು ಹೋದ ಹೋದಲ್ಲೆಲ್ಲಾ ಮನುಸ್ಮೃತಿಯ ಹೊಗಳಿಕೆಯನ್ನು ನಡೆಸಿದ್ದಾರೆ. ಅದಕ್ಕಾಗಿಯೇ ಪುಸ್ತಕಗಳನ್ನೂ ಬರೆದಿದ್ದಾರೆ. ಅವರು ಹೇಳುತ್ತಾರೆ :

"ಗಂಡು ಮತ್ತು ಹೆಣ್ಣಿನ ವಿವಾಹದ ಮೂಲಕ ಸ್ಥಾಪಿತವಾಗುತ್ತಿದ್ದ ಪವಿತ್ರ ಹಾಗೂ ಅಭೇದ್ಯ ಸಂಬಂಧ ಹಾಗೂ ಅವರು ಅನುಸರಿಸಬೇಕಾದ ಧರ್ಮದ ನಿಯಮಗಳು ಮತ್ತು ಕುಟುಂಬ ಜೀವನ, ಭಾರತೀಯ ದಾರ್ಶನಿಕರ ಅತ್ಯಂತ ಅಮೂಲ್ಯ ಕೊಡುಗೆ"

"ಕುಟುಂಬದ ಮೂಲಕ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿತ್ತು. ಇದಕ್ಕಾಗಿ ಪತಿ ಮತ್ತು ಪತ್ನಿಯರು ಆಚಾರ ಸಂಹಿತೆಯನ್ನು ಅನುಸರಿಸಬೇಕಾಗಿತ್ತು"

ಆದರೆ ಮನುಸ್ಮೃತಿಯ ಶರೀರದಲ್ಲಿ ಎಲ್ಲೆಡೆಯೂ ಮತ್ತೆ ಮತ್ತೆ ವ್ಯಕ್ತವಾಗಿರುವ ಸ್ತ್ರೀಯರನ್ನು ಕೀಳಾಗಿ, ದಾಸಿಯಾಗಿ ಕಾಣುವ, ಸ್ತ್ರೀ ಇರುವುದೇ ಮಕ್ಕಳನ್ನು ಹೆರಲು, ಪಾಲನೆ ಮಾಡಲು, ಪತಿಸೇವೆ ಮಾಡಲು ಎನ್ನುವ ಕುವಿಚಾರಗಳ ಬಗ್ಗೆ, ಆ ಶ್ಲೋಕಗಳ ಬಗ್ಗೆ ಸೊಲ್ಲೆತ್ತುವುದಿಲ್ಲ. ಸ್ತ್ರೀಗೆ ಶಿಕ್ಷಣವನ್ನು, ವೇದ, ಮಂತ್ರಗಳ ಅಧಿಕಾರವನ್ನು, ಆಸ್ತಿಯನ್ನು ವಂಚಿಸಿ ಪೂರ್ಣವಾಗಿ ಪರಾವಲಂಬಿಯಾಗಿ ಮಾಡಿಕೊಂಡಿರುವ ಬಗ್ಗೆ, ಅವಳನ್ನು ಚಂಚಲೆ, ಪಾಪ ಹೇತು, ಪುರುಷರನ್ನು ಕೆಡಿಸಲೆಂದೇ ಹುಟ್ಟಿರುವವಳು ಎಂದು ಘೋಷಿಸಿರುವ ಬಗ್ಗೆ, ಅವಳನ್ನು ವಿಧವೆ ಎಂಬ ನರಕದ ಬಾಳಿಗೆ ತಳ್ಳಿರುವ ಬಗ್ಗೆ, ಗಂಡಿಗೆ ಬಹುವಿವಾಹ ಮಾಡಿಕೊಳ್ಳುವ ಹೆಂಡತಿ ಸತ್ತ ಮೇಲೆ ಪುನರ್ವಿವಾಹ ಮಾಡಿಕೊಳ್ಳುವ ಸ್ವಾತಂತ್ರ್ಯ ನೀಡಿರುವ ಬಗ್ಗೆ ಮಾತನಾಡಲು ಅವರ ಗಂಟಲು ಕಟ್ಟಿ ಹೋಗುತ್ತದೆಯೇ?

ಮನುಸ್ಮೃತಿಯ ಈ ಶ್ಲೋಕ, ಕುವಿಚಾರಗಳನ್ನು ಘಂಟಾಘೋಷವಾಗಿ ಖಂಡಿಸುವ ಮಾತನ್ನಾದರೂ ಆಡಿದ್ದಾರೆಯೇ? ಇಂದಿನ ಸಮಾಜದಲ್ಲಿ ಇಂತಹ ವಿಚಾರಗಳನ್ನು ತೊಡೆಯುತ್ತೇವೆ ಎಂಬ ಪ್ರಯತ್ನವನ್ನು ಕಿಂಚಿತ್ತಾದರೂ ಅವರ ಆರೆಸ್ಸೆಸ್ ಸಹವರ್ತಿಗಳು ಮಾಡಿದ್ದಾರೆಯೇ?

ಮನುಸ್ಮೃತಿಯಲ್ಲಿ ವ್ಯಕ್ತವಾಗಿರುವ ಈ ವಿಚಾರಗಳನ್ನು ಮುಚ್ಚಿಹಾಕಲು ಪ್ರಯತ್ನ ಪಡದೇ 'ಅದು ಇದ್ದ ಹಾಗೆಯೇ ಜನಸಮುದಾಯದ ಮುಂದಿಟ್ಟರೆ ಸಾಕು ಜನಸಮುದಾಯ ಅದರಲ್ಲಿಯೂ ಮಹಿಳಾ ಸಮುದಾಯ ಮನುಸ್ಮೃತಿಗೆ ಯಾವ ಗತಿ ಕಾಣಿಸಬೇಕೆಂಬುದನ್ನು ತಾವೇ ನಿರ್ಧರಿಸುತ್ತಾರೆ. ಆ ದೃಷ್ಟಿಯಿಂದ ಮನುಸ್ಮೃತಿಯ ಶ್ಲೋಕಗಳನ್ನು ಕೆಳಗೆ ವಿವರಿಸಲಾಗಿದೆ.

'ನ ಸ್ತ್ರಿ ಸ್ವಾತಂತ್ರ್ಯ ಮರ್ಹತಿ' ಎಂಬ ಮೊದ ನೀಡಿರುವ ಶ್ಲೋಕದ್ದೇ ಪಡಿಯಚ್ಚು ಎನ್ನ ಶ್ಲೋಕಗಳು, ಅದೇ ವಿಚಾರಗಳು ಅನೆ ಶ್ಲೋಕಗಳಲ್ಲಿವೆ.

ಮನೆಯ ಒಳಗೂ ಸ್ವತಂತ್ರವಾಗಿ ಸ ಕೆಲಸವನ್ನೂ ಮಾಡುವಂತಿಲ್ಲ

ಬಾಲ್ಯೇ ಪಿತುರ್ವಶೇ ತಿಷ್ಠೇತ್ಪಾಣಿಗ್ರಾಹಸ್ಯ ಯೌವ್ವ
ಪುತ್ರಾಣ ಭರ್ತರಿ ಪ್ರೇತೇ ನಭಜೇತ್ ಸ್ತ್ರಿ ಸ್ವತಂತ್ರಾ
- 5 (148)

ಬಾಲ್ಯದಲ್ಲಿ ಸ್ತ್ರೀಯು ತಂದೆಯ ವಶದ ಯೌವ್ವನದಲ್ಲಿ ಗಂಡನ ಅಧೀನದಲ್ಲಿ , ಗಂಡ ನಂತರ ಪುತ್ರರ ಅಧೀನದಲ್ಲಿ ಬಾಳಬೇಕಲ್ಲದೇ ತಾ ಸ್ವತಂತ್ರವಾಗಿ ವ್ಯವಹರಿಸಬಾರದು.

ಬಾಲಯಾ ವಾ ಯುವತ್ಯಾ ವಾ ವೃದ್ಧಯಾವಾ ಯೋಷಿತಾ
ನ ಸ್ವಾತಂತ್ರೇಣ ಕರ್ತವ್ಯಂ ಕಿಂಚಿತ್ಕಾಯಂ ಗೃಹೇಷ್ವ

ಬಾಲಕಿಯಿದ್ದಾಗಲೂ, ಯುವತಿಯಾದಾಗ ವೃದ್ಧೆಯಾದಗಲೂ ಮನೆಯ ಯಾವ ಸಣ್ಣ ಕೆಲಸ ಸ್ವತಂತ್ರವಾಗಿ ಮಾಡಬಾರದು.

ಹೆಂಡತಿಯೆಂಬುವಳು ಗಂಡನ ಆಸ್ತಿ

ಮಂಗಲಾರ್ಥಂ ಸ್ವಸ್ತ್ಯಯನಂ ಯಜ್ಞಶ್ಚಾಸ ಪ್ರಜಾಪತೇ:
ಪ್ರಯುಜ್ಯತೇ ವಿವಾಹೇಷು ಪ್ರದಾನು ಸ್ವಾಮ್ಯ ಕಾರ
- (152)

ವಿವಾಹದಲ್ಲಿ ಸ್ವಸ್ತಿವಾಹನ ಪ್ರಜಾ ಹೋಮ ಇನ್ನು ಮಾಡಿ **ಕನ್ಯಾದಾ ಮಾಡುವುದೆಂದರೆ ಪತಿಗೆ ಅವಳ ಮೆ ಒಡೆತನವನ್ನು, ಅಧಿಕಾರವನ್ನು ನೀಡುವುದು ಎಂ**

ಮತ್ತು ಅನೇಕ ರೀತಿಯಲ್ಲಿ ಇದ ವಿವರಿಸಲಾಗಿದೆ. ಮತ್ತೊಂದು ಶ್ಲೋಕ ಹೇಳುತ್ತ ಮೊದಲು ಬಾಣ ಹೂಡಿ ಮೃಗವನ್ನು ಕೊಂದವ ಅದಕ್ಕೆ ಒಡೆಯನಾಗುವಂತೆ, ಮುಳ್ಳು ಗಿಡಗ ಕಡಿದು ನೆಲವನ್ನು ಸ್ವಚ್ಛ ಮಾಡಿದವನೇ ಒಡೆಯನಾಗುವಂತೆ ವಿವಾಹವಾದವನೇ ಹೆ ಒಡೆಯ - (9(44)).

ಸ್ತ್ರೀ ನಿಬಂಧನಂ

ಉತ್ಪಾದನ ಪತ್ಯಸ್ಯ ಜಾತಸ್ಯ ಪರಿಪಾಲನಂ
ಪ್ರತ್ಯಹಂ ಲೋಕಯಾತ್ರಾಯಾ: ಪ್ರತ್ಯಕ್ಷಂ
ನಿಬಂಧನಂ

ಮಕ್ಕಳನ್ನು ಹೆರುವುದು, ಹೆತ್ತ ಮಕ್ಕ ಸಾಕುವುದು - 9(27), ಸಂತಾನ ಮ ನಿರ್ವಹಿಸುವುದು ಅವಳಿಗೆ ವಿಧಿಸಿದ ನಿಬಂಧನೆ ಜೊತೆಗೆ ಸದಾ ಸಂತೋಷದಿಂದ ಇರ ಗೃಹಕಾರ್ಯಗಳನ್ನು ಮಾಡಬೇಕು. **ಮನೆಯ ಪ ಪಡಗಗಳನ್ನು ಚೆನ್ನಾಗಿ ಉಜ್ಜಿ ಶುದ್ಧವಾಗಿಡಬ** (ಸುಸಂಸ್ಕೃತೋಪಸ್ಕರಯಾ) 5 (150)

ಮದುವೆ ಮಾಡಿಕೊಳ್ಳುವಲ್ಲಿ ತನ್ನದೇ ಎಂಬುದಿಲ್ಲ. ತಂದೆ ಅಥವಾ ಅಣ್ಣ ತನ್ನನ್ನು ಯ ಮದುವೆ ಮಾಡಿಕೊಡುವರೋ ಅ ಶುಶ್ರೂಷೆಯನ್ನು ಮಾಡಬೇಕು. ಸತ್ತ ನಂತ **ಅವನನ್ನು ಉಲ್ಲಂಘಿಸಬಾರದು** (ನಲಂಘಯೆ 5 (151)

ಬೆಂಗಳೂರಿನ ದುಡಿಯುವ ದಲಿತರು, ಅಲ್ಪಸಂಖ್ಯಾತರು, ಬಡವರು ಮುಂತಾದ ಶೋಷಿತ ಸಮುದಾಯ ದ ದನಿಯಾಗಿ ದುಡಿಯುವ ಉದ್ದೇಶದೊಂದಿಗೆ ಮುಂಬರುವ ಮಹಾನಗರ ಪಾಲಿಕೆಯನ್ನು ಒಟ್ಟಾಗಿ ಎದುರಿಸುವ ಗುರಿಯೊಂದಿಗೆ ನಾಗರೀಕ ರಂಗ ಎಂಬ ವೇದಿಕೆ ರೂಪು ತಳೆದಿದೆ.

ನಾಗರೀಕ ರಂಗ ದುಡಿಯುವ ಜನರ ವೇದಿಕೆ

ಕೆ.ಎಸ್.ಶಾರದಾ

ಝುಣ ಝುಣ ಕಾಂಚಾಣದಲ್ಲಿ ಅಮೇರಿಕಾದ ...ಾಂಭನ'ದಲ್ಲಿ ಹಾಡನ್ನು ಹಾಡುವುದರ ಮೂಲಕ ಸಮಾವೇಶಕ್ಕೆ ಮೆರಗನ್ನು ನೀಡಿದರು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು.

ಸಮಾವೇಶದ ಪ್ರಾಸ್ತಾವಿಕ ನುಡಿಗಳನ್ನು ನುಡಿದ ...ಾಂ.ಕೆ.ಪ್ರಕಾಶ್ ಎ1 ಸಿಟಿ ಎನಿಸಿಕೊಂಡಿರುವ ಈ ಬೆಂಗಳೂರಿನ ನಿರ್ಮಾಣಕ್ಕೆ ಕಾರ್ಯಕರ್ತರ ...ಶ್ರಮವನ್ನು ಮರೆಮಾಚಿ ಹುಸಿ ನಿರ್ಮಾಣಕಾರರನ್ನು ಸೃಷ್ಟಿ ಮಾಡುತ್ತಿದ್ದಾರೆ. ವಿವಿಧ ಜನಸಮುದಾಯ ...ವಾಸವಾಗಿರುವ ಈ ಬೃಹತ್ ಬೆಂಗಳೂರಿನಲ್ಲಿ ಎಲ್ಲಾ ಸೌಲಭ್ಯಗಳು ಎಲ್ಲರಿಗೂ ಸಿಗುತ್ತಿಲ್ಲ. ಶೇ.20 ರಷ್ಟು ಜನ ಶೇ.63ರಷ್ಟು ಸೌಲಭ್ಯವನ್ನು ...ಳಸುತ್ತಿದ್ದಾರೆ. ಮೇಲ್‌ಸ್ತರದ ಶೇ.80 ರಷ್ಟು ...ಳಸ್ತರದ ಜನರುಗಳೇ 1 ರಷ್ಟು ಮಾತ್ರ ಸೌಲಭ್ಯ ...ಗುತ್ತಿದೆ. ಬಿಬಿಎಂಪಿ ಎಂಬುದು ಕೆಲವೇ ಜನರ ...ೊತ್ತಾಗುತ್ತಿದೆ. ಬಹುಸಂಖ್ಯಾತ ಬೆಂಗಳೂರು ಜನರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದೇ ನಾಗರೀಕ ರಂಗದ ಉದ್ದೇಶ ಎಂದರು.

...ಎನ್.ಸಿ.ಗಳ ಬೆಂಗಳೂರು ಮಾಡಲು: ಕೋಮುಭಾವನೆ, ಜಾತಿಭಾವನೆ ಬಡಿದೆಬ್ಬಿಸಿ, ...ಮಿಷವೊಡ್ಡಿ ಗೆದ್ದು ಅಧಿಕಾರಕ್ಕೆ ಬಂದ ಬಿಜೆಪಿ, ...ಬಿಎಂಪಿಯ ಆಡಳಿತವನ್ನು ತನ್ನ ತೆಕ್ಕೆಗೆ ...ಗೆದುಕೊಳ್ಳಲು ಎಲ್ಲಾ ರೀತಿಯ ...ತಂತ್ರಗಳನ್ನು ರೂಪಿಸುತ್ತಿದೆ.

ಯಡಿಯೂರಪ್ಪ, ಪ್ರಮಿಳಾ ನೈಸರ್ಗಿ ...ಬ್ಬರೂ ತಿರುವಳ್ಳುವರ್ ಪ್ರತಿಮೆ ...ಗಬಾರದು ಅಂತ ತಡೆತರಲು ಅಂದು ...ುಂದಾಗಿದ್ದರು. ಆದರೆ ಈಗ ...ಡಿಯೂರಪ್ಪ ತಿರುವಳ್ಳುವರ್ ...ತಿಮೆಗೆ ಆಸಕ್ತಿ ತೋರಿದ್ದರು. ಅಂದ್ರೆ ...ವರ ಹಿಂದೆ ತಮಿಳು ಬಾಂಧವರ ...ಾವನೆಗಳನ್ನು ರಾಜಕೀಯವಾಗಿ ...ಕ್ಯಾಶ್ ಮಾಡಿಕೊಳ್ಳುವ ಹುನ್ನಾರವಿದೆ ...ಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ...ಜೆಪಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ...ರಾಷ್ಟ್ರೀಯ ಕಂಪನಿಗಳ ಬೆಂಗಳೂರು ...ಹಾನಗರ ಪಾಲಿಕೆಯಾಗಿ ಮಾಡಲು ಹೊರಟಿದೆ. ...ಂಗಳೂರನ್ನು ನಿರ್ಮಿಸಿದ ಬೃಹತ್ ನಾಗರೀಕರ ...ಹಾನಗರ ಪಾಲಿಕೆಯಾಗಿ ಮಾಡಲು ...ಗರೀಕರಂಗ ಸಜ್ಜಾಗಿ ಹೊರಟಿದೆ. ಬೆಂಗಳೂರು ...ಹಾನಗರ ಪಾಲಿಕೆ ನಾಗರೀಕರ ಪಾಲಿಕೆ ...ಬೇಕು. ಶೋಷಿತ ಜನಸಮುದಾಯದ ಪಾಲಿಕೆ ...ಬೇಕು. ಕಾರ್ಮಿಕರ, ಜನಸಾಮಾನ್ಯರ ಪಾಲಿಕೆ ...ಬೇಕು. ಎಂಬುದು ನಾಗರೀಕ ರಂಗದ ಉದ್ದೇಶ ...ದು ಆರ್.ಪಿ.ಐ ನ ವೆಂಕಟಸ್ವಾಮಿ ಹೇಳಿದರು.

...ವೃದ್ಧಿ ಆಗಬೇಕು...ಆದರೆ..

... ಮೆಟ್ರೋ ಬರ್ತಿದೆ, ನಾವು ಬೇಡ ಅನ್ನುವುದಿಲ್ಲ. ...ನಗರ ಅಭಿವೃದ್ಧಿ ಆಗಬೇಕು. ಆದರೆ ಅಭಿವೃದ್ಧಿ ...ರಿನಲ್ಲಿ ಸ್ಲಂ ಜನರನ್ನು ಒಕ್ಕಲೆಬ್ಬಿಸುವ, ರೈತರಿಗೆ ... ಕುಡಿಸುವ ಅಭಿವೃದ್ಧಿ ನಮಗೆ ಬೇಡ. ಕಡೆಯೇ ...ುತ್ತಿದೆ. ಮೆಟ್ರೋ ಬಡಜನ, ಸ್ಲಂ ಜನ ವಾಸಿಸುವ ...ಯೇ ಹೆಚ್ಚು ಬರ್ತಿದೆ. ಅದರ ಹೆಸರಿನಲ್ಲಿ ...ಜನರನ್ನು ಎತ್ತಂಗಡಿ ಮಾಡ್ತಿರೋದನ್ನ ನಾವು ...ೋಧಿಸುತ್ತೇವೆ. ವಿಶ್ವ ಬ್ಯಾಂಕಿನಿಂದ ಸಾಲ ತಂದು, ಅದರ ಶೂಲವನ್ನು ಬಡಜನರ ಮೇಲೆ ಹೊರಿಸುತ್ತಿದ್ದಾರೆ.

ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೂ ಸ್ವಾಯತ್ತತೆ ನೀಡಿ, ಪ್ರತಿಯೊಂದಷ್ಟು ದುಡ್ಡು, ದುಡ್ಡು ಕೊಡದೆ ಆರೋಗ್ಯ ಇಲ್ಲ ಎಂಬಂತೆ ಮಾಡ್ತಿದ್ದಾರೆ. ದಲಿತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣ ಬೇರೆ ಯಾವುದಕ್ಕೋ ಪೋಲಾಗುತ್ತಿದೆ. ಉದ್ಯೋಗವನ್ನರಸಿ ಕೊಂಡು ಬರ ಪರಿಸ್ಥಿತಿಯಿಂದಾಗಿ ಕಾರ್ಮಿಕರು, ರೈತರು ಬೆಂಗಳೂರಿಗೆ ಗುಳೆ ಬರುತ್ತಿದ್ದಾರೆ. ಅವರಿಗೆ



ಸರಿಯಾದ ಸೌಲಭ್ಯ ಕಲ್ಪಿಸದೆ ಅವರು ವಾಸಿಸುತ್ತಿರುವ ಪ್ರದೇಶದಿಂದ ಅವರನ್ನು ಹೊರಗೆಲ್ಲೋ ಎಸೆಯುವುದರ ಬಗ್ಗೆ ನಾವು ಪ್ರಶ್ನಿಸಬೇಕಾಗಿದೆ. ರಾಷ್ಟ್ರೀಕರಣದ ವಿರುದ್ಧ ಬರುತ್ತಿರುವ ಖಾಸಗೀಕರಣದ ಬಗ್ಗೆ ಜನಸಾಮಾನ್ಯರು ಗಂಭೀರವಾಗಿ ಚಿಂತಿಸಬೇಕು. ವಲಯಗಳಲ್ಲಿ 200 ವಾರ್ಡುಗಳಲ್ಲಿ ನಾಗರೀಕ ರಂಗದ ಕಾರ್ಯಕರ್ತರು ಯೋಧರ ರೀತಿಯಲ್ಲಿ ಜನರ ಮಧ್ಯೆ ರಂಗದ ಕಾರ್ಯಸೂಚಿಯನ್ನು ಕೊಂಡೊಯ್ಯಬೇಕು ಎಂದು ದಲಿತ ಸಂಘ ಸಮಿತಿ (ಅಂಬೇಡ್ಕರ್ ವಾದ) ದ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದರು.

ವಿಧಾನಸಭೆಯಲ್ಲಿರುವ ಅನಾಗರೀಕರು ಬಿ.ಬಿ.ಎಂ.ಪಿ.ಗೂ ಬರದಿರುವಂತೆ ತಡೆಯಬೇಕು

ಬೆಂಗಳೂರನ್ನು ಶ್ರಮಿಕ ಜನರನ್ನು ಹೊರದೂಡಿ ಸಿಂಗಪುರ ಮಾಡಲು ಹೊರಟಿದ್ದಾರೆ. ರಸ್ತೆ ಅಗಲೀಕರಣ ಮಾಡುವುದರಿಂದ ದೊಡ್ಡ ದೊಡ್ಡ ಕಟ್ಟಡ ಬಂದ್ರೆ ಬೆಂಗಳೂರು ಸಿಂಗಾಪುರ ಆಗುವುದಿಲ್ಲ ಬೆಂಗಳೂರು ನಗರವನ್ನು ಸ್ವಚ್ಛವಾಗಿಡುವ ಶ್ರಮಿಕ ಜನರನ್ನು ಬೆಂಗಳೂರಿನಿಂದ ದೂರ ಅಟ್ಟಿದರೆ ಸಿಂಗಪುರ ಆಗುತ್ತದೆಯೇ? ಎಂದು ಅವರು ಪ್ರಶ್ನಿಸಿದರು.

ಆಸ್ಪತ್ರೆ, ವೈದ್ಯಕೀಯ ಸೌಲಭ್ಯ, ಶಿಕ್ಷಣ ಎಲ್ಲದರ ಅವಕಾಶ ಎಲ್ಲರಿಗೂ ಇಡೀ ಪ್ರದೇಶದ ಜನರ ಅಭಿವೃದ್ಧಿಗಾಗಿ ನಮ್ಮ ಹೋರಾಟ ಎಂದು ಎಐಎಡಿಎಂಕೆ ಪಕ್ಷದ ರಾಜ್ಯ ಮುಖಂಡರಾದ ಕೃಷ್ಣಂರಾಜು ಹೇಳಿದರು.

ಹಸಿವನುಂಡ ಜನ ಒಂದಾಗಬೇಕು: ಹಸಿವನುಂಡ ಬಡವರು, ದಲಿತರು, ದುಡಿಯುವ ಜನರು, ಅಲ್ಪಸಂಖ್ಯಾತರು, ನಾಗರೀಕರು ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತವನ್ನು ಕೈಗೆತ್ತಿಕೊಳ್ಳಬೇಕು ಎಂಬುದೇ ರಂಗದ ಉದ್ದೇಶ. ಸೂರಿಲ್ಲದ ಜನ, ಹಸಿದ ಜನ ಎಲ್ಲರೂ ಸೇರಿ ಓಟು ಹಾಕಿದರೆ ನಾಗರೀಕ ರಂಗದ ಅಭ್ಯರ್ಥಿಗಳು ಗೆಲ್ಲುತ್ತಾರೆ. ಹಸಿವೆಗೆ ಜಾತಿ ಇಲ್ಲ, ಭಾಷೆ ಇಲ್ಲ, ಹಸಿವೊಂದೇ ಸಂಪತ್ತು. ಹಸಿವುಂಡ ಜನ ನಾವು ಒಟ್ಟಾದರೆ ನಮಗೆ ಗೆಲುವು ಎಂದು ಪ್ರಜಾ ವಿಮೋಚನಾ ಚಳುವಳಿಯ ಪಟಾಪಟ್ ನಾಘರಾಜ್ ಹೇಳಿದರು.

ಮಾಫಿಯಾ ಮಟ್ಟಹಾಕಿ

ಭೂಮಾಫಿಯಾಗಳನ್ನು, ಗಣಿ ದೊರೆಗಳನ್ನು ಅಧಿಕಾರದಿಂದ ಹೊರಹಾಕಬೇಕು. ಬಿಜೆಪಿಯವರು ಮಹಾನಗರ ಪಾಲಿಕೆಯನ್ನು ವಶಪಡಿಸಿಕೊಳ್ಳಲು ತಮಗೆ ಅನುಕೂಲವಾದಂತೆ ರಿಸರ್ವೇಶನ್ ತರ್ತಾ ಇದ್ದಾರೆ. ಮತದಾರರು ನಮಗೆ ಯಾರು ನಿಜವಾಗಲೂ ಒಳ್ಳೆಯದು ಮಾಡ್ತಾರೆ ಎಂಬುದನ್ನು ಅರ್ಥ ಮಾಡಿಕೊಂಡು, ಹೋರಾಟಗಾರರನ್ನು ಆರಿಸಿ ತರಬೇಕು.

ಕ್ರಿಶ್ಚಿಯನ್, ಹಿಂದೂ, ಮುಸ್ಲಿಂ ಎಲ್ಲರೂ ಒಟ್ಟಾಗಿ ತಾವು ವಾಸಿಸುವ ಪ್ರದೇಶಗಳಲ್ಲಿ ಸಮಿತಿ ಮಾಡಿಕೊಂಡು ಸಮಸ್ಯೆಗೆ ಹೋರಾಟ ಮಾಡಬೇಕು. ಇಲ್ಲದಿದ್ದರೆ (ರೊಯಟ್) ಗಲಾಟೆ ಮಾಡ್ಸಿ, ನಮ್ಮ ನಡುವೆ ಕಿಚ್ಚೆಬ್ಬಿಸಿ ಅವರು ರಾಜಕೀಯ ಮಾಡ್ತಾರೆ ಎಂದು ಟಿಪ್ಪು ಸಂಯುಕ್ತ ರಂಗದ ಸರ್ದಾರ್ ಮಹಮದ್ ಖುರೇಷಿ ಹೇಳಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿಕೊಂಡಿದ್ದ ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಕಾಂ.ಸಿದ್ದನಗೌಡ ಪಾಟೀಲ್ ಮಾತನಾಡಿ ಎಸ್.ಎಂ.ಕೃಷ್ಣ ಅವರು ಬೆಂಗಳೂರನ್ನು ಸಿಂಗಾಪುರ ಮಾಡಲು ಹೊರಟಿದ್ರು. ಅವರ ನಂತರ ಜೆ.ಡಿ (ಎಸ್)ನವರು, ಈಗ ಬಿಜೆಪಿಯವರು.

ಬಡವರ ನಗರ ಪಾಲಿಕೆಯಾಗಲಿ:

41 ಸಾವಿರ ಎಕರೆ ಭೂಮಿಯನ್ನು ಬಿಜೆಪಿಯವರು ಭೂಮಾಫಿಯಾಗಳಿಗೆ ಗಣಿ ದೊರೆಗಳಿಗೆ ಮಾರಾಟ ಮಾಡಲು ಹೊರಟಿದ್ದಾರೆ. ಬೆಂಗಳೂರಿನ ಮೂಲಸ್ಥಳಕ್ಕೆ ಇವತ್ತು ಬೆಲೆ ಬಂದಿರುವುದರಿಂದ ಬೆಂಗಳೂರು ಬಹುರಾಷ್ಟ್ರೀಯ ಮಹಾನಗರ ಪಾಲಿಕೆಯನ್ನಾಗಿ ಮಾಡಲು ಹವಣಿಸುತ್ತಿದ್ದಾರೆ. ಬೆಂಗಳೂರು ಬಡವರ ಮಹಾನಗರ ಪಾಲಿಕೆ ಆಗಬೇಕು ಎಂಬುದು ನಾಗರೀಕ ರಂಗದ ಆಶಯ. ನಾಗರೀಕ ರಂಗ ದುಡಿಯುವ ಜನರ ವೇದಿಕೆ. ಬೆಂಗಳೂರಿನಲ್ಲಿ ಶೇ.80 ರಷ್ಟು ಜನ ವಾಸಿಸುತ್ತಿದ್ದಾರೆ. ಆದರೆ ಅವರಿಗೆ ರಾಜಕೀಯ ಶಕ್ತಿಯಿಲ್ಲ.

ಬಿಜೆಪಿಯವರು ಮುಸ್ಲೀಮರಿಗೆ ಹೊಡೆದ್ರೆ, ಕಾಂಗ್ರೆಸ್, ದಳಕ್ಕೆ ಮುಸ್ಲೀಮರು ಓಟು ಹಾಕ್ತಾರೆ ಅಂತ ಕಾಂಗ್ರೆಸ್, ಜೆಡಿ(ಎಸ್)ನ ಲೆಕ್ಕಾಚಾರ. ಹಾಗಾಗಿ ಅಲ್ಪಸಂಖ್ಯಾತರಲ್ಲಿರುವ ಭ್ರಮೆಯನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಇವರು ಹವಣಿಸುತ್ತಾರೆ.

ಬೆಂಗಳೂರು ನಗರದಲ್ಲಿ ಎಲ್ಲೂ ಒಂದೇ ಒಂದು ಕೋಮುಗಲಭೆ ಆಗದಿರುವ ಹಾಗೆ, ಜಾತಿ, ಭಾಷೆ ಹೆಸರಿನಲ್ಲಿ ರಕ್ತಪಾತ ಆಗುವುದನ್ನು ತಡೆಗಟ್ಟುವ ಜವಾಬ್ದಾರಿ ನಾಗರೀಕ ರಂಗದ್ದು. ಸರ್ಕಾರಕ್ಕೆ ಎಚ್ಚರಿಕೆ ಕೊಡುವ ಕೆಲಸವೂ ರಂಗದ ಕೆಲಸ ಎಂದು ಪಾಟೀಲರು ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್ ಸೇರಿದಂತೆ ಹಲವರು ಮುಖಂಡರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಕಟ್ಟುತ್ತೇವೆ ನಾವು ಕಟ್ಟುತರ್ತೇವ ನಾವು ಎಂಬ ಕ್ರಾಂತಿಗೀತೆಯೊಂದಿಗೆ ಈ ವಿಶಿಷ್ಟ ಸಮಾವೇಶ ಮುಕ್ತಾಯಗೊಂಡಿತು.

ಗುಲಬರ್ಗಾದಲ್ಲಿ ಸಂಪುಟ ಸಭೆ

ಪುಟ 3 ರಿಂದ

ಆಹಾರಧಾನ್ಯಗಳ ಪೂರೈಕೆ ಪ್ರಸ್ತಾಪಕ್ಕೆ ಬರಲೇ ಇಲ್ಲ.

ಬೋರ್‌ವೆಲ್ ಕೊರೆತ, ಕೆರೆಗಳ ದುರಸ್ತಿ, ಸಣ್ಣ ನೀರಾವರಿ, ಕಟ್ಟಡ ನಿರ್ಮಾಣ, ಕಾಮಗಾರಿ ಆಸ್ಪತ್ರೆ, ಪ್ರವಾಸ ಇತ್ಯಾದಿಗಳನ್ನೊಳಗೊಂಡ ಪ್ರಕಟಿತ ಯೋಜನೆಗೆ 900 ಕೋಟಿ ಎಂದು ಹೇಳಿದರೂ ಇವುಗಳ ಅನುಷ್ಠಾನಕ್ಕೆ ಅಗತ್ಯವಿರುವ ವ್ಯವಸ್ಥೆ ವಿಧಾನಗಳನ್ನು ರೂಪಿಸದಿರುವುದು ಜಾರಿಯ ಬಗ್ಗೆಯೇ ಅನುಮಾನ ಹುಟ್ಟಿಸುತ್ತದೆ. ಯಾಕೆಂದರೆ ಕಳೆದ ವರ್ಷದಲ್ಲಿ ಪ್ರಕಟಿತ ಯೋಜನೆಗಳು ಜಾರಿಯಾಗದೇ ಇನ್ನೂ ಹಾಗೇ ಉಳಿದಿವೆ. ಯಾದಗಿರಿಯನ್ನು ಜಿಲ್ಲೆಯಾಗಿಸುವ ನಿರ್ಧಾರ ಪ್ರಕಟಿಸಿದ್ದರೂ ಈಗ ದಿನಾಂಕ ಘೋಷಿತವಾಗಿದೆ. ಕಳೆದ ವರ್ಷ 2345 ಕೋಟಿ ಹಣವನ್ನು ಅಭಿವೃದ್ಧಿಗೆಂದು ಪ್ರಕಟಿಸಿದರೂ ಬಿಡುಗಡೆಯಾದದ್ದು 200 ಕೋಟಿ ಮಾತ್ರ. ಯಡಿಯೂರಪ್ಪನವರ ಸರ್ಕಾರದ 'ಅಭಿವೃದ್ಧಿಯ' ನಾಟಕ ಇದರಿಂದಲೇ ಅರ್ಥವಾಗುತ್ತದೆ.

ಮಂಗಳೂರು ಜಿಲ್ಲಾ ಪಂಚಾಯತ್ ಚುನಾವಣೆ :

ಮುಂದುವರೆದ ಆಪರೇಷನ್ ಕಮಲದ ಅನೈತಿಕತೆ

■ ವಸಂತ ಆಚಾರಿ

ಕಾಂಗ್ರೆಸ್‌ನ ಕೋಟೆ ಎಂದೇ ಕರೆಸಿಕೊಳ್ಳುತ್ತಿದ್ದ ದ.ಜಿಲ್ಲೆ ಈಗ ಕಾಂಗ್ರೆಸ್‌ನ ಹಿಡಿತ ಕಳೆದುಕೊಳ್ಳುತ್ತಿದೆ. ಈ ಬಾರಿ ಲೋಕಸಭಾ ಚುನಾವಣೆಯನ್ನು ಕಾಂಗ್ರೆಸ್ ಅಭ್ಯರ್ಥಿ ಬಿ.ಜನಾರ್ಧನ ಪೂಜಾರಿ ಗೆಲ್ಲಲಿದ್ದಾರೆ. ಯಾಕೆಂದರೆ ಅವರು ಸರ್ವಾನುಮತದ ಅಭ್ಯರ್ಥಿ ಎಂದು ಕಾಂಗ್ರೆಸ್ ಪ್ರಚಾರ ನೀಡಿತು. ಆದರೆ ಈ ಬಾರಿ ಕೂಡಾ ಮಂಗಳೂರು ಕ್ಷೇತ್ರವನ್ನು ಬಿಜೆಪಿಯ ದುರ್ಬಲ ಅಭ್ಯರ್ಥಿಗೆ ಬಿಟ್ಟುಕೊಟ್ಟಿತು. ಬೇಕಾದಷ್ಟು ಸದಸ್ಯ ಬಲವಿದ್ದರೂ ತಮ್ಮ ಸದಸ್ಯರನ್ನು ಧೋರಣೆಗಾಗಿ ಹದ್ದುಬಸ್ತಿನಲ್ಲಿಡಲು ವಿಫಲವಾಗಿ ದ.ಕ.ಜಿ.ಪಂ. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳನ್ನು ಬಿಜೆಪಿ ಪರ ಬಿಟ್ಟುಕೊಟ್ಟಿದೆ. ಕಾಂಗ್ರೆಸ್, ಜೆಡಿ(ಎಸ್)ನ ಅಧಿಕಾರ ಲಾಲಾಸಿತನ ತನ್ನ ಸದಸ್ಯರನ್ನು ತಪ್ಪಾದ ದಾರಿಗೆ ಕೊಂಡೊಯ್ದಿದೆ. ಅಧಿಕಾರಕ್ಕಾಗಿ ಬಿಜೆಪಿಯೊಂದಿಗೆ ಕೈಜೋಡಿಸುವುದು, ಒಳಸಂಚು ರೂಪಿಸುವುದು ವಾಡಿಕೆಯಾಗಿದೆ. ಇದರ ಲಾಭವನ್ನು ಬಿಜೆಪಿ ಸರಿಯಾಗಿ ಉಪಯೋಗಿಸುತ್ತಿದೆ. ಜಿಲ್ಲಾ ಕಾಂಗ್ರೆಸ್ ನಾಯಕತ್ವ ಇಂಗುತಿಂದ ಮಂಗನಂತೆ ಕಂಗಾಲಾಗಿ ಕೈಚೆಲ್ಲುತ್ತಿದೆ. ಜೆಡಿ(ಎಸ್) ಕೂಡಾ ಇದೇ ದಾರಿಯಲ್ಲಿ ಇದೆ. ಪಕ್ಷದ ಅಧಿಕೃತ ಅಭ್ಯರ್ಥಿಯ ವಿರುದ್ಧ ಸ್ಪರ್ಧಿಸಿ ಕಾಂಗ್ರೆಸಿನ (ಬಂಡುಕೋರ ಬಿಜೆಪಿ ಬೆಂಬಲಿತ) ಅಭ್ಯರ್ಥಿ ಗೆದ್ದು ಜಿ.ಪಂ. ಅಧ್ಯಕ್ಷಗಾದಿಗೆ ಆಯ್ಕೆಯಾಗಿ ಬಿಜೆಪಿ ತನ್ನ ರಾಜಕೀಯ ತಂತ್ರಗಾರಿಕೆಯಿಂದ ಕಾಂಗ್ರೆಸ್‌ಗೆ ಮಣ್ಣು ಮುಕ್ಕಿಸಿದೆ.

ಆಗಸ್ಟ್ 25 ರಂದು ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ನಡೆಯಿತು. 35 ಮಂದಿ ಸದಸ್ಯ ಬಲದ ದ.ಕ. ಜಿ.ಪಂ.ನಲ್ಲಿ ಬಿಜೆಪಿ ಎಲ್ಲಾ 15 ಮಂದಿ, ಜೆಡಿ(ಎಸ್)ನ ಇಬ್ಬರು (ಸುಚರಿತ ಶೆಟ್ಟಿ ಮತ್ತು ರಾಜಶ್ರೀ ಹೆಗ್ಡೆ) ಮತ್ತು ಕಾಂಗ್ರೆಸ್ ಸದಸ್ಯ ಸದಾನಂದ ಮಲ್ಲಿ ಸಹಿತ ಒಟ್ಟು 19 ಸದಸ್ಯ ಬೆಂಬಲ ಪಡೆದ ಸಂತೋಷ್‌ಕುಮಾರ್ ಭಂಡಾರಿ, 15 ಮಂದಿ ಸದಸ್ಯರ ಬೆಂಬಲ ಪಡೆದ ಕಾಂಗ್ರೆಸ್‌ನ ಸುಂದರಗೌಡರನ್ನು ಸೋಲಿಸಿದರು. ಅಷ್ಟೇ ಸದಸ್ಯರ ಬೆಂಬಲ ಪಡೆದ ಬಿಜೆಪಿಯ ಹೆಚ್.ಜಗನ್ನಾಥ ಸಾಲಿಯಾನ್ ಕಾಂಗ್ರೆಸ್‌ನ ಚಂದ್ರಶೇಖರ ಕಾಮತ್ ವಿರುದ್ಧ ಆಯ್ಕೆಯಾದರು. ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ವೇಳೆ ಜೆಡಿಎಸ್ ಸದಸ್ಯರ ಪೈಕಿ ಧರಣೇಂದ್ರಕುಮಾರ್ ಮತ್ತು ಬಾಬು ಮುಗೇರ ಕಾಂಗ್ರೆಸ್ ಅಭ್ಯರ್ಥಿಪರ ಬೆಂಬಲ ವ್ಯಕ್ತಪಡಿಸಿದರೂ ಬಿಜೆಪಿ ಪರ ತಟಸ್ಥರಾಗಿ ಉಳಿದರು. ಇನ್ನೊಬ್ಬ ಸದಸ್ಯ ಅಜೀಜ್ ಮುಲಾರ್ ಗೈರು ಹಾಜರಾದರು.



ಜಿ.ಪಂ. ಅಧ್ಯಕ್ಷರಾಗಿ ಆಯ್ಕೆಯಾದ ಸಂತೋಷ್ ಕುಮಾರ್ ಭಂಡಾರಿ 'ನಾನು ದ.ಕ. ಜಿ.ಪ. ಸದಸ್ಯನಾಗಿ ಆಯ್ಕೆಯಾಗಿದ್ದು ಕಾಂಗ್ರೆಸ್ಸಿನಿಂದ. ಆದರೆ ನನ್ನ ಹೃದಯ ಮಾತ್ರ ಬಿಜೆಪಿಯಲ್ಲಿ ಇದೆ' ಎನ್ನುವುದರ ಮುಖಾಂತರ ಕಾಂಗ್ರೆಸ್ ಬೆಳೆಸಿಕೊಂಡು ಬಂದ ಸಂಸ್ಕೃತಿಯನ್ನು ಜಗಜ್ಜಾಹೀರುಗೊಳಿಸಿದರು.

ಪಾಠ ಕಲಿಯದ ಕಾಂಗ್ರೆಸ್ :

ಈ ರೀತಿ ತನ್ನ ಕಾಲ ಬುಡವೇ ಕುಸಿಯುತ್ತಿದ್ದರೂ ಕಾಂಗ್ರೆಸ್ ನಾಯಕತ್ವ ಪಾಠ ಕಲಿಯುತ್ತಿಲ್ಲ. ಬಿಜೆಪಿಯ ಸಿದ್ಧಾಂತವನ್ನು ಸೈದ್ಧಾಂತಿಕವಾಗಿ, ಪ್ರಾಯೋಗಿಕವಾಗಿ ಎದುರಿಸದೆ ಬಿಜೆಪಿಯ ನಾಯಕರೊಂದಿಗೆ ಸುಖಸಂಸಾರ ನಡೆಸುತ್ತಾ, ಸಂಘ ಪರಿವಾರದ 'ಹಿಂದುತ್ವದ' ಹಲವಾರು ವೇದಿಕೆಯನ್ನು ಹಂಚಿಕೊಳ್ಳುತ್ತಾ ಬಲಿಷ್ಠ ಜಾತ್ಯಾತೀತ ಪಕ್ಷವೆಂದು ಬರೀ ಬೀಗುತ್ತಾ ಜಾತಿ ಸಂಘಟನೆಗಳಲ್ಲಿ ಹಿಂದುತ್ವವಾದಿಗಳೊಂದಿ
ಅಧಿಕಾರ ಹಂಚಿಕೊಳ್ಳುತ್ತಿರುವ ಕಾಂಗ್ರೆಸ್ ನಾಯಕರ
ಕಾಂಗ್ರೆಸ್ ಪಕ್ಷವನ್ನು 'ಆಪರೇಶನ್ ಕಮಲ'ದ
ಅಗತ್ಯನೇ ಇಲ್ಲದೇನೇ ಬಿಜೆಪಿಯ ತೆಕ್ಕೆಗೆ ಧಾ
ಎರೆಯುತ್ತಿದ್ದಾರೆ.

ಜೆಡಿ(ಎಸ್) ಬಿಜೆಪಿಯ 'ಬಿ' ಟೀಮ್

ರಾಜ್ಯ ನಾಯಕತ್ವಕ್ಕೆ ಜೆಡಿ(ಎಸ್) ಜಿಲ್ಲಾ
ನಾಯಕತ್ವದ ಮೇಲೆ ನಿಯಂತ್ರಣವೇ ಇಲ್ಲ
ಅಮರನಾಥ ಶೆಟ್ರು ತೋರಿಕೆಗೆ ಮಾತ್ರ ಜೆಡಿ(ಎಸ್
ಅವರು ಮತ್ತು ಅವರ ಇತರ ಸಹಚರರು ಈಗಾಗಲ
ಎಲ್ಲಾ ಚುನಾವಣೆಗಳಲ್ಲಿ ಬಿಜೆಪಿಯೊಂದಿ
ಕೈಜೋಡಿಸಿದ್ದಾರೆ. ಧೋರಣೆಯೇ ಇಲ್ಲ
ಜೆಡಿ(ಎಸ್)ಗೆ ಧೋರಣೆಯ ಅಗತ್ಯವೇ ಇಲ್ಲ
ಜೆಡಿ(ಎಸ್)ನ ಜಿಲ್ಲಾ ನಾಯಕರು ಬಿಜೆಪಿ ಆಡಿಸಿದಂ
ಕುಣಿಯುತ್ತಿರುವುದೇ ಇವರ ರಾಜಕೀಯ
ಕೆಲಸವಾಗಿದೆ. ಕಾಂಗ್ರೆಸ್ ಮತ್ತು ಜೆಡಿ(ಎಸ್
ನೊಳಗಡೆ ಬಿಜೆಪಿಯ ಪರವಾಗಿ ನಿರಂತರ ಕೆಲ
ಮಾಡುವ ನಾಯಕರುಗಳಿದ್ದರೂ ಕಾಂಗ್ರೆಸ್
ಜೆಡಿ(ಎಸ್) ನಾಯಕತ್ವ ಅಸಹಾಯಕರಾಗಿ ಕೈಕ
ಕುಳಿತಿರುವುದು ದುರಂತ.

ದ.ಕ. ಜಿಲ್ಲೆಯ ಜಾತ್ಯಾತೀತ ಒಲವಿರುವ ಜನ
ಕಾಂಗ್ರೆಸ್, ಜೆಡಿ(ಎಸ್) ದಾರಿ ತಪ್ಪುತ್ತಿರುವುದ
ಕ್ಷಮಿಸುವುದರ ಬದಲಾಗಿ, ಪರ್ಯಾಯ ಶಕ್ತಿಯ
ಒಲವು ಮೂಡಿಸಬೇಕಾಗಿದೆ. ಹಿಂದುಳಿದ ಜನ
ಅಲ್ಪಸಂಖ್ಯಾತರ, ಬಡವರ, ರೈತರ ಪರ ನಿರಂತ
ಹೋರಾಟ ನಡೆಸುವ ಜಾತ್ಯಾತೀತ ಕೂಟಗಳ
ಅಣಿನೆರೆಯಬೇಕಾಗಿದೆ. ದುಡಿಯುವ ವರ್ಗ
ಹೋರಾಟ ಜಿಲ್ಲೆಯ ರಾಜಕೀಯ ಚಿತ್ರ
ಬದಲಿಸಬೇಕಾಗಿದೆ.

ಕಟ್ಟಡ, ನಿರ್ಮಾಣ ಕಾರ್ಮಿಕರ ಬೇಡಿಕೆಗಳಿಗೆ ಕೇಂದ್ರ ಸರ್ಕಾರ ಸ್ಪಂದಿಸಲಿ

ಬಿ.ಮಾಧವ

ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಅಖಿಲ ಭಾರತ ಮಟ್ಟದ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಸೆಪ್ಟೆಂಬರ್ 3, ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪ್ರತಿಭಟನಾಕಾರರನ್ನು ದ್ದೇಶಿಸಿ ಫೆಡರೇಷನ್‌ನ ಅಧ್ಯಕ್ಷರಾದ ಬಿ.ಮಾಧವರವರು ಮಾತನಾಡಿದರು.

1996 ಕಟ್ಟಡ ಕಾರ್ಮಿಕರ ಕಾನೂನನ್ನು ಎಲ್ಲಾರಾಜ್ಯಗಳಲ್ಲೂ ಹಾಗೂ ಕೇಂದ್ರ ಆಡಳಿತ ಪ್ರದೇಶಗಳಲ್ಲೂ ಜಾರಿಗೊಳಿಸಬೇಕು, ರಾಷ್ಟ್ರೀಯ ಸ್ವಸ್ತಿ ಭೀಮಾ ಯೋಜನೆಯನ್ನು ದೇಶಾದ್ಯಂತ ಎಲ್ಲಾ ಕಟ್ಟಡ ಕಾರ್ಮಿಕರಿಗೂ ಅನ್ವಯಿಸುವಂತೆ ಜಾರಿಗೊಳಿಸಿ, ಅವರ ಕುಟುಂಬದ ಆರೋಗ್ಯ ಕಾಪಾಡಬೇಕು, ಮೂಲಭೂತ ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಹಣವನ್ನು ಹೂಡಿಕೆ ಮಾಡಬೇಕು, ವಿವಿಧ ದೇಶಗಳಲ್ಲಿನ ಜೈಲಿನಲ್ಲಿರುವ 3846 ವಲಸೆ ಕಟ್ಟಡ ಕಾರ್ಮಿಕರನ್ನು ಬಿಡುಗಡೆಗೆ ತಕ್ಷಣ ಕ್ರಮವಹಿಸಬೇಕು, ಅಸಂಘಟಿತ ವಲಯದ ಕಾರ್ಮಿಕರಿಗಾಗಿ ತಂದಿರುವ ಸಾಮಾಜಿಕ ಭದ್ರತಾ ಕಾನೂನನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಹೆಚ್ಚಿನ ಮೊತ್ತವನ್ನು ಮೀಸಲಿಟ್ಟು ಆದಷ್ಟು ಬೇಗನೆ ಜಾರಿಗೊಳಿಸಬೇಕು, ಕಟ್ಟಡ ಕಾರ್ಮಿಕರಿಗೆ ನಿರಂತರವಾಗಿ ಕೆಲಸ ದೊರಕಲು ಕಟ್ಟಡ ಸಾಮಗ್ರಿಗಳ ಬೆಲೆಯನ್ನು ಇಳಿಸಬೇಕು. ಈ ಬೇಡಿಕೆಗಳಿಗೆ ಕೇದ್ರ ಸರ್ಕಾರ ಸ್ಪಂದಿಸಬೇಕೆಂದು ಅವರು ಹೇಳಿದರು.

ಜಿಲ್ಲಾಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡುತ್ತಾ ಬೆಲೆ ಏರಿಕೆ ವಿಪರೀತವಾಗಿ ಏರುತ್ತಿದ್ದು ಸರ್ಕಾರ ಕೈಕಟ್ಟಿ ಕುಳಿತಿರುವುದು ಅನ್ಯಾಯ. ಮುಂಗಡ ವ್ಯಾಪಾರಕ್ಕೆ ಅವಕಾಶ ನೀಡಿರುವ ಸರ್ಕಾರಗಳು ಪ್ರಜ್ಞಾಪೂರ್ವಕವಾಗಿ ಬಂಡವಾಳಗಾರರಿಗೆ ಶರಣಾಗಿವೆ. ಮನೆ ನಿವೇಶನವಿಲ್ಲದೆ ಕಟ್ಟಡ ಕಾರ್ಮಿಕರ ಬದುಕು ದುರಂತಮಯವಾಗಿದೆ. ಅವರಿಗೆ ಮನೆ, ನಿವೇಶನ ನೀಡಬೇಕು. ಎಲ್ಲಾ ಕಟ್ಟಡ ಕಾರ್ಮಿಕರಿಗೆ ಅವಶ್ಯಕ ವಸ್ತುಗಳು ದೊರಕುವ ಪಡಿತರ ಚೀಟಿ ನೀಡಬೇಕು ಎಂದು ಅವರು ಒತ್ತಾಯಿಸಿ, ಕಲ್ಯಾಣ ಮಂಡಳಿಯಿಂದ ನೀಡುತ್ತಿರುವ ಆರ್ಥಿಕಸೌಲಭ್ಯದ ಮೊತ್ತದ ಏರಿಕೆ ಮಾಡಬೇಕು. ರಾಜ್ಯ ಸರ್ಕಾರವು ಎಲ್ಲಾ ಕಾರ್ಮಿಕರಿಗೆ ರೂ. 6,000 ಕನಿಷ್ಟ ಕೂಲಿ ನಿಗದಿ ಪಡಿಸಬೇಕೆಂದು ಅವರು ಒತ್ತಾಯಿಸಿದರು. ಕಟ್ಟಡ ಕಾರ್ಮಿಕರ ಮೇಲೆ ಕೂಲಿ ಹೆಚ್ಚು ಕೇಳುತ್ತಾರೆಂದು ದೈಹಿಕ ಹಲ್ಲೆ ಮಾಡುತ್ತಿರುವ ಭೂ ಮಾಫಿಯಾ ಶಕ್ತಿಗಳ ಚಟುವಟಿಕೆಗೆ ಸರ್ಕಾರ ಕಡಿವಾಣ ಹಾಕಬೇಕೆಂದು ಅವರು ಒತ್ತಾಯಿಸಿದರು.

ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಮುಂದಾಳುಗಳಾದ ಶ್ರೀಧರ್, ಅಶೋಕ ಸಾಲ್ಯಾನ್, ಭಾಸ್ಕರ ಆಚಾರಿ, ಚಂದ್ರಹಾಸ ಪಿಲಾರ್, ಅಶೋಕ ಶೆಟ್ಟಿ, ಜಯಂತ ನಾಯ್ಕ್, ದಯಾನಂದ ಶೆಟ್ಟಿ, ಶಂಕರ್, ಶೀನ, ಜಯಶೀಲ, ಜನಾರ್ಧನ, ವಾಸುದೇವ ಜೆ.ಪಿ., ಶಾಮುವೆಲ್, ಯೋಗಿಶ್ ಜಪ್ಪಿನ ಮೊಗರು, ರಮೇಶ್ ಮುಂತಾದವರ
ವಹಿಸಿದ್ದರು. ಜಿಲ್ಲಾಧಿಕಾರಿಗಳ ಮುಖಾಂತರ
ಕೇಂದ್ರ ಸರ್ಕಾರಕ್ಕೆ ಮನವಿ ನೀಡಲಾಯಿತು.

ಪ್ರಾರಂಭದಲ್ಲಿ ಸುನೀಲ್ ಕುಮಾರ್ ಸ್ವಾಗತಿಸಿ
ಕೊನೆಯಲ್ಲಿ ವಸಂತ ಆಚಾರಿ ಧನ್ಯವಾದ
ಹೇಳಿದರು.



ಪ್ರಧಾನ ಮಂತ್ರಿಗಳು ಮತ್ತು ಯೋಜನಾ ಆಯೋಗ ಆರ್ಥಿಕ ಆಶಾವಾದದ ಸುಂದರ ಚಿತ್ರವನ್ನು ಜನಗಳ ಮುಂದಿಟ್ಟಿದ್ದಾರೆ. ವಾಸ್ತವತೆ ಮಾತ್ರ ಸಂಪೂರ್ಣ ಭಿನ್ನ. ಯೋಜನಾ ಆಯೋಗವೂ ಈಗ ಸೂಚಿಸುತ್ತಿರುವುದು 'ಮೊದಲು ಲಾಭಗಳು, ಆಮೇಲೆ ಜನಗಳು' ಎಂಬ ಬಂಡವಾಳಶಾಹೀ ಪರಿಹಾರವನ್ನೇ. ಆದರೆ ತ್ರಿವಿಧ ದಾಳಿಗಳಿಂದ ತತ್ತರಿಸುತ್ತಿರುವ ಜನಗಳಿಗೆ ಬೇಕಾಗಿರುವುದು 'ಮೊದಲು ಜನಗಳು ಆ ಮೇಲೆ ಲಾಭಗಳು' ಎಂಬ ನಿಲುವು.

ಈ ಆರ್ಥಿಕ ಆಶಾವಾದ ವಾಸ್ತವದಿಂದ ಬಹುದೂರ


ಸೆಪ್ಟೆಂಬರ 1ರಂದು ಯೋಜನಾ ಆಯೋಗದ ಪೂರ್ಣ ಸಭೆ ನಡೆಯಿತು. ಪ್ರಧಾನ ಮಂತ್ರಿಗಳು ಅದರ ಅಧ್ಯಕ್ಷತೆ ವಹಿಸಿದ್ದರು. ಆರ್ಥಿಕ ಸನ್ನಿವೇಶ ಕುರಿತ ಅಜೆಂಡಾ ಪ್ರಬಂಧ ಮತ್ತು ಹನ್ನೊಂದನೇ ಯೋಜನೆಯ ಪ್ರಗತಿಯ ಚರ್ಚೆ ಮಾಡಲು ಈ ಸಭೆ. ಅಜೆಂಡಾ ಪ್ರಬಂಧ 2009-10ರ ಮೊದಲ ಮೂರು ತಿಂಗಳಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) 6.1ಶೇ. ದರದಲ್ಲಿ ಬೆಳೆಯಿತು ಎಂಬ ಸುಂದರ ಚಿತ್ರವನ್ನಿಟ್ಟಿತ್ತು. ಕಳೆದೆರಡು ಕಾಲು ವಾರ್ಷಿಕ ಅವಧಿಯಲ್ಲಿ ಕಂಡು ಬಂದ 5.3ಶೇ.ಮತ್ತು5.8ಶೇ.ಕ್ಕೆ ಹೋಲಿಸಿದರೆ ಇದು ಗಮನಾರ್ಹ ಎನ್ನಲಾಯಿತು. ಇದರ ಆಧಾರದಲ್ಲಿ ಆರ್ಥಿಕ ಬಿಕ್ಕಟ್ಟಿನ ಅತಿ ಕೆಟ್ಟ ಅವಧಿ ಮುಗಿದಿದೆ, ಭಾರತಕ್ಕೆ ಹಿಂಜರಿತದ ಪರಿಣಾಮವನ್ನು ಮೀರಿ ನಿಲ್ಲಲು ಸಾಧ್ಯವಾಗಿದೆ ಎಂಬುದನ್ನು ಇದು ತೋರಿಸಿದೆ ಎಂದು ಹೇಳಲಾಗುತ್ತಿದೆ. 2012ರ ವೇಳೆಗೆ ಭಾರತ 9ಶೇ. ಜಿಡಿಪಿ ಬೆಳವಣಿಗೆಯ ಪಥದಲ್ಲಿರುತ್ತದೆ ಎಂಬುದು ಸರಕಾರದ ನಿರೀಕ್ಷೆ.

ಯೋಜನಾ ಆಯೋಗದ ಉಪಾಧ್ಯಕ್ಷರು 11ನೇ ಯೋಜನೆಯ ಅವಧಿಯಲ್ಲಿ(2007-08ರಿಂದ 2011-12) ಜಿಡಿಪಿ ಸರಾಸರಿ 7.8ಶೇ.ದರದಲ್ಲಿ ಬೆಳೆಯುತ್ತದೆ ಎಂದು ತಿಳಿಯಪಡಿಸಿದರು. ಇಟ್ಟುಕೊಂಡಿದ್ದ ಗುರಿ 9ಶೇ. ಇದರರ್ಥ ಕಡಿಮೆ ಆದಾಯ ಹಾಗೂ ಯೋಜನಾ ಗುರಿಗಳನ್ನು ತಲುಪಲು ಮತ್ತು ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳಿಗೆ ಖರ್ಚುಗಳಿಗೆ ಸಂಪನ್ಮೂಲಗಳ ಕಡಿಮೆ ಲಭ್ಯತೆ. ಮುಂದಿನ ಎರಡು ವರ್ಷಗಳಲ್ಲಿ 1,60,000 ಕೋಟಿ ರೂ.ಗಳಷ್ಟು ಬೃಹತ್ ಕೊರತೆಯಾಗಬಹುದು ಎಂದು ಯೋಜನಾ ಆಯೋಗ ಲೆಕ್ಕ ಹಾಕಿದೆ. ಪ್ರಧಾನ ಮಂತ್ರಿಗಳು ಮತ್ತು ಯೋಜನಾ ಆಯೋಗ ಹುಟ್ಟಿಸಬೇಕೆಂದಿರುವ ಆಶಾವಾದಕ್ಕೆ ಅದರ ಈ ಲೆಕ್ಕಾಚಾರವೇ ತಣ್ಣೀರೆರಚುತ್ತದೆ.

ಗಟ್ಟಿ ಚೇತರಿಕೆಯಲ್ಲ

ಭಾರತದ ಆರ್ಥಿಕ ಜಾಗತಿಕ ಹಿಂಜರಿತವನ್ನು ಎದುರಿಸಿಯೂ ಪುಟಿದೇಳುತ್ತಿದ್ದರೆ ಅದಕ್ಕೆ ಬಹಳಷ್ಟು ಮಟ್ಟಿಗೆ ಸರಕಾರದ ಖರ್ಚಿನಲ್ಲಿ ಹೆಚ್ಚಳ ಮತ್ತು ಒಂದು ಆರೋಗ್ಯಕರ ಖಾಸಗೀ ಬಳಕೆದಾರರ ಖರ್ಚಿನಲ್ಲಿ ಹೆಚ್ಚಳ ಕಾರಣ. ಒಟ್ಟು ಖರ್ಚಿನಲ್ಲಿ ಸರಕಾರದ ಪಾಲು ಕಳೆದ ವರ್ಷ 9.6ಶೇ. ಇದ್ದುದು ಈ ವರ್ಷ ಸುಮಾರು 10 ಶೇ.ಕ್ಕೆ ಏರಿದೆ. ಈ ಅವಧಿಯಲ್ಲಿ 15ನೇ ಸಾರ್ವತ್ರಿಕ ಚುನಾವಣೆಗಳು ನಡೆದದ್ದೇ ಇದಕ್ಕೆ ಮುಖ್ಯ ಕಾರಣ. ಸಂಬಂಧಪಟ್ಟ ಖರ್ಚು ಯಾವುದೇ ಉತ್ತೇಜಕ ಪ್ಯಾಕೇಜಿನಿಂದ ಉಂಟಾಗುತ್ತಿದ್ದುದಕ್ಕಿಂತ ಎಷ್ಟೋ ಹೆಚ್ಚು. ಇನ್ನೂ ಮುಖ್ಯ ಸಂಗತಿಯೆಂದರೆ ಇದು ನೇರವಾಗಿ, ಯಾವುದೇ ಮಧ್ಯವರ್ತಿಗಳಿಲ್ಲದೆ, ನಡುವೆ ಸೋರಿ ಹೋಗದೆ ಜನರನ್ನು ತಲುಪುತ್ತದೆ, ಆದರೆ ಇದು ಒಂದೇ ಬಾರಿ ಮಾಡುವ ಖರ್ಚು. ಅಂದರೆ ಇಂತಹ ಖರ್ಚಿನ ಮಟ್ಟಗಳು 11ನೇ ಯೋಜನೆಯ ಉಳಿದ ಅವಧಿಯಲ್ಲಿಯೂ ಮುಂದುವರೆಯುತ್ತವೆ ಎಂದು ಲೆಕ್ಕ ಹಾಕುವುದು ಬಹಳ ದೊಡ್ಡ ತಪ್ಪಾಗುತ್ತದೆ.

ಖಾಸಗೀ ಬಳಕೆ ಖರ್ಚು 58 ಶೇ.ದಿಂದ ಈ ವರ್ಷ ಎಪ್ರಿಲ್-ಜೂನ್ ಅವಧಿಯಲ್ಲಿ 56 ಶೇ.ಕ್ಕೆ ಇಳಿಯಿತು. ಈ ಮಟ್ಟವಾದರೂ ಸಾಧ್ಯವಾದದ್ದು ಆರನೇ ವೇತನ ಆಯೋಗದ ಪರಿಣಾಮವಾಗಿ ಮತ್ತು ಅದರಿಂದಾಗಿ ಜನಗಳ ಕೈಗಳಲ್ಲಿ ಹೆಚ್ಚು ಹಣ ಬಂದುದರಿಂದ. ಆದ್ದರಿಂದ ಇದು ಕೂಡಾ ಒಂದೇ ಬಾರಿಯ ಖರ್ಚು. ಖರ್ಚಿನ ಈ ಭಾಗ ಕೂಡಾ ಹೀಗೆಯೇ ಉಳಿಯಲಾರದು.



ಹಾದಿ ತಪ್ಪಿಸುವ ಚಿತ್ರ

ಹೀಗಿರುವಾಗ, ಒಂದು ಆಶಾದಾಯಕ ಚಿತ್ರವನ್ನಿಡುವುದು ಜನಗಳನ್ನು ಹಾದಿ ತಪ್ಪಿಸಿದಂತೆಯೇ ಸರಿ. ಈಗ ಕವಿದಿರುವ ಬರದಿಂದ ಆಹಾರಧಾನ್ಯಗಳ ಉತ್ಪಾದನೆ 3 ಕೋಟಿ ಟನ್‌ಗಳಷ್ಟು ಇಳಿಯುತ್ತದೆ ಎಂಬ ಅಂದಾಜು ಕೂಡಾ ಇದನ್ನು ಬಲಪಡಿಸುತ್ತದೆ. ಕೃಷಿ ಜಿಡಿಪಿಯ ಬೆಳವಣಿಗೆ ಮಾರ್ಚ್ ತಿಂಗಳಲ್ಲಿ 2.4ಶೇ. ದಾಖಲಾಗಿತ್ತು. ಬರದ ಕಾರಣದಿಂದ ಅದು 6 ಶೇ. ರಷ್ಟು ಇಳಿಯ ಬಹುದು ಎಂದು ಅಂದಾಜು ಮಾಡಲಾಗಿದೆ. ಅಂದರೆ ಬೆಳವಣಿಗೆ ನಕಾರಾತ್ಮಕವಾಗುತ್ತದೆ. ಆಹಾರ ಧಾನ್ಯಗಳ ಕೊರತೆ, ಜತೆಗೆ ಬೆಲೆಗಳ ನಾಗಾಲೋಟ ಜನಗಳ ಕೈಗಳಲ್ಲಿ ಬೇರೆ ಸರಕುಗಳಿಗೆ ಖರ್ಚು ಮಾಡಲು ಹೆಚ್ಚೇನೂ ಹಣ ಉಳಿಸುವುದಿಲ್ಲ. ಇದು ತಯಾರಿಕಾ ವಲಯವನ್ನು, ಆಮೂಲಕ ಸೇವಾ ವಲಯವನ್ನೂ ತಟ್ಟುತ್ತದೆ. ಸೇವಾ ವಲಯದ ಪಾಲು ಒಟ್ಟು ಜಿಡಿಪಿಯ 60 ಶೇ. ಅದು ಕಳೆದ ವರ್ಷ 10 ಶೇ.ದರದಲ್ಲಿ ಬೆಳೆದಿದ್ದರೆ, ಈ ವರ್ಷ ಬೆಳವಣಿಗೆ ದರ 7.8 ಶೇ. ಕ್ಕೆ ಇಳಿದಿದೆ. ಕೈಗಾರಿಕಾ ವಲಯದ ಬೆಳವಣಿಗೆ ಈ ಹಣಕಾಸು ವರ್ಷದ ಮೊದಲ ಮೂರು ತಿಂಗಳಲ್ಲಿ ಕಳೆದ ವರ್ಷದ 6ಶೇ.ಕ್ಕಿಂತ ಕೆಳಗೆಯೇ ಇದೆ.

ಆಮದು-ರಫ್ತು ಸ್ಥಿತಿಯೂ ಉತ್ಸಾಹದಾಯಕವಾಗಿಲ್ಲ. ಈ ಜುಲೈ ತಿಂಗಳಲ್ಲಿ ಆಮದು 37ಶೇ.ದಷ್ಟು ಇಳಿಕೆ ಕಂಡಿತು. ಇದು ಕಳೆದ ವರ್ಷ ಕಂಡ 28 ಶೇ.ಇಳಿಕೆಗಿಂತಲೂ ಹೆಚ್ಚು. ನಿಜ, ಇದರಿಂದ ನಮ್ಮ ವ್ಯಾಪಾರ ಕೊರತೆ ಕಡಿಮೆಯಾಗಬಹುದು. ಆದರೆ ದೇಶದ ಆರ್ಥಿಕದ ಭವಿಷ್ಯಕ್ಕೆ ಇದು ಶುಭ ಸೂಚನೆಯಲ್ಲ. ಏಕೆಂದರೆ ಆಮದಿನ ಇಳಿಕೆ ಎಂದರೆ ಅದು ಆಂತರಿಕ ಉತ್ಪಾದನಾ ಚಟುವಟಿಕೆಗಳಲ್ಲಿ ಇಳಿಕೆಯನ್ನೂ ಸೂಚಿಸುತ್ತದೆ. ತೈಲ ಬಿಟ್ಟು ಉಳಿದ ಆಮದಿನಲ್ಲಿ ಸುಮಾರು 25ಶೇ. ಇಳಿಕೆಯಾಗಿದೆ. ಅಂದರೆ ಕೈಗಾರಿಕೆಗಳು ಸ್ಥಗಿತತೆಯ ಸ್ಥಿತಿಯಲ್ಲಿವೆ ಎಂದೇ ಅರ್ಥ. ಸರಕುಗಳ ರಫ್ತು ಸತತವಾಗಿ ಹತ್ತನೇ ತಿಂಗಳು ಇಳಿಯುತ್ತಿದೆ. ಆರ್ಥಿಕ ಬೆಳವಣಿಗೆಯಲ್ಲಿ ತೋರಿಸುವ ಆಶಾವಾದ ವಿದೇಶ ವ್ಯಾಪಾರ ರಂಗದಲ್ಲಿ ಕಾಣಿಸುತ್ತಿಲ್ಲ ಎಂಬುದರ ಸ್ಪಷ್ಟ ಸಂಕೇತ ಇದು.

ರಿಜರ್ವ್ ಬ್ಯಾಂಕಿನ 2008-09ರ ವಾರ್ಷಿಕ ವರದಿ ಈ ವರ್ಷ ಬೆಳವಣಿಗೆ ದರ 6ಶೇ. ಇರುತ್ತದೆ ಎಂದು ಅಂದಾಜಿಸಿದೆ. ಆದರೆ ಅದು 'ಉತ್ತೇಜಕ ಪ್ಯಾಕೆಜು' ಗಳ ಹೆಸರಿನಲ್ಲಿ ಅನುಸರಿಸಿದ ವಿಸ್ತರಣಕಾರಿ ಹಣಕಾಸು ನಿಲುವುಗಳಿಂದಾಗಿ ಹಾಗೂ ಅದಕ್ಕನುಸಾರವಾಗಿ ಬಡ್ಡಿದರಗಳನ್ನು ಇಳಿಸುವ ಅದರ ಧೋರಣೆಯಿಂದಾಗಿ ಗಂಭೀರ ಪರಿಣಾಮಗಳಾಗಬಹುದು, ಮುಂದಿನ ಹಣದುಬ್ಬರದ ಒತ್ತಡಗಳು ಆರ್ಥಿಕವನ್ನು ಪ್ರತಿಕೂಲವಾಗಿ ತಟ್ಟಬಹುದು ಎಂದು ಎಚ್ಚರಿಸಿದೆ.

ಮತ್ತದೇ 'ಪಿಪಿಪಿ'!

ಆದ್ದರಿಂದ ಸರಕಾರದ ಆರ್ಥಿಕ ಆಶಾವಾದ ಒಂದು 'ಉತ್ತಮ ಅನಿಸಿಕೆ'ಯ(ಫೀಲ್ ಗುಡ್) ಭಾವನೆಯನ್ನೇನೋ ಸೃಷ್ಟಿಸಬಹುದು. ಆದರೆ ಇದು ನಮ್ಮ ಆರ್ಥಿಕದ ಮೂಲಭೂತ ಅಂಶಗಳ ನಿಜವಾದ ಅಂದಾಜಿನಿಂದಂತೂ ಬಹಳ ದೂರವಿರುತ್ತದೆ. ಯೋಜನಾ ಗುರಿಗಳಿಗೆ ಬೇಕಾಗುವ ಸಂಪನ್ಮೂಲಗಳಲ್ಲಿನ ಭಾರೀ ಕೊರತೆಯನ್ನು ನೀಗಿಸಲು ಪ್ರಧಾನ ಮಂತ್ರಿಗಳು ಮತ್ತು ಯೋಜನಾ ಆಯೋಗ ಮತ್ತೆ 'ಸಾರ್ವಜನಿಕ-ಖಾಸಗೀ ಪಾಲುದಾರಿಕೆ' (ಪಿಪಿಪಿ)ಯ ಮಾತಾಡಿದ್ದಾರೆ. ಜಾಗತಿಕ ಹಿಂಜರಿತದ ಸನ್ನಿವೇಶದಲ್ಲಿ ಖಾಸಗಿ ಬಂಡವಾಳ ಸರಕಾರಗಳ ಆಸರೆಗೆ ಕೈಯೊಡ್ಡಿರುವಾಗ ಅವರು ಮೂಲರಚನೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ತೊಡಗಿಸುತ್ತಾರೆ ಎಂಬುದು ಅವಾಸ್ತವವಾಗುತ್ತದೆ. ಇಷ್ಟೇ ಅಲ್ಲ, ಇದು ಖಾಸಗೀ ಬಂಡವಾಳಕ್ಕೆ ಸಾರ್ವಜನಿಕ ವಲಯದ ಮತ್ತು ಜನಗಳ ಸಂಪನ್ಮೂಲಗಳನ್ನು ಬಳಸಿಕೊಂಡು ತನ್ನನ್ನು ಬಲಪಡಿಸಿಕೊಳ್ಳಲು, ತನ್ನ ಲಾಭಗಳಿಕೆಯ ಸಾಮರ್ಥ್ಯವನ್ನು ಕ್ರೋಢೀಕರಿಸಲಷ್ಟೇ ನೆರವಾಗುವ ಅಪಾಯವೂ ಇದೆ. ಅಂದರೆ ಇದರ ಅರ್ಥ 'ಮೊದಲು ಲಾಭಗಳು, ಆಮೇಲೆ ಜನಗಳು' ಎಂಬ ಧೋರಣೆಯನ್ನು ಭಾರತವೂ ಅನುಸರಿಸುತ್ತದೆ ಎಂದ ಹಾಗಾಗುತ್ತದೆ.

ಆದರೆ ನಮಗೆ ಈಗ ಬೇಕಾಗಿರುವುದು 'ಮೊದಲು ಜನಗಳು ಆ ಮೇಲೆ ಲಾಭಗಳು' ಎಂಬ ನಿಲುವು. ಇದು ಸರಕಾರ ನೇರವಾಗಿ ಸಾರ್ವಜನಿಕ ಹೂಡಿಕೆಯನ್ನೇ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿಸಿದರೆ ಮಾತ್ರವೇ ಸಾಧ್ಯ. ಅಲ್ಲದೆ ಇದು ಜಾಗತಿಕ ಹಿಂಜರಿತದ ಹಿನ್ನೆಲೆಯಲ್ಲಿ ನಿರುದ್ಯೋಗ ಹೆಚ್ಚುತ್ತಿರುವಾಗ ಉದ್ಯೋಗ ನಿರ್ಮಾಣಕ್ಕೆ ನೆರವಾಗುತ್ತದೆ. ಈ ರೀತಿಯ ಉದ್ಯೋಗ ನಿರ್ಮಾಣ ಆಂತರಿಕ ಬೇಡಿಕೆಗಳನ್ನು ಹೆಚ್ಚಿಸಿ ಆಮೂಲಕ ಕೈಗಾರಿಕಾ ಮತ್ತು ಉತ್ಪಾದನಾ ವಲಯಗಳ ಬೆಳವಣಿಗೆಗೆ ಗಟ್ಟಿ ಉತ್ತೇಜನೆ ಒದಗಿಸಬಲ್ಲದು. ಏರುತ್ತಲೇ ಇರುವ ಬೆಲೆಗಳು, ಏರುತ್ತಿರುವ ನಿರುದ್ಯೋಗ ಮತ್ತು ಬರ ಪರಿಸ್ಥಿತಿಯಿಂದಾಗಿ ಆಹಾರ ಅಭದ್ರತೆ ಇಂತಹ ಬಹುಮುಖೀ ದಾಳಿಗಳಿಂದ ತತ್ತರಿಸುತ್ತಿರುವ ಜನಗಳಿಗೆ ಪರಿಹಾರ ಒದಗಿಸಲು ಇರುವ ದಾರಿ ಇದೊಂದೇ.

ಕಳೆದ ವಾರ ದಿಲ್ಲಿಯಲ್ಲಿ ನಡೆದ ಸಮಾವೇಶ ಈ ಮೂರು ಪ್ರಶ್ನೆಗಳನ್ನು ಚರ್ಚಿಸಿತು. ಸಿಪಿಐ(ಎಂ)ನ ಮುತುವರ್ಜಿಯಿಂದ ನಡೆದ ಈ ಸಮಾವೇಶದ ಫಲವಾಗಿ ಎಡಪಕ್ಷಗಳು ಒಂದು ದೇಶವ್ಯಾಪಿ ಚಳುವಳಿ ನಡೆಸಲು ನಿರ್ಧರಿಸಿವೆ. ಈ ಮೂರು ವಿಧಗಳಲ್ಲಿ ಜನಗಳು ಪಡುತ್ತಿರುವ ಪಾಡುಗಳಿಂದ ಪರಿಹಾರ ನೀಡಬಹುದಾದ ನಿರ್ದಿಷ್ಟ ಬೇಡಿಕೆಗಳನ್ನು ಈ ಚಳುವಳಿ ಮುಂದಿಟ್ಟಿದೆ. ಇಂತಹ ಜನತಾ ಚಳುವಳಿಗಳೇ ಸರಕಾರ ಲಾಭಗಳಿಗಿಂತ ಜನಗಳು ಮುಖ್ಯ ಎಂಬಂತಹ ನೀತಿಗಳನ್ನು ಅನುಸರಿಸುವಂತೆ ಮಾಡಬಲ್ಲವು.

○

ಸಂದರ್ಶನ

ಬಹುತೇಕ ತಮ್ಮದೇನು ತಪ್ಪಿಲ್ಲದಿದ್ದರೂ ಸಮಾಜದಲ್ಲಿ ಅಂಗವಿಕಲರು ಅನುಭವಿಸುವ ಹಿಂಸೆ, ಅಪಮಾನ, ದೌರ್ಜನ್ಯ ಶೋಷಣೆ ಕುರಿತು ಬಣ್ಣಿಸುವುದೇ ಬೇಡ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಅಂಗವಿಕಲರು ಮತ್ತು ಪಾಲಕರ ಒಕ್ಕೂಟದ ರಾಜ್ಯ ಸಂಚಾಲಕರಾದ ಜಿ.ಎನ್.ನಾಗರಾಜ್‌ರವರ ಸಂದರ್ಶನ

'ಅಂಗವಿಕಲರ ಬವಣೆ ನೀಗುವುದು ಇಡೀ ಸಮಾಜದ ಹೊಣೆ'

ಜಿ.ಎನ್.ನಾಗರಾಜ್

ಜನಶಕ್ತಿ : ಅಂಗವಿಕಲರನ್ನು ಸಂಘಟಿಸುವುದರ ಮಹತ್ವವೇನು?

ಜಿ.ಎನ್.ನಾಗರಾಜ್ : ನಮ್ಮ ರಾಜ್ಯವೂ ಸೇರಿ ಭಾರತದಲ್ಲಿ ಅಂಗವಿಕಲರು ಶೇ.6 ರಷ್ಟು ಜನಸಂಖ್ಯೆ ಇದ್ದಾರೆಂದು ಅಂದಾಜಿಸಲಾಗಿದೆ. ಅಂದರೆ ಸುಮಾರು 7 ಕೋಟಿ. ಈ ಏಳು ಕೋಟಿ ಜನ ಬಾರಿದೊಡ್ಡ ಪ್ರಮಾಣದಲ್ಲಿ ನೋವು ಸಂಕಟಗಳಿಗೆ ತುತ್ತಾಗಿದ್ದು, ಸಮಾಜದಿಂದ ತುಚ್ಛೀಕರಣಕ್ಕೆ ಒಳಗಾಗಿದ್ದಾರೆ. ಹೀಗಾಗಿ ಬಾರಿ ದೊಡ್ಡ ಆರ್ಥಿಕ ಸಂಕಷ್ಟಗಳು ಮತ್ತು ಸಾಮಾಜಿಕ ಭೇಧ ಮತ್ತು ದೌರ್ಜನ್ಯಗಳಿಗೆ ಒಳಗಾಗಿದ್ದಾರೆ. ಅವರನ್ನು ಮನುಷ್ಯರು ಅಂತಲೇ ಪರಿಗಣಿಸಲಾರದೇ ಇರುವ, ಅವರ ವ್ಯಕ್ತಿತ್ವ, ಅಭಿಪ್ರಾಯಗಳಿಗೆ ಬೆಲೆ ಕೊಡದ ಪರಿಸ್ಥಿತಿ ಇದೆ. ಈ ಪಾಳೆಗಾರಿ ಸಮಾಜದಲ್ಲಿ ಇವರನ್ನು ಪಾಪಿಗಳೆಂದು ಪರಿಗಣಿಸಲಾಗುತ್ತದೆ. ಅವರ ಹಿಂದಿನ ಜನ್ಮದ ಪಾಪದ ಫಲ ಅಥವಾ ಅವರ ತಂದೆ ತಾಯಿಗಳು ಮಾಡಿದ ಕರ್ಮದ ಫಲ ಎಂದು ಪರಿಗಣಿಸಲಾಗುತ್ತದೆ. ಎಲ್ಲ ಶೋಷಿತರ ಬಗ್ಗೆ ಈ ಭಾವನೆ ಇದ್ದರೂ ಅಂಗವಿಕಲರ ವಿಷಯದಲ್ಲಿ ಈ ಭಾವನೆ ಸರ್ವವ್ಯಾಪಿಯಾಗಿದೆ.

ಇಲ್ಲಿಯವರೆಗೆ ಇವರಿಗೆ ದಾನಿಗಳು, ಶ್ರೀಮಂತರು, ಶೋಷಕರು, ಶ್ರೀಮಂತರು ಕೆಲವು ಸಣ್ಣಪುಟ್ಟ ಅವಶ್ಯಕತೆಗಳನ್ನು ಪೂರೈಸಿ ಅವರ ಹೆಸರಿನಲ್ಲಿ ತಾವು ಒಳ್ಳೆಯ ಹೆಸರು ಪಡೆಯಲು, ತಮ್ಮ ಕೆಟ್ಟ ಕೆಲಸ ಮುಚ್ಚಿ ಹಾಕಿಕೊಳ್ಳಲು ಹಾಗೂ ತಾವು ನಡೆಸುವ ಶೋಷಣೆಯನ್ನು ಮರೆಮಾಚಲು, ಜನರಲ್ಲಿ ತಮ್ಮ ಬಗ್ಗೆ ಉಂಟಾಗಿರುವ ವಿರೋಧವನ್ನು ತಣಿಸಲು ಅಥವಾ ಪುಣ್ಯವನ್ನು ಗಳಿಸಲು ಬಳಸುತ್ತಾ ಬಂದಿದ್ದಾರೆ.

ಹೀಗಾಗಿ ಇವರು ಜೀವನಪರ್ಯಂತ ಪೂರ್ತಿಯಾಗಿ ಪರಾವಲಂಬಿ ಜೀವನ ನಡೆಸುವಂತಾಗಿದೆ. ಊಟಕ್ಕೆ ತೊಂದರೆ ಇರುವವರ ಮನೆ ಇರಲಿ, ಊಟಕ್ಕೆ ತೊಂದರೆ ಇಲ್ಲದ ಶ್ರೀಮಂತ, ಮಧ್ಯಮ ವರ್ಗದವರ ಮನೆಯ ಅಂಗವಿಕಲರಿಗೆ ಅಪಮಾನ, ವ್ಯಕ್ತಿತ್ವಕ್ಕೆ ಬೆಲೆ ಕೊಡದಿರುವುದು ಇದೆ. ಬಡತನವಿರುವ ಮನೆಗಳಲ್ಲಿ ಅನೇಕ ಸಂಕಟ ಅಪಮಾನಗಳನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಅನಿವಾರ್ಯವಾಗಿ ಬಿಕ್ಷಾಟನೆಗೆ ದೂಡಲ್ಪಡುತ್ತಾರೆ. ಚಿಂದಿಬಟ್ಟೆಗಳಲ್ಲಿ ಕೊಳೆಯ ರಾಶಿಯಲ್ಲಿ ಕಷ್ಟಕರ ರಸ್ತೆಯಲ್ಲಿ ತೆವಳುತ್ತಾ, ಒದ್ದಾಡುತ್ತಾ ಭಿಕ್ಷೆ ಬೇಡುತ್ತಾ ಇರುವ ಪರಿಸ್ಥಿತಿಯಲ್ಲಿರುತ್ತಾರೆ.

ಇದಲ್ಲದೆ ಮನೆಯಿಂದ ಹೊರಗೆ ಹೋಗಲಿಕ್ಕೇ ಆಗದ ಪರಿಸ್ಥಿತಿ, ಮನೆಯವರು ಹೊರಗೆ ಕರೆದುಕೊಂಡು ಹೋಗಲಾಗದ, ಕರೆದುಕೊಂಡು ಹೋಗದ ಪರಿಸ್ಥತಿಯಲ್ಲಿ ಸಾಕಷ್ಟು ಜನ ಇದ್ದಾರೆ. ಇಂತಹ ಸಮಾಜದಲ್ಲಿ ಅಂಗವಿಕಲರು ಶಿಕ್ಷಣ ದೊರಕಿಸಿಕೊಳ್ಳುವುದು, ಸ್ವಾವಲಂಬಿ ಜೀವನ ದೊರಕಿಸಿಕೊಳ್ಳುವದು ಹಾಗೂ ಪ್ರಜಾಸತ್ತಾತ್ಮಕವಾದ ಹಕ್ಕುಗಳ ಕಲ್ಪನೆ ಕೂಡ ಇಲ್ಲದೆ ಬದುಕುತ್ತಿದ್ದಾರೆ.

ಇದರಿಂದಾಗಿ ಅಂಗವಿಕಲರಿಗೆ ಮಾತ್ರವೇ ಅಲ್ಲ, ತಂದೆತಾಯಿ ಅಥವಾ ಕುಟುಂಬ ವರ್ಗ ಅವರೆಲ್ಲರಿಗೂ ಕೂಡ ಈ ಬಾಧೆ ವಿವಿಧ ರೂಪಗಳಲ್ಲಿ



ಇರುತ್ತದೆ. ಇವರೆಲ್ಲ ಸೇರಿದರೆ ಇಡೀ ದೇಶದಲ್ಲಿ ಶೇ.6 ರಷ್ಟಿರುವ ಅಂಗವಿಕಲರು ಅಂದರೆ 7 ಕೋಟಿ ಅಂಗವಿಕಲರು ಮತ್ತು ಅವರ ಕುಟುಂಬ ಸೇರಿ 20 ಕೋಟಿ ಜನ ಈ ಸಮಸ್ಯೆಗೆ ನೇರವಾಗಿ ಸಂಬಂಧಿಸಿದವರಾಗಿದ್ದು, ಅದರ ಬಗೆಗೆ ಕಾಳಜಿಯುಳ್ಳವರಾಗಿದ್ದಾರೆ.

ಜನಶಕ್ತಿ : ಅಂಗವೈಕಲ್ಯದ ಬಗೆಗೆ ತಿರಸ್ಕಾರ ಭಾವನೆ ತೊಡೆಯುವುದು ಹೇಗೆ?

ಜಿ.ಎನ್.ನಾಗರಾಜ್ : ವಿಜ್ಞಾನದ ಬೆಳವಣಿಗೆಯ ಜೊತೆ ಜೊತೆಗೆ ಅದರಲ್ಲೂ ವೈದ್ಯಕೀಯ ವಿಜ್ಞಾನಗಳ ಜೊತೆ ಜೊತೆಗೆ ಮನೋ ವಿಜ್ಞಾನಗಳ ಬೆಳವಣಿಗೆ ಜೊತೆ ಜೊತೆಗೆ ಅಂಗವಿಕಲತೆಯ ನಿಜವಾದ ಕಾರಣಗಳು ಬೆಳಕಿಗೆ ಬಂದಿವೆ. ಮುಖ್ಯವಾಗಿ ಅಂಗವಿಕಲತೆಗೆ ವೈರಸ್, ಬ್ಯಾಕ್ಟಿರಿಯಾ ಮೊದಲಾದಂತಹ ರೋಗಾಣುಗಳಿಂದ ಉಂಟಾಗುವ ರೋಗಗಳು ಕಾರಣ. ಪೌಷ್ಟಿಕಾಂಶದ ಕೊರತೆಯ ಕಾರಣಗಳು, ಮತ್ತು ಅನುವಂಶೀಕ ಕಾರಣಗಳು, ಜನನ ಪ್ರಕ್ರಿಯೆಯ ಸಂದರ್ಭದ ಅಡಚಣೆಗಳು, ದೋಷಗಳು, ಇವೆಲ್ಲಾ ಕಾರಣಗಳೆಂದು ತಿಳಿದುಬಂದಿದೆ. ಇತ್ತೀಚಿನ ದಿನಗಳಲ್ಲಿ ವಾಹನದಟ್ಟಣೆ, ಅದರಿಂದುಂಟಾಗುವ ಅಪಘಾತಗಳು, ಯಂತ್ರೋಪಕರಣಗಳ ಬಳಕೆಯಲ್ಲಿ ಸುರಕ್ಷತೆಯ ಅಭಾವದಿಂದ ಉಂಟಾಗುವ ಅಪಘಾತಗಳು ಇದಕ್ಕೆ ಕಾರಣಗಳಾಗಿವೆ. ಇದರಲ್ಲಿ ಸ್ವತ: ಅಂಗವಿಕಲರು, ಅಂಗವಿಕಲರ ಕುಟುಂಬ ಇವರನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಬೇಕಾದ ಸಂದರ್ಭಗಳು ಬಹಳ ಕಡಿಮೆ. ಇದಕ್ಕೆ ಕಾರಣವಾಗಿರುವುದು ಒಟ್ಟಾರೆ ದೇಶದ ಆರೋಗ್ಯ ವ್ಯವಸ್ಥೆ, ಪರಿಸರ ಹಾಗೂ ನಗರಗಳ ಅರಾಜಕ ಬೆಳವಣಿಗೆ, ಸರ್ಕಾರಗಳ ಹೊಣೆಗಾರಿಕೆ ಮಾನವನ ಜೈವಿಕ ರಚನೆಗಳು. ಆದರೆ ಅಂಗವಿಕಲತೆಗೆ ಮಾಡಿದ ಪಾಪ ಕಾರಣ, ಕರ್ಮ ಕಾರಣ ಎಂಬ ಭಾವನೆಗಳು ನಮ್ಮ ಸಮಾಜದಲ್ಲಿ ಪ್ರಬಲವಾಗಿವೆ.

ಇದರಿಂದಾಗಿ ವೈಜ್ಞಾನಿಕ ವಿಚಾರವನ್ನು ಸಮಾಜದಲ್ಲಿ ಹರಡುವುದು, ಅಂಗವಿಕಲರ ಬಗೆಗಿನ ಭಾವನೆಯನ್ನು ಬದಲಾಯಿಸಲು ಪ್ರಮುಖವಾದ ಸಾಧನ. ಇದನ್ನು ಮಾಡಬೇಕಾದ ಹೊಣೆ, ಸರ್ಕಾರದ ಮೇಲೆ ಇದೆ. ಅದರಲ್ಲಿ ವಿಜ್ಞಾನ ಶಿಕ್ಷಣವನ್ನು ಪಡೆದವರೆಲ್ಲರ ಮೇಲೂ ಈ ಹೊಣೆಗಾರಿಕೆ ಇದೆ. ಈ ಜನವಿಭಾಗ ಬಾರಿ ದೊಡ್ಡ ಪ್ರಮಾಣದಲ್ಲಿ ಶಿಕ್ಷಣ ವಂಚಿತರಾಗಿದ್ದಾರೆ. ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಸಿಗುವ ತಿಳುವಳಿಕೆಯಿಂದ ಇವರು ವಂಚಿತರಾಗಿದ್ದಾರೆ. ಹೀಗಾಗಿ ಸಾಮಾನ್ಯ ಜ್ಞಾನದ ಕೊರತೆಯೂ ಅವರದ್ದಲ್ಲದ ತಪ್ಪಿಗಾಗಿ ಅವರನ್ನು ಕಾಡುತ್ತದೆ ಮತ್ತು ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊಸತರಲ್ಲೇ ಶಿಕ್ಷಣ ಸಾರ್ವತ್ರೀಕರಣ ಪ್ರಯತ್ನ ನಡೆದರೂ 50 ರ ದಶಕದಲ್ಲೇ ಕಡ್ಡಾಯ ಶಿಕ್ಷಣದ ಕ್ರಮಗಳು ಆರಂಭವಾದರೂ ಅಂಗವಿಕಲರು 6 ದಶಕಗಳ ದೀರ್ಘ ಕಾಲ ಇದರಿಂದ ವಂಚಿತರಾಗಿಯೇ ಇದ್ದಾರೆ.



ಅತಿ ಮುಂದುವರಿದ ನಗರಗಳಲ್ಲಿ ಕೆಲವು ಸ್ವಯಂ ಸೇವಾ ಹೆಚ್ಚಾಗಿ,ಮೇಲ್ವರ್ಗಗಳು ಮತ್ತು ಮಧ್ಯಮ ವರ್ಗಗಳ ಅಂಗವಿಕಲರಿಗೆ ಸಂಸ್ಥೆಗಳು ಪ್ರಯೋಜನಕಾರಿಯಾದ, ಶಿಕ್ಷಣ ಮೊದಲಾದ ಸೇವೆಗಳನ್ನು ಒದಗಿಸುವ ವ್ಯವಸ್ಥೆ ನಡೆಯುತ್ತಿದೆ. ಆದರೆ ಇದು ವಿಶಾಲವಾದ ಅಂಗವಿಕಲ ಸಮುದಾಯಕ್ಕೆ ದಕ್ಕುತ್ತಿಲ್ಲ.

ಇತ್ತೀಚಿನ ದಶಕಗಳಲ್ಲಿ ಅಂಗವಿಕಲರ ಚಳುವಳಿ ಅಂತರಾಷ್ಟ್ರಿಯ, ರಾಷ್ಟ್ರೀಯ ಅಂಗವಿಕಲರ ಚಳುವಳಿಯ ಒತ್ತಡದಿಂದ ಸರ್ಕಾರಗಳು ಕೆಲವು ಕ್ರಮಗಳನ್ನು ಕೈಗೊಳ್ಳಲಾರಂಭಿಸಿವೆ. 1995 ರಲ್ಲಿ ಅಂಗವಿಕಲರಿಗಾಗಿಯೇ ಒಂದು ವಿಶೇಷ ಕಾನೂನು ಅಂಗೀಕಾರಗೊಂಡಿದೆ. ಆ ಕಾನೂನನ್ನು ಇನ್ನೂ ಉತ್ತಮಪಡಿಸಬೇಕಾದ ಅಗತ್ಯವಿದ್ದರೂ ಕೂಡ ಆ ಕಾನೂನಿನಲ್ಲಿ ಹಲವಾರು ಪ್ರಯೋಜನಕಾರಿಯಾದ ಅಂಶಗಳಿವೆ. ಶಿಕ್ಷಣ ಉದ್ಯೋಗ ಮೊದಲಾದವುಗಳಲ್ಲಿ ಮೀಸಲಾತಿ, ಸರ್ವ ಶಿಕ್ಷಣ ಅಭಿಯಾನದಲ್ಲಿ ಎಲ್ಲ ಅಂಗವಿಕಲರಿಗೆ ಶಿಕ್ಷಣ ಒದಗಿಸುವ ಗುರಿ, ಅಂಗವಿಕಲರಿಗೆ ಬೇಕಾದ ಸಾಧನ, ಸಲಕರಣೆಗಳನ್ನು ಒದಗಿಸುವುದು.

ಮಾಸಿಕ ವೇತನ, ರೈಲ್ವೆ ಪ್ರಯಾಣದಲ್ಲಿ ರಿಯಾಯಿತಿ, ಮುಂತಾದವುಗಳನ್ನು ನೀಡಲಾರಂಭಿಸಲಾಗಿದೆ. ಆದರೆ ಈ ಸೌಲಭ್ಯಗಳು ಇನ್ನೂ ಕೂಡ ಬಹಳಷ್ಟು ಜನರಿಗೆ ಸಿಕ್ಕಿಲ್ಲ. ಶಿಕ್ಷಣ ಮತ್ತು ಉದ್ಯೋಗದ ಸೌಲಭ್ಯಗಳು ದೊಡ್ಡ ಪ್ರಮಾಣದಲ್ಲಿ ಅಂಗವಿಕಲರಿಗೆ, ವಂಚನೆಯಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಅಂಗವಿಕಲರಿಗೆ ಉಪವಾಸ, ವನವಾಸಗಳಂತಹ ಕಷ್ಟಗಳು ಮುಂದುವರೆದಿವೆ. ಹಲವಾರು ಪ್ರಕರಣಗಳಲ್ಲಿ ಮನೆಯಿಂದ ಹೊರದೂಡಲ್ಪಡುವುದು ಸಹ ನಡೆದಿದೆ.

ಇಂತಹ ಹಿನ್ನೆಲೆಯಲ್ಲಿ ಅಂಗವಿಕಲರ ಸಂಘಟನೆ ಮತ್ತು ಚಳುವಳಿ ಬೆಳೆಯಬೇಕಾಗಿದೆ.

ಜನಶಕ್ತಿ : ಅಂಗವಿಕಲರ ನಡುವೆ ಈಗಾಗಲೇ ಕೆಲವು ಸಂಘಗಳು ಕೆಲಸ ಮಾಡುತ್ತಿವೆಯಲ್ಲಾ?

ಜಿ.ಎನ್.ನಾಗರಾಜ್ : ಸದ್ಯಕ್ಕೆ ಕೆಲವು ಎನ್.ಜಿ.ಒ.ಗಳು ಅಂಗವಿಕಲರ ನಡುವೆ ಕೆಲಸ ಮಾಡುತ್ತಿವೆ. ಎನ್.ಜಿ.ಒ.ಗಳೇ ಅಂಗವಿಕಲರ ಪರವಾಗಿ ಬೇಡಿಕೆಗಳನ್ನು ಮಂಡಿಸುವ ಒತ್ತಾಯಿಸುವ ಕೆಲಸಗಳನ್ನು ಮಾಡುತ್ತಿವೆ. ಕೆಲವು ಕಡೆ ಅಂಗವಿಕಲರದ್ದೇ ಆದ ಸಂಘಟನೆಗಳು ಕೆಲಸ ಮಾಡುತ್ತಿವೆ. ಇದರಲ್ಲಿ ಕೆಲವು ಅಂಗವಿಕಲರ ಬಗೆಗೆ ಕಾಳಜಿಯೊಂದಿಗೆ ಕೆಲಸ ಮಾಡಿದರೆ, ಕೆಲವು ಅವಕಾಶವಾದಿಗಳಾಗಿವೆ. ಅಂಗವಿಕಲತೆಯ ಸ್ವರೂಪದ ಆಧಾರದಲ್ಲಿ ಪ್ರತ್ಯೇಕ ಪ್ರತ್ಯೇಕವಾದ ಸಂಘಟನೆಗಳಿವೆ. ಅಂಥರ ಸಂಘಟನೆಯ ರೀತಿಯಲ್ಲಿ ಇಂತಹ ಸಂದರ್ಭದಲ್ಲಿ ಅಂಗವಿಕಲರೆಲ್ಲರ ಒಗ್ಗಟ್ಟು ಸಾಧಿಸುವ ಅಂಗವಿಲಕರ ಹಕ್ಕುಗಳಿಗಾಗಿ ಒತ್ತಾಯಿಸುವ ಹೋರಾಟ ಮನೋಭಾವದ ವಿಶಾಲ ಸಂಘಟನೆಯನ್ನು ರೂಪಿಸುವ ಅಗತ್ಯ ಕಂಡುಬಂದಿದೆ.

ಅಂಗವಿಲಕರ ಕುಟುಂಬವನ್ನು ಮುಖ್ಯವಾಗಿ ಅಂಗವಿಕಲರ ಪಾಲಕರನ್ನು ಚಳುವಳಿಗೆ

ಪುಟ 12

ಅನ್ನ ಅನ್ನ... ತಿನ್ನುವುದೇನನ್ನ...?

ಆಹಾರದ ಹಕ್ಕು ಮತ್ತು ಬೆಲೆ ಏರಿಕೆ ವಿರುದ್ಧ ರಾಷ್ಟ್ರ ವ್ಯಾಪಿ ಆಂದೋಲನ - ಸಮಾವೇಶದ ನಿರ್ಧಾರ

ಜೀವನಕ್ಕೆ ಅಗತ್ಯವಾದ ವಸ್ತುಗಳ ಬೆಲೆ …ರುತ್ತಲೇ ಇದೆ. ಗೋದಿ, ಎಣ್ಣೆ, ಉಪ್ಪು ಬೆಲೆ ಶೇ.12 …ಂದ 20 ಕ್ಕೆ ಏರಿದೆ. ತರಕಾರಿ ಬೆಲೆಗಳು ಬರೋಬ್ಬರಿ …ರಡು ಪಟ್ಟು. ಬೇಳೆ ಕಾಳುಗಳದ್ದೂ ಇದೇ ಸ್ಥಿತಿ. …ೂಗರಿ ಬೇಳೆ 100 ರೂ. ಸಕ್ಕರೆ ರೂ.30 ಕ್ಕೆ ಹೆಚ್ಚು. …ಗ್ರಾಹಕರು ತತ್ತರಿಸುತ್ತಿದ್ದಾರೆ. 246 ಜಿಲ್ಲೆಗಳು ಬರದ …ರವಡೆಗೆ ದಿನದಿನವೂ ಹೆಚ್ಚುವ, ಅದೂ ಬರದ …ಾದೆಯ ನಡುವೆ ಕೋಟ್ಯಾಂತರ ಜನರ ಸ್ಥಿತಿ …ನಾಗಬೇಕು? ವಿಶ್ವ ಆಹಾರ …ೂಚಿ ಹೇಳುವಂತೆ …ಹಾರದ ಕನಿಷ್ಠ …ವಶ್ಯಕತೆಗಳಿಂದ …ಂಚಿತರಾಗಿ, …ೌಷ್ಟಿಕತೆಯಿಂದ …ರಳುತ್ತಿರುವ 88 ದೇಶಗಳ …್ಯಾಂಕ್ ಪಟ್ಟಿಯಲ್ಲಿ ಭಾರತ …ನೇ ಸ್ಥಾನದಲ್ಲಿದೆ. ಈಗಿನ …ಲೆ ಏರಿಕೆಯು ಆಹಾರ, …ಗತ್ಯ ವಸ್ತುಗಳು ಜನರಿಗೆ ಸಿಗದಂತೆ ಮಾಡಿದೆ. ಬಡ …ಕ್ಕಳು, ಮಹಿಳೆಯರು ವಿಶೇಷವಾಗಿ ಇದರ …ೂಡೆತಕ್ಕೆ ಹೆಚ್ಚು ನಡುಗುತ್ತಿದ್ದಾರೆ.



ಪರಿಸ್ಥಿತಿ ಇಷ್ಟು ಘೋರವಾಗಿದ್ದರೂ ಕೇಂದ್ರದ …ಯು.ಪಿ.ಎ ಸರ್ಕಾರ ಜನರನ್ನು ರಕ್ಷಿಸುವ ಕ್ರಮ …ಕೈಗೊಳ್ಳುವುದರ ಬದಲು ಆಹಾರ ಭದ್ರತಾ …ಕಾಯ್ದೆಯೊಂದನ್ನು ತರಲು ಮುಂದಾಗಿದ್ದು ಅದು …ಗತಾರ್ಹವಾದರೂ ಸೂಚಿತ ಕೆಲವು ಕ್ರಮಗಳಿಂದ …ಸ್ಥಿತಿಯನ್ನು ಇನ್ನಷ್ಟು ಹದಗೆಡಿಸುವ ದಿಕ್ಕಿನಲ್ಲಿ …ರಟಿದೆ. ಈ ಹಿನ್ನೆಲೆಯಲ್ಲಿ ಆಹಾರದ ಹಕ್ಕಿಗಾಗಿ …ಹಾರದ ಭದ್ರತೆಗಾಗಿ ಹೋರಾಡದೇ …ಸಮುದಾಯಗಳಿಗೆ ಅನ್ಯ ಮಾರ್ಗವೇ ಇಲ್ಲವಾಗಿದೆ. …ಹೀಗಾಗಿ …ಂದ ಆಹಾರದ ಹಕ್ಕಿಗಾಗಿ ಜನತೆಯ ವಿಶಾಲ …ವಿರೋಧದ ಚಳುವಳಿಯನ್ನು, ಸಂಘಟಿಸುವ …ನಿಟ್ಟಿನಲ್ಲಿ ಇತ್ತೀಚಿಗೆ ಇದೇ ಆಗಸ್ಟ್ 26 ರಂದು …ರಾಷ್ಟ್ರಮಟ್ಟದ ಸಮಾವೇಶವನ್ನು ನವದೆಹಲಿಯಲ್ಲಿ …ಸಿಪಿಐ(ಎಂ) ಪಕ್ಷವು ಸಂಘಟಿಸಿತ್ತು.

…ನವದೆಹಲಿಯ ಮಾವಳಂಕರ್ ಹಾಲ್‌ನಲ್ಲಿ …ದ ಈ ಸಮಾವೇಶದಲ್ಲಿ 1500 ಕ್ಕೂ ಅಧಿಕ ಪ್ರತಿನಿಧಿಗಳು ದೇಶದ ಬಹುತೇಕ ಎಲ್ಲಾ ರಾಜ್ಯಗಳಿಂದಲೂ ಪಾಲ್ಗೊಂಡಿದ್ದರು. 'ಆಹಾರದ ಹಕ್ಕು ಮತ್ತು ಬೆಲೆ ಏರಿಕೆ ವಿರುದ್ಧದ ಈ ಸಮಾವೇಶವನ್ನು ತ್ರಿಪುರಾ ರಾಜ್ಯದ ಮುಖ್ಯಮಂತ್ರಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಮಾಣಿಕ್ ಸರ್ಕಾರ್‌ರವರು ಉದ್ಘಾಟಿಸಿದರು. 'ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಆಹಾರಭದ್ರತಾ ಕಾಯ್ದೆ ತರುವ ಹೆಸರಿನಲ್ಲಿ ಈಗಿರುವ ಸ್ವರೂಪವನ್ನು ಹಾಳು ಮಾಡುವುದೂ ಅಲ್ಲದೇ ಆಹಾರದ ಅಭದ್ರತೆಯನ್ನು ಶಾಸನಬದ್ಧಗೊಳಿಸುತ್ತಿದೆ ಮತ್ತು ಪೌಷ್ಟಿಕತೆಯ ಸಮಸ್ಯೆಯನ್ನು ಇನ್ನೂ ಹಾಳುಗೆಡಹಲಿದೆ ಎಂದು ಉದ್ಘಾಟನಾ ಭಾಷಣದಲ್ಲಿ ಹೇಳಿದರು.

ಈ ಸಮಾವೇಶವು ಎರಡು ಅಧಿವೇಶನ ಹೊಂದಿತು.

1. ಬಿ.ಪಿಎಲ್ ಮತ್ತು ಎ.ಪಿ.ಎಲ್ ಪದ್ಧತಿಯಲ್ಲಿಯ ದೋಷಗಳು ಮತ್ತು ಸಾರ್ವತ್ರಿಕ ಪಡಿತರ ಹಂಚಿಕೆ ವ್ಯವಸ್ಥೆಯನ್ನು ಹೊಂದಲು ಇರುವ ಸಮಸ್ಯೆಗಳು.

2) ಆಹಾರದ ಉತ್ಪಾದನೆ ಮತ್ತು ಅದರ ಸಂಗ್ರಹದಲ್ಲಿನ ಸಮಸ್ಯೆಗಳು ಹೀಗಿದ್ದವು.

ಉದ್ಘಾಟನೆ ನಂತರದ ಎರಡನೇ ಅಧಿವೇಶನದ ಅಧ್ಯಕ್ಷತೆಯನ್ನು ಪಿ.ಬಿ. ಸದಸ್ಯರಾದ ಕಾಂ.ಎಮ್.ಕೆ.ಪಂಧೆ ವಹಿಸಿದ್ದರು.

ಇದರಲ್ಲಿ ವಿಶೇಷವಾಗಿ ಎಡ ಶಕ್ತಿಗಳ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಸಿಪಿಐ(ಎಂ) ಮಧ್ಯಪ್ರವೇಶದ ಬಗ್ಗೆ ವಿವರವಾಗಿ ವಿಷಯ ಮಂಡಿಸಿ ಚರ್ಚಿಸಲಾಯಿತು. ಪಶ್ಚಿಮ ಬಂಗಾಳದ ಬಗ್ಗೆ ಹಣಕಾಸು ಸಚಿವ ಕಾಂ.ಅಶಿಂದಾಸ್ ಗುಪ್ತಾ, ಕೇರಳದಲ್ಲಿನ ಮಧ್ಯಪ್ರವೇಶದ ಬಗ್ಗೆ ಸಚಿವರಾಗಿರುವ ಥಾಮಸ್ ಐಸಾಕ್‌ರವರು ಬೆಲೆ ಏರಿಕೆಯ ಈ ದಿನಗಳಲ್ಲಿಯೂ ಜನರನ್ನು ರಕ್ಷಿಸಲು ಕೈಗೊಂಡ

ಪುಟ 12 ಕ್ಕೆ

ದೇಶವ್ಯಾಪಿ ಚಳುವಳಿಗೆ ಕರೆ

…ಬರ ಭಾದಿತ ಪ್ರದೇಶಗಳಲ್ಲಿ ಪರಿಹಾರ …ಕಾರ್ಯಗಳು, ಮಿರಿಮೀರಿದ ಬೆಲೆಯೇರಿಕೆ ಹಾಗೂ …ಆಹಾರದ ಭದ್ರತೆ'ಯ ಈ ಮೂರು ಪ್ರಶ್ನೆಗಳ …ಆಧಾರದಲ್ಲಿ ರಾಷ್ಟ್ರವ್ಯಾಪಿ ಆಂದೋಲನವನ್ನು …ನಡೆಸಲು ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ …ಪ್ರಕಾಶ್ ಕಾರಟ್‌ರವರು ಕರೆ ನೀಡಿದರು. …ಆಹಾರಭದ್ರತೆಯ ಕಾಯ್ದೆಯನ್ನು ತಾತ್ವಿಕವಾಗಿ …ಸ್ವಾಗತಿಸಿದ ಅವರು ಅದರಲ್ಲಿನ ಹಾನಿಕಾರಕವಾದ …ನಿರ್ದಿಷ್ಟ ಶಿಫಾರಸುಗಳನ್ನು ತಿರಸ್ಕರಿಸಿದರು. ಎಡಪಕ್ಷಗಳು ಜಂಟಿಯಾಗಿ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ರಾಜ್ಯಮಟ್ಟದ ರ್‍ಯಾಲಿ ಹಾಗೂ ಸಭೆಗಳನ್ನು ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ನಡೆಸುವುದಾಗಿ, ಇದರಲ್ಲಿ ಬೇಡಿಕೆ ಒಪ್ಪುವ ಇತರೆ ರಾಜ್ಯಮಟ್ಟದ ಪಕ್ಷಗಳನ್ನು ಒಳಗೊಳಿಸುವುದಾಗಿ ಘೋಷಿಸಿದರು.

ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಸೇರಿದ್ದ ಸಿಪಿಐ(ಎಂ) ರಾಜ್ಯಸಮಿತಿಯು ಆ ಕರೆಯನ್ನು ವ್ಯಾಪಕವಾಗಿ ಜಾರಿಗೊಳಿಸಲು ನಿರ್ಧರಿಸಿತು.

ಆಹಾರ ಭದ್ರತೆಗಾಗಿ ಆಂದೋಲನದ ಘೋಷಣೆ

ಸಮಾವೇಶದಲ್ಲಿ ನಿರ್ಧರಿಸಿದ ಬೇಡಿಕೆಗಳ ಪಟ್ಟಿ

ಬೆಲೆ ಏರಿಕೆ ವಿರುದ್ಧ :

★ ಎಲ್ಲಾ ಅಗತ್ಯ ವಸ್ತುಗಳ ಮುಂಗಡ ವ್ಯಾಪಾರ ನಿಷೇಧಿಸಿ.

★ ರೇಷನ್ ವ್ಯವಸ್ಥೆ ಬಲಪಡಿಸಿ. ಎಪಿಎಲ್ ವಿಭಾಗಕ್ಕೆ ಕಡಿತಗೊಳಿಸಿದ ಆಹಾರ ಧಾನ್ಯಗಳ ರಾಜ್ಯದ ಭಾಗವನ್ನು ಪುನಃ ನೀಡಬೇಕು

★ ದಾಸ್ತಾನಿಗೆ ತಡೆ ; ದಾಸ್ತಾನುಗಾರರು ಹಾಗೂ ಕಾಳ ಸಂತೆ ಕೋರರ ವಿರುದ್ಧ ಕಠಿಣ ಕ್ರಮ.

★ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ವಾಪಸ್ಸಾಗಲಿ

ಬರ ಪೀಡಿತ ಪ್ರದೇಶಗಳಲ್ಲಿ :

★ ಎಲ್ಲಾ ಬರಪೀಡಿತ ಪ್ರದೇಶಗಳಲ್ಲಿ ಹಾನಿಗೊಳಗಾದ ಕುಟುಂಬಗಳಿಗೆ ತುರ್ತಾಗಿ ಆಹಾರ ಧಾನ್ಯಗಳ ವಿತರಣೆ.

★ ಬರಪೀಡಿತ ಪ್ರದೇಶಗಳಲ್ಲಿ ಕೆಲಸದ ದಿನಗಳಲ್ಲಿ ಕನಿಷ್ಠ 100 ರೂ. ಸಿಗಲು ಅನುಕೂಲವಾಗುವಂತೆ ಉದ್ಯೋಗ ಖಾತ್ರಿ ಯೋಜನೆಯನ್ನು ವಿಶಾಲವಾಗಿ ಜ್ಯಾರಿಗೊಳಿಸುವುದು ಹಾಗೂ ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳಿಗೆ ಸೂಕ್ತ ಧನ ಸಹಾಯ. 100 ದಿನಗಳ ಮಿತಿಯನ್ನು ತೆಗೆದು, ಕೇಳಿದಾಗ ಕೆಲಸ ನೀಡುವುದು. ನಗದು ಹಣದ ಜತೆಯಲ್ಲಿ ಅಗತ್ಯವಿರುವ ಕಡೆಗಳಲ್ಲಿ ಆಹಾರ ಧಾನ್ಯಗಳನ್ನು ನೀಡಬಹುದು.

★ ನಿರಂತರ ಕುಡಿಯುವ ನೀರಿನ ಪೂರೈಕೆ.

★ ಜಾನುವಾರುಗಳಿಗೆ ಮೇವುಗಳನ್ನು ನೀಡುವುದು.

ಆಹಾರ ಭದ್ರತೆ ಕಾಯಿದೆಗಾಗಿ ಒತ್ತಾಯ :

★ ನಿಗದಿ ಪಡಿಸಿದ ರೇಷನ್ ಬದಲಾಗಿ ಸಾರ್ವತ್ರಿಕ ರೇಷನ್ ವ್ಯವಸ್ಥೆ ; ಉದ್ದೇಶಿತ ಕಾಯಿದೆಯ ಅಡಿಯಲ್ಲಿನ ಅರ್ಹತೆಗಳನ್ನು ಕೇಂದ್ರದ ಬಡತನ ಅಂದಾಜುಗಳಿಂದ ಪ್ರತ್ಯೇಕಿಸಬೇಕು.

★ ಪ್ರತಿ ಕುಟುಂಬಕ್ಕೆ ಕೆ.ಜಿ.1ಕ್ಕೆ ರೂ 2 ರಂತೆ 35 ಕೆ.ಜಿ. ಆಹಾರ ಧಾನ್ಯಗಳನ್ನು ಕೇಂದ್ರ ಸರ್ಕಾರ ನೀಡುವುದು

★ ಬೇಳೆ ಕಾಳು, ಸಕ್ಕರೆ, ಅಡುಗೆ ಎಣ್ಣೆ, ಸೀಮೆ ಎಣ್ಣೆ ಮುಂತಾದ ವಸ್ತುಗಳನ್ನು ಸಬ್ಸಿಡಿ ದರದಲ್ಲಿ ನೀಡುವಂತೆ ಕಾನೂನಿನಲ್ಲಿ ಖಾತ್ರಿ ಮಾಡುವುದು.

★ ಉದ್ದೇಶಿತ ಕಾಯಿದೆಯಲ್ಲಿ ಮಧ್ಯಾಹ್ನದ ಊಟ(ಬಿಸಿಯೂಟ) ಮತ್ತು ಐಸಿಡಿಎಸ್ ಪೌಷ್ಠಿಕ ಆಹಾರದಂತಹ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಆಹಾರ ಮತ್ತು ಪೌಷ್ಠಿಕಾಂಶಗಳ ಯೋಜನೆಯಲ್ಲಿ ಸೇರಿಸುವುದು.

★ ಸಾರ್ವಜನಿಕ ಹೂಡಿಕೆಯ ಮೂಲಕ ಆಹಾರ ಧಾನ್ಯಗಳು, ಬೇಳೆ ಕಾಳುಗಳು, ಕಬ್ಬು ಮತ್ತು ಎಣ್ಣೆ ಕಾಳು ಇತ್ಯಾದಿ ಉತ್ಪಾದನೆಯಲ್ಲಿ ರಾಷ್ಟ್ರೀಯ ಸ್ವಾವಲಂಬನೆಯನ್ನು ಸಾಧಿಸುವುದು. ರೈತರ ಬೆಳೆಗಳಿಗೆ ನ್ಯಾಯವಾದ ಬೆಲೆಯನ್ನು ಖಾತರಿ ಮಾಡುವುದರೊಂದಿಗೆ ಕೃಷಿ ವಿಸ್ತರಣ ಸೇವೆಗಳನ್ನು ಮತ್ತು ಸೂಕ್ತವಾದ ಭೂ ಬಳಕೆ ನೀತಿಯನ್ನು ರೂಪಿಸುವುದು. ಸಾರ್ವಜನಿಕ ಧಾನ್ಯ ಶೇಖರಣೆಯನ್ನು ವಿಸ್ತರಿಸುವುದು. ಭೂ ಸುಧಾರಣೆ ಜ್ಯಾರಿಗೊಳಸಿವುದು.

★ ನ್ಯಾಯ ಬೆಲೆ ಅಂಗಡಿಗಳ ಮೂಲಕ ರೇಷನ್ ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ಜವಾಬ್ದಾರಿಯನ್ನು ಖಾತ್ರಿಗೊಳಿಸುವುದು.

ಆಂದೋಲನದ ಸ್ಥೂಲ ಮುನ್ನೋಟ

ರಾಜ್ಯದಲ್ಲಿ ಆಹಾರಕ್ಕಾಗಿ ಆಂದೋಲನವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿವೆ. ಎಡಪಕ್ಷಗಳು ವಿವಿಧ ಸಾಮೂಹಿಕ ಸಂಘಟನೆಗಳು ಸೇರಿ ಹೋರಾಟ ರೂಪಿಸುವ ಪ್ರಯತ್ನ ನಡೆದಿದೆ.

ರಾಜ್ಯಮಟ್ಟದ ಸಮಾವೇಶ, ರಾಜ್ಯಮಟ್ಟದ ಬೃಹತ್ ರ್‍ಯಾಲಿ, ಪಾರ್ಲಿಮೆಂಟ್ ಅಧಿವೇಶನ ಆರಂಭವಾದಾಗ ದೆಹಲಿ ಚಲೋ ಇತ್ಯಾದಿ ಅಂದಾಜುಗಳಿವೆ. ಪ್ರಸ್ತಾವಗಳು ಅಂತಿಮಗೊಳ್ಳಬೇಕಿವೆ.

ಉದ್ಯೋಗ ಖಾತ್ರಿ ಯೋಜನೆಯಲ್ಲಿ 200 ದಿನಗಳ ಕೆಲಸ, ರಾಜ್ಯದಲ್ಲಿ ಕಾಳಸಂತೆಕೋರರ ವಿರುದ್ಧ ನಿರ್ದಿಷ್ಟ ಕ್ರಮ ಒತ್ತಾಯ ಇತ್ಯಾದಿ ಹಲವು ನಿರ್ದಿಷ್ಟ ಅಂಶಗಳ ರಾಜ್ಯ ಚಳುವಳಿಯ ಬೇಡಿಕೆಯಲ್ಲಿ ಸೇರಲಿವೆ.

ಡಬ್ಲ್ಯೂ.ಟಿ.ಒ ಮಾತುಕತೆಯಲ್ಲಿ ದೇಶದ ಹಿತವನ್ನು ಬಲಿಕೊಡುತ್ತಿರುವ ಯುಪಿಎ ಸರ್ಕಾರ

ಕಳೆದೆರಡು ದಶಕಗಳಿಂದ ಗಂಭೀರ ಸ್ವರೂಪದ ಬರವನ್ನು ದೇಶ ಎದುರಿಸುತ್ತಿದ್ದು, ಇದು ಕೃಷಿ ವಲಯದ ಸಂಕಷ್ಟ ಮತ್ತು ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಜನಜೀವನದ ಪರಿಸ್ಥಿತಿಯನ್ನು ಇನ್ನಷ್ಟು ಬಿಗಾಡಾಯಿಸಿದೆ. ನವ-ಉದಾರವಾದಿ ಆರ್ಥಿಕ ನೀತಿಗಳ ದುಷ್ಪರಿಣಾಮಗಳು ಭೀಕರ ಹೊಡೆತಗಳಿಂದ ತತ್ತರಿಸುತ್ತಿರುವ ಜನ ಸಾಮಾನ್ಯ ರಿಂದ ಹಿಡಿದು ನೀತಿ ನಿರೂಪಕರವರೆಗೆ ಎಲ್ಲರಿಗೂ ಗೊತ್ತಿರುವಂಥದೆ. ಆದರೆ ದೇಶದ ಬಹುಸಂಖ್ಯಾತ ಜನತೆಯನ್ನು ಸಾವಿನಂಚಿಗೆ ದೂಕುತ್ತಾ ಜನಜೀವನದ ಮೇಲೆ ಪ್ರಹಾರ ಮಾಡುವಂಥಹ ನೀತಿಗಳನ್ನೇ ಮುಂದುವರಿಸಲು ಯುಪಿಎ ಸರ್ಕಾರ ಮಾತ್ರ ಪಣತೊಟ್ಟಂತಿದೆ.

ಕಳೆದ ಎಂಟು ವರ್ಷಗಳ ಹಿಂದೆ ದೋಹಾ ನಗರದಲ್ಲಿ ನಡೆದ ಡಬ್ಲ್ಯೂ?ಟಿಒ ವ್ಯಾಪಾರ ವಾಣಿಜ್ಯ ಸಭೆಯಲ್ಲಿ ಅಭಿವೃದ್ಧಿಹೊಂದುತ್ತಿರುವ ದೇಶಗಳು ಕೃಷಿವಲಯದಲ್ಲಿ ದೇಶೀಯ ಮಾರುಕಟ್ಟೆಯನ್ನು ಮುಕ್ತವಾಗಿ ತೆರೆಯಲು ಅಭಿವೃದ್ಧಿಹೊಂದಿದ ದೇಶಗಳು ಹಾಕಿದ ಒತ್ತಡಕ್ಕೆ ಮಣಿದಿರಲಿಲ್ಲ. ಹೀಗೆ ಕುಸಿದು ಬಿದ್ದಿದ ಡಬ್ಲ್ಯೂ?ಟಿಒ ದೋಹಾ ಸುತ್ತಿನ ಮಾತುಕತೆಗಳಿಗೆ ತಾನು ಜೀವತುಂಬುವ ಕಾರ್ಯಭಾರವನ್ನು ವಹಿಸಿಕೊಂಡಿರುವ ಹೊಸ ಯುಪಿಎ ಸರ್ಕಾರವು ಬಹಳ ತರಾತುರಿಯಿಂದ 2009ರ ಸೆಪ್ಟೆಂಬರ್ 3 ಮತ್ತು 4ರಂದು ನವದೆಹಲಿಯಲ್ಲಿ ಡಬ್ಲ್ಯೂ?ಟಿಒ ವ್ಯಾಪಾರ ಮಂತ್ರಿಗಳ ಸಭೆಯನ್ನು ಏರ್ಪಡಿಸಿದೆ. ಇದಕ್ಕೆ ಪೂರ್ವಭಾವಿಯಾಗಿ ಜೂನ್ 9ರಂದು ನಮ್ಮ ದೇಶದ ವಾಣಿಜ್ಯ ಮಂತ್ರಿ ಆನಂದ ಶರ್ಮ ಅಮೇರಿಕಾದ ವ್ಯಾಪಾರ ಪ್ರತಿನಿಧಿ ರಾನ್ ಕಿರ್ಕ್ ರೊಂದಿಗೆ ತಮ್ಮ ಪ್ರಥಮ ಅಂತರಾಷ್ಟ್ರೀಯ ಭೇಟಿಯಲ್ಲಿ ಮಾತುಕತೆಯಾಡಿದ್ದು ಬಹುಪಕ್ಷೀಯ ಮಾತುಕತೆಗಳನ್ನು ಪುನರಾರಂಭಿಸಲು ಒಪ್ಪಿಕೊಂಡಿದ್ದಾರೆ. ಇದರ ನಂತರ ಜೂನ್ 15ರಂದು ಅಮೇರಿಕಾದ ವಾಣಿಜ್ಯ ಕಾರ್ಯದರ್ಶಿ ಗ್ಯಾರಿ ಲಾಕ್, ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಮತ್ತು ರಾನ್ ಕಿರ್ಕ್ ರವರನ್ನು ನಮ್ಮ ವಾಣಿಜ್ಯ ಮಂತ್ರಿಯು ಬಹುರಹಸ್ಯವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ತರಾತುರಿ ಭೇಟಿಗಳನ್ನು ಗಮನಿಸಿದರೆ, ಡಬ್ಲ್ಯೂ?ಟಿಒ ವ್ಯಾಪಾರ ಮಂತ್ರಿಗಳ ಸಭೆಯು ನವೆಂಬರ್ 30ರಿಂದ ಡಿಸೆಂಬರ್ 2 ರವರೆಗಿದ್ದರೂ ಕೂಡ, ಅದಕ್ಕೂ ಮುನ್ನವೇ ದೋಹಾ ಸುತ್ತಿನ ಮಾತುಕತೆ ಕುರಿತಂತೆ ದ್ವಿಪಕ್ಷೀಯ ಒಪ್ಪಂದವೊಂದಕ್ಕೆ ಸಹಿ ಹಾಕಲು ಉತ್ಸುಕಗೊಂಡಿರುವಂತಿದೆ. ದೆಹಲಿಯಲ್ಲಿ ಜರುಗುತ್ತಿರುವ ಡಬ್ಲ್ಯೂ?ಟಿಒ ವ್ಯಾಪಾರ ಮಂತ್ರಿಗಳ ಮಾತುಕತೆಯು ಭಾರತೀಯ ಲೋಕಸಭೆಗೆ ತಿಳಿಸದೆ ಮೋಸದಿಂದ ನಡೆಸುತ್ತಿರುವ ಕಾರ್ಯಕ್ರಮವಾಗಿದೆ. ಇಲ್ಲಿ ಗಮನಿಸಬೇಕಿರುವ ವಿಷಯವೆಂದರೆ ಬರ, ಬೆಲೆಯೇರಿಕೆ, ಅಪೌಷ್ಟಿಕತೆ, ಹಸಿವು ಮತ್ತು ರೈತರ ಆತ್ಮಹತ್ಯೆಗಳಿಂದ ಉಂಟಾಗಿರುವ ತೀವ್ರತರವಾದ ಸಂಕಷ್ಟ ಪರಿಸ್ಥಿತಿಯನ್ನು ಬಗೆಹರಿಸಲು ಅಂಥದೇ ತರಾತುರಿಯನ್ನು ಸರ್ಕಾರ ತೋರುತ್ತಿಲ್ಲವೆಂಬುದು.

ಇದೊಂದು ಪಿತೂರಿಯಿಂದ ಕೂಡಿದ್ದು ಭಾರತವು ಸೇರಿದಂತೆ ಇತರೆ ತೃತೀಯ ರಾಷ್ಟ್ರಗಳ ಹಿತಕ್ಕೆ ಧಕ್ಕೆಯುಂಟು ಮಾಡುವಂಥದ್ದು. ಭಾರತೀಯ ಪ್ರಜೆಗಳು ಎಲ್ಲ ರಂಗದಲ್ಲೂ ಕಳಕೊಳ್ಳುವುದೇ ಹೆಚ್ಚು:



ಕೃಷಿಯಿಂದ ಹಿಡಿದು ಮೀನುಗಾರಿಕೆ, ಸೇವೆಗಳು ಮತ್ತು ಕೈಗಾರಿಕೆಗಳ ಮೇಲೆ ಇದು ಗಂಭೀರವಾಗಿ ತಟ್ಟುತ್ತದೆ. ತೃತೀಯ ರಾಷ್ಟ್ರಗಳಿಗೆ ಕಿಂಚಿತ್ತೂ ವಿನಾಯಿತಿ ನೀಡದೆ ಅಮೇರಿಕಾ ಮತ್ತು ಯೂರೋಪ್ ಒಕ್ಕೂಟದಂಥ ಬಲಿಷ್ಠ ಶಕ್ತಿಗಳು ಎಲ್ಲ ಲಾಭವನ್ನು ತಮ್ಮ ಬಗಲಿಗೆ ಹಾಕಿಕೊಳ್ಳುತ್ತವೆ. ಇದು ಅಸಮಾನ ವ್ಯಾಪಾರ ವ್ಯವಸ್ಥೆಯನ್ನು ಬಲಗೊಳಿಸಲಿದ್ದು, ಕೃಷಿಯ ಮೇಲೆ ಬರೆ ಹಾಕಲಿದ್ದು, ಆಹಾರ ಅಭದ್ರತೆಯನ್ನು ಉಂಟುಮಾಡುವ ಮೂಲಕ ಬಹುಸಂಖ್ಯಾತ ಜನತೆಯನ್ನು ಸಂಕಷ್ಟಕ್ಕೆ ದೂಡುತ್ತದೆ. ನಮ್ಮ ದೇಶದಲ್ಲಿ ನೀಡುತ್ತಿರುವ ಕೃಷಿ ಸಹಾಯಧನವನ್ನು ಕಡಿತ/ಕಡಿಮೆಗೊಳಿಸಿ ಕೃಷಿ ಕೈಗಾರಿಕೆಗಳ ಲಾಬಿಗೆ ಮಣಿಯಲಾರದ ಅಮೇರಿಕಾ ಮತ್ತು ಯೂರೋಪ್ ಒಕ್ಕೂಟಗಳು ತಮ್ಮ ಅತಿಹೆಚ್ಚು ಸಹಾಯಧನ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುತ್ತವೆ.

ಅಮೇರಿಕಾದ ಸಾಮ್ರಾಜ್ಯಶಾಹಿಗೆ ಶರಣಾಗುತ್ತಿರುವ ಸರ್ಕಾರ:

ರಾಜಿಮಾಡಿಕೊಳ್ಳುತ್ತಿರುವ ಸರ್ಕಾರದ ಧೋರಣೆಯು ದೂರಗಾಮಿ ಮತ್ತು ಹಿಂಪಡೆಯಲಾಗದ ದುಷ್ಪರಿಣಾಮಗಳನ್ನು ಆರ್ಥಿಕತೆಯ ಮೇಲುಂಟುಮಾಡುತ್ತದೆ. ಅಲ್ಲದೆ ದೇಶದೊಳಗೆ ಆಮದಾಗುವ ವಸ್ತುಗಳ ಮೇಲೆ ತೆರಿಗೆ ಕಡಿತ, ಚಿಲ್ಲರೆ, ಬ್ಯಾಂಕಿಂಗ್, ವಿಮೆ, ಇತ್ಯಾದಿ ಯಂಥಹ ಬಹುಮುಖ್ಯ ಸೇವಾ ವಲಯಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರುಕಟ್ಟೆ ಪ್ರವೇಶ ನೀಡಬೇಕಾಗುತ್ತದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಾರುಕಟ್ಟೆಯಲ್ಲಿರುವ ಎಲ್ಲ ತಡೆಗೋಡೆಗಳನ್ನು ಮುಡಿಗ್ಗೆಯ್ಯುತ್ತಲೇ ಅಭಿವೃದ್ಧಿ ಹೊಂದಿರುವ ದೇಶಗಳ ರಕ್ಷಣಾತ್ಮಕ ತಡೆಗೋಡೆಗಳನ್ನು ಹಾಗೆಯೇ ಮುಂದುವರೆಸಲಾಗುವುದು. ಡಬ್ಲ್ಯೂ?ಟಿಒ ಪ್ರಸ್ತಾವನೆಗಳು ನಮ್ಮ ಕೃಷಿಯನ್ನು ರಕ್ಷಿಸುವಲ್ಲಿ ಇರುವ ಕನಿಷ್ಠ ವಿನಾಯಿತಿಗಳನ್ನು ಕೂಡ ತೆಗೆಯಬಯಸುತ್ತವೆ. ಆದರೆ ಅದೇ ಸಮಯದಲ್ಲಿ ಅಮೇರಿಕಾ ಮತ್ತು ಯೂರೋಪ್ ಒಕ್ಕೂಟದಲ್ಲಿ ನೀಡುತ್ತಿರುವ ವಿನಾಯಿತಿಗಳನ್ನು ದೋಹಾ ಸುತ್ತಿನ ಮಾತುಕತೆಗಳು ಮುಂದುವರೆಸಬಯಸುತ್ತವೆ. ಕೃಷಿ ಮತ್ತು ಕೃಷಿಯೇ[ತರ] ವಿಷಯಗಳ ಮೇಲಿನ ಭಾರತದ ಧೋರಣೆಯ[ು] ಕ್ಯಾನ್‌ಕನ್‌ನಲ್ಲಿ ನಡೆದ ಸಭೆಯಲ್ಲಿ ಭಾರ[ತ] ಅಡ್ಡದಾರಿ ಹಿಡಿದಿತ್ತು ಮತ್ತು ಡಬ್ಲ್ಯೂ?ಟಿಒ ದೋ[ಹಾ] ಸುತ್ತಿನ ಕುರಿತಂತೆ ಜಿನೋವಾದಲ್ಲಿ ನಡೆದ 20[0..] ಜುಲೈ ಒಪ್ಪಂದಕ್ಕೆ ಅನುಮತಿ ಸೂಚಿಸಿ[..] ಅದರಿಂದೀಚೆಗೆ ಭಾರತ ಸರ್ಕಾರವು ತ[..] ಇಳಿಸುವುದು, ಸಣ್ಣ ಕೈಗಾರಿಕೆಗಳ ರಕ್ಷಣೆ ಮತ್ತು [..] ಸಂರಕ್ಷಣೆಯಂಥಹ ಎಲ್ಲ ಅಂಶಗಳ ಮೇಲೂ ರಾ[ಜಿ] ಮಾಡಿಕೊಳ್ಳುತ್ತಾ ಬಂದಿದೆ. ಕೃಷಿ ಮತ್ತು ಕೃಷಿಯೇ[ತರ] ವಲಯದಲ್ಲಿ ಬದುಕುತ್ತಿರುವ ಕೋಟ್ಯಾಂತರ ಜೀ[ವ] ಬದುಕು ಈ ಮಾತುಕತೆಗಳ ಆಧಾರದ ಮೇ[ಲೆ] ನಿಂತಿದೆ. ದೋಹಾ ಬೆಳವಣಿಗೆಯ ಸುತ್ತಿನ ಮಾತು[..] ಆರಂಭವಾದಾಗಿನಿಂದ ದುಡಿಯುವ ಜನತೆ[..] ಒತ್ತಾಯದಿಂದಾಗಿ ಭಾರತವು ಇದರ ರಕ್ಷಣೆ[..] ಕಳೆದ ಎಂಟು ವರ್ಷಗಳ ಹೋರಾಟ ನಡೆ[..] ಇದನ್ನು ಮಣ್ಣುಪಾಲು ಮಾಡಲು ಯುಪಿಎ ಸ[ರ್ಕಾರ] ಸಕಲ ಸಿದ್ಧತೆ ನಡೆಸಿದೆಯಷ್ಟೆ.

ಬರದಿಂದ ತತ್ತರಿಸಿರುವ ಜನತೆಯನ್ನು ರ[ಕ್ಷಿಸಲು] ಕ್ರಮಕೈಗೊಳ್ಳಬೇಕಾದದ್ದು ಸರ್ಕಾರಕ್ಕೆ ಆದ್ಯ[ತೆಯ] ವಿಷಯವಾಗಬೇಕಿತ್ತಾದರೂ, ಅದರ ಆಸಕ್ತಿ[..] ಅಮೇರಿಕಾದ ಒತ್ತಡಕ್ಕೆ ಮಣಿದು ದೇಶದ ಜನ[ರ] ಹಿತವನ್ನು ಬಲಿಕೊಡಲು ಸಾಮ್ರಾಜ್ಯಶಾ[ಹಿಗೆ] ಶರಣಾಗತವಾಗಿರುವುದು ಎದ್ದುತೋರು[..] ಲೋಕಸಭೆಯಲ್ಲಿ ಯಾವುದೇ ಮಾತುಕತೆ ನ[..] ಈಗಾಗಲೇ ಭಾರತ-ಏಸಿಯಾನ್ ಮುಕ್ತ ವ್ಯಾ[ಪಾರ] ಒಪ್ಪಂದಕ್ಕೆ ಸಹಿ ಹಾಕಿ ರೈತರು ಮತ್ತು ಬಡಜನ[ರ] ಮೇಲೆ ಸದ್ದಿಲ್ಲದೆ ಧಾಳಿ ನಡೆಸಿಯಾಗಿದೆ.

ಈ ಹಿನ್ನೆಲೆಯಲ್ಲಿ ಯುಪಿಎ ಸರ್ಕಾರ[ದ] ಸಾಮ್ರಾಜ್ಯಶಾಹಿಗೆ ಶರಣಾಗುವ, ಜನವಿರೋ[ಧಿ] ನೀತಿಯನ್ನು ಖಂಡಿಸಿ ಕಾಸರಗೋಡಿ[ನಿಂದ] ತಿರುವನಂತಪುರದವರೆಗೆ ಅಕ್ಟೋಬರ್ 2[..] ಮಾನವ ಸರಪಳಿ ನಡೆಸಲು ಕಿಸಾನ್ ಸಭಾ[..] ನೀಡಿದೆ. ಸೆಪ್ಟೆಂಬರ್ 3ರಂದು 'ರಾಷ್ಟ್ರೀಯ [..] ದಿನ' ಎಂದು ದೇಶಾದ್ಯಂತ ಭಾರತೀಯ ಜನ[..] ಆಚರಿಸಿವೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ರಾಧಾಳ ಸಾವು ಖಂಡಿಸಿ ಎಸ್.ಎಫ್.ಐ. ಪ್ರತಿಭಟನೆ

ರಾಮಸಾಗರ ಗ್ರಾಮದ ಪಂಪಾ ವಿದ್ಯಾಪೀಠದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶನಿವಾರ 8ನೇ ತರಗತಿ ಓದುತ್ತಿದ್ದ ರಾಧ ಎಂಬ ವಿದ್ಯಾರ್ಥಿನಿ ವಾಂತಿಭೇದಿಯಿಂದ ಮೃತಪಟ್ಟಿರುವ ಘಟನೆಯನ್ನು ಖಂಡಿಸಿ ಹೊಸಪೇಟೆ ಎಸ್.ಎಫ್.ಐ ನೇತೃತ್ವದಲ್ಲಿ ಪ್ರತಿಭಟನೆಯನ್ನು ಮಾಡಲಾಗಿದೆ.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಎಸ್.ಎಫ್.ಐ ನ ಹೊಸಪೇಟೆ ತಾಲೂಕು ಅಧ್ಯಕ್ಷರಾದ ಕಲ್ಯಾಣಯ್ಯ ರಾಧವೆಂಬ ಒಬ್ಬ ವಿದ್ಯಾರ್ಥಿನಿ ಸಾವಿಗೆ ಇಂದು ವಾಸತಿಶಾಲೆಯಲ್ಲಿಯ ಮೂಲಭೂತ ಸಮಸ್ಯೆಗಳೆ ಕಾರಣ, ಒಂದು ಕಡೆ ಸರಕಾರ ಬಡವಿದ್ಯಾರ್ಥಿಗಳಿಗೆ ಸಾವಿರಾರು ಹಣವನ್ನು ಬಿಡುಗಡೆಗೊಳ್ಳಿಸಿರುವುದಾಗಿ ಹೇಳಿಕೊಳ್ಳುತ್ತದೆ ಆದರೆ ಅದೇ ಸಮಯದಲ್ಲಿ ವಾಸತಿಶಾಲೆಗಳಲ್ಲಿ ನೋಡಿದರೆ ಮಕ್ಕಳಿಗೆ ಒಂದು ತಿಂಗಳಿಗೆ 650 ರೂ ಊಟಕ್ಕೆ ಮಾತ್ರ ಕೊಡುವುದರ ಮೂಲಕ ಮಕ್ಕಳು ಅರೆಹೊಟ್ಟೆಯಿಂದ ಶಾಲೆಯಲ್ಲಿ ಪಾಠಕೇಳುವ ಪರಿಸ್ಥಿಯನ್ನು ತಂದಿದೆ ತಕ್ಷಣದಲ್ಲಿ ಸಂಬಂಧ ಪಟ್ಟ ಅಧಿಕಾರಿಗಳು, ಜನಪತ್ರಿನಿಧಿಗಳು ವಸತಿಶಾಲೆಯಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಬೇಕು. ಅದೇ ರೀತಿಯಾಗಿ ರಾಧಾಳ ಕುಟುಂಬಕ್ಕೆ 2,00,000 ರೂ ಹಣವನ್ನು ಇಲಾಖೆ,ಸರ್ಕಾರ ಪರಿಹಾರ ಕೊಡಬೇಕೆಂದು ಒತ್ತಾಯಿಸಿದರು.

ಈ ಹೋರಾಟವನ್ನು ಬೆಂಬಲಿಸಿ ಡಿ.ವೈ.ಎಫ್.ಐ ತಾಲೂಕು ಕಾರ್ಯದರ್ಶಿಗಳಾದ ಕೆ.ರಮೇಶ್ ಮಾತನಾಡಿದರು.

ಈ ಹೋರಾಟಕ್ಕೆ ಬಂದ ತಾಲೂಕು ಸ[..] ಕಲ್ಯಾಣ ಇಲಾಖೆಯ ಅಧಿಕಾರಿಯಾದ ಬಸವ[..] ಹೋರಾಟಗಾರರ ಮನವಿಯನ್ನು ಸ್ವೀಕರಿಸಿ[..] ಮುಂದೆ ಈ ರೀತಿಯಾದ ಯಾವುದೇ ಘಟ[ನೆ] ನಡೆಯಲು ಅವಕಾಶ ಕೊಡುವುದಿಲ್ಲ [..] ರೀತಿಯಾಗಿ ತಕ್ಷಣದಲ್ಲಿಯೇ ಇಲ್ಲಿಯ ಸಮಸ್ಯೆ[..] ಬಗೆಹರಿಸಲು ಕ್ರಮಕೈಗೊಳುವುದಾಗಿ ತಿಳಿಸಿದ್ದ[ರು].

ಈ ಸಂದರ್ಭದಲ್ಲಿ ಎಸ್.ಎಫ್.ಐ ನ ತಾ[ಲೂಕು] ಕಾರ್ಯದರ್ಶಿಯಾದ ಸುರೇಶ್, ಮುಖಂ[ಡರಾದ] ಅಜಯ್, ಡಿ.ವೈ.ಎಫ್.ಐ ನ ಮುಖಂ[ಡರಾದ] ಸಂತೋಷ್,ಸೇವಾನಂದ್, ಅಂಜೀ[..] ಭಾಗವಹಿಸಿದ್ದರು ಮಕ್ಕಳ ತಂದೆ-ತಾಯಿಗಳ[ು] ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸುರೇಶ್ ಚ[..]

ಮಳೆ ಬಂದಿದೆ, ಹಸೀ ಬರ ಮುಂದುವರೆದಿದೆ

ಕಳೆದ ಒಂದೆರಡು ವಾರಗಳಿಂದ ರಾಜ್ಯದಲ್ಲಿ ಮಳೆಯಾಗಿದೆ. ದನಕರುಗಳಿಗೆ ಕುಡಿಯುವ ನೀರು, ಮೇವಿಗೆ ಸ್ವಲ್ಪ ಆಸರೆಯಾದರೂ ಸಹ ಬೆಳೆ ಹಾಳಾಗಿ ಆಗಿರುವ ಹಾನಿಯೇನು ಕಡಿಮೆಯದಲ್ಲ. ತುರ್ತು ಪರಿಹಾರಗಳು ಅಗತ್ಯವಾಗಿವೆ.

ಬರ : ಬಳ್ಳಾರಿ ಜಿಲ್ಲೆಯ ಪರಿಸ್ಥಿತಿ

ಬಳ್ಳಾರಿ ಜಿಲ್ಲೆಯಲ್ಲಿ 12 ರಿಂದ 13 ಲಕ್ಷ ಎಕರೆಯಷ್ಟು ಕೃಷಿ ಭೂಮಿ ಇದೆ. ಈ ವರ್ಷದ ಮುಂಗಾರು ಮಳೆ ಕೈಕೊಟ್ಟಿದೆ. ಜಿಲ್ಲೆಯಲ್ಲಿ ಶೇ.ಸುಮಾರು 25 ರಷ್ಟು ಮಾತ್ರವೇ ನೀರಾವರಿ ಪ್ರದೇಶ. ಶೇ.75 ರಷ್ಟು ಒಣ ಭೂಮಿ. ಅಂದರೆ ಮಳೆ ಆಶ್ರಿತ ಪ್ರದೇಶ. ಕಪ್ಪು ಮಣ್ಣು ಮತ್ತು ಮಸಾರಿ ಮಣ್ಣು ಎನ್ನಲಾಗುವ ಕೆಂಪು ಮಣ್ಣು ಜಿಲ್ಲೆಯಲ್ಲಿ ಪ್ರಮುಖ ಮಣ್ಣಿನ ವಿಧಗಳು. ಮಳೆ ಆಶ್ರಯದ ಶೇ.70 ಭಾಗದಲ್ಲಿ ಬರ ಬೆಳೆಯನ್ನು ನುಂಗಿಹಾಕಿದೆ. ಮತ್ತೆ ಸುಮಾರು 3 ಲಕ್ಷ ಎಕರೆಯಷ್ಟು ಪ್ರದೇಶದಲ್ಲಿ ಬೆಳೆದ ಏಕದಳ ಧಾನ್ಯವಾದ ಜೋಳ, ಸಜ್ಜೆ, ಬಹುತೇಕ ವಿಫಲವಾಗಿದೆ. ಸುಮಾರು 3 ಲಕ್ಷ ಎಕರೆಯಷ್ಟು ವ್ಯಾಪ್ತಿಯಲ್ಲಿ ಬಿತ್ತನೆ ಮಾಡಲಾಗಿರುವ ದ್ವಿದಳ ಬೆಳೆಯಲ್ಲಿ ತೊಗರಿ, ಹೆಸರು, ಉದ್ದು, ಶೇಂಗಾ, ಸೂರ್ಯಕಾಂತಿ ಹಾಗೂ ಹತ್ತಿ ಮುಂತಾದವುಗಳಲ್ಲಿ ಹತ್ತಿ ಬೆಳೆಯಲು ಹೊರಟವರ ಪರಿಸ್ಥಿತಿ ಚಿಂತಾಜನಕವಾಗಿದೆ... ನೆಲಕಚ್ಚಿ ಬೀರದ್ದಾಗಿದೆ. ಹತ್ತಿ ಬೆಳೆ ಬಹುತೇಕ ಹಾಳಾಗಿದ್ದು, ರೈತರಿಗೆ ಕನಿಷ್ಟ ಎಕರೆಗೆ ಹಾಕಿರುವ ಬಂಡವಾಳ 5 ಸಾವಿರ ನಷ್ಟವಾಗಿದೆ. ಬೆಳೆ ಕೈಗೆ ಬಂದಿದ್ದರೆ ಬರಬಹುದಾಗಿದ್ದ ಆದಾಯ ಕೈತಪ್ಪಿ ಮೂಲ ಬಂಡವಾಳದ ಎರಡು ಪಟ್ಟು ನಷ್ಟವಾಗಿದೆ.


ಜಿಲ್ಲೆಯ ರೈತರಿಗೆ ಹಾಕಿದ ಬಂಡವಾಳ ಸುಮಾರು 300 ಕೋಟಿ ನಷ್ಟವಾಗಿದ್ದರೆ, ಬೆಳೆ ಕೈಗೆ ಬರಬಹುದಾಗಿದ್ದ ಆದಾಯ ಕೈತಪ್ಪಿ ಸುಮಾರು 600 ಕೋಟಿಯಷ್ಟು ನಷ್ಟವಾಗಿದೆ.

ಕಳೆದ ಒಂದೆರಡು ವಾರಗಳಲ್ಲಿ 'ಒಳ್ಳೆ' ಯ ಮಳೆ ಬಂದಿರುವುದರಿಂದ, ದನಕರುಗಳಿಗೆ ನೀರು ಸಿಗುವಂತಾಗಿದೆ. ಕೆರೆ ಕಟ್ಟೆಗಳಿಗೆ ಒಂದಷ್ಟು ನೀರು ಬರುವಂತಾಗಿದೆ ಎಂದೂ ಮತ್ತು ಹಿಂಗಾರು ಮಳೆಗೆ ಅನುಕೂಲ ಎಂದು ಸಂತೋಷಪಡ ಬಹುದು. ಆದರೆ ಈಗ ಬಂದ ಮಳೆಯಿಂದ ಮೆಣಸಿನ ಕಾಯಿಯಂತಹ ಬೆಳೆಗೆ ಹಾನಿಯಾಗಿದೆ. ಮಳೆ ಹೆಚ್ಚಾಗಿ ತೇವಾಂಶ ಹೆಚ್ಚಾದಲ್ಲಿ ಕಪ್ಪು ಮಣ್ಣಿನಲ್ಲಿ ಬೆಳೆದು ನಿಂತ ಬೆಳೆ ಕೊಳೆತೇಹೋಗುತ್ತದೆ. ಜೊತೆಗೆ ಮುಂಗಾರಿನ ಆರಂಭದಲ್ಲಿ ಹೀಗೆ ಆಗಿತ್ತು. ಮೊದಲು ಮಳೆ ಬಂತು. ನಂತರ ಕೈಕೊಟ್ಟಿತು.

ಕಳೆದ 2 ರಿಂದ 3 ವರ್ಷಗಳಿಂದ ಗಣಿಗಾರಿಕೆಯಲ್ಲಿ ಎಷ್ಟೋ ಜನ ರೈತರು ಕಂಡುಕೊಂಡಿದ್ದ ಉದ್ಯೋಗಕ್ಕೆ ಕುತ್ತು ಬಂದಿದೆ. ಅಂದರೆ ಅಕ್ರಮ ಗಣಿಗಾರಿಕೆ ಹೆಸರಿನಲ್ಲಿ ಬಿಜೆಪಿ ಸರ್ಕಾರ ತಮ್ಮ ಹೊಲಗಳಲ್ಲಿ ಅದಿರು ತೆಗೆಯಲು ಯತ್ನಿಸಿದ ರೈತರ ಮೇಲೆ ಚಾಟಿ ಬೀಸಿದೆ. ಇಂತಹ ಪರಿಸ್ಥಿತಿಯಲ್ಲಿ ರೈತ, ಕೂಲಿಕಾರರ ಪಾಲಿಗೆ 'ಸಂಜೀವಿನಿ'ಯಾಗಬಹುದಾಗಿದ್ದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿ ಮಾಡಲು ಸರ್ಕಾರ ಯಾವ ಗಂಭೀರ ಮುತುವರ್ಜಿಯನ್ನೂ ವಹಿಸಿಲ್ಲ. ಸುಮಾರು 300 ಕೋಟಿ ರೂಪಾಯಿಗಳಷ್ಟು ಕೆಲಸ ಮಾಡಿಸಬಹುದಾದ ಕಡೆ ಆಗಿರುವ ಕೆಲಸ ಕೇವಲ 3 ಕೋಟಿಯದು ಮಾತ್ರ.

ಜಿಲ್ಲೆಯ ಬಡವರು ಕೂಲಿಕಾರರು ಬೆಂಗಳೂರು, ಬಾಂಬೆ, ಗೋವಾ ಎಂದು ಹಿಂದೆಲ್ಲಾ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ಮಾಡಲು ಗುಳೆ ಹೋಗುತ್ತಿದ್ದರು. ಆದರೆ ಈಗ ಅಲ್ಲಿ ಕಟ್ಟಡ ನಿರ್ಮಾಣ ಕೂಡ ಕುಸಿದಿದ್ದು ಅಲ್ಲಿ ಕೂಡ ಕೆಲಸ ಸಿಗುವುದು ಕಷ್ಟವಾಗಿದೆ. ಅಗತ್ಯ ವಸ್ತುಗಳ ಬೆಲೆಗಳೆಲ್ಲಾ ಏರುತ್ತಿವೆ. ಜಿಲ್ಲೆಯಲ್ಲಿ ಜನ ನಡುವೆ ವ್ಯಾಪಕವಾಗಿ ರೋಗಗಳು ಹರಡುತ್ತಿವೆ. ಸುಮಾರು 150 ಗ್ರಾಮಗಳ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಇದೆ ಎಂಬ ವರದಿಯಿದೆ. ಇಲ್ಲಿ ರಾಜ್ಯದ ರಾಜಕೀಯವನ್ನು, ರಾಜ್ಯ ಬಿಜೆಪಿ ಸರ್ಕಾರವನ್ನು ತಮ್ಮ ಇಚ್ಛೆಗೆ ತಕ್ಕಂತೆ ಕುಣಿಸುತ್ತೇವೆ ಎಂಬ ಅಹಂ ನಿಂದ ಮೆರೆಯುತ್ತಿರುವ ಗಣಿ ಲೂಟಿಕೋರ ರೆಡ್ಡಿ ಮತ್ತು ಗ್ಯಾಂಗ್ ಗೆ ಮಾತ್ರ ಜನರ ಸಮಸ್ಯೆಗಳು ಯಾವುವು ಗಂಭೀರವಾಗಿ ಕಾಡುತ್ತಿಲ್ಲ ಎಂಬುದೇ ದೊಡ್ಡ ದುರಂತ.

ಗುಳೆ ಹೊರಟ ಜನ - ಇಂಡಿ ತಾಲ್ಲೂಕು




ಈ ನಡುವೆ ಜಿಲ್ಲೆಯ ಶಾಸಕರು, ರಾಜ್ಯದ ಆರೋಗ್ಯಮಂತ್ರಿಗಳು ಒಂದಷ್ಟು ದಿನ ಎಲ್ಲಿದ್ದಾರೆ ಎಂದು ಯಾರಿಗೂ ಗೊತ್ತಾಗದಂತೆ ನಾಪತ್ತೆಯಾಗಿ ಹೋಗಿದ್ದರು. ಮತ್ತೊಂದೆಡೆ ರಾಜ್ಯದ ಜನ ಡೆಂಗ್ಯೂ, ಹಂದಿಜ್ವರ ಮುಂತಾದವುಗಳಿಂದ ತತ್ತರಿಸುತ್ತಿದ್ದರು. ಹೀಗಿದೆ ಜಿಲ್ಲೆಯ ಪರಿಸ್ಥಿತಿ.


ಬಿಜಾಪುರ ಬರಗಾಲದಿಂದ 600 ಕೋಟಿ ಹಾನಿ

ಜಿಲ್ಲೆಯಲ್ಲಿ ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಬೆಳೆ ಒಣಗಿದ್ದು ಸುಮಾರು 600 ಕೋಟಿ ರೂಪಾಯಿ ಹಾನಿಯಾಗಿದೆ.

ಜಿಲ್ಲೆಯ 4.30 ಲಕ್ಷ ಎಕರೆ ಪೈಕಿ 3.78 ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿತ್ತು. 301 ಮಿ.ಮೀ ಆಗಬೇಕಾಗಿದ್ದ ಮಳೆ ಕೇವಲ 221 ಮಿ.ಮೀ ಆಗಿದೆ. ತೇವಾಂಶದ ಕೊರತೆಯಿಂದ ಬಿತ್ತಿದ ಬೆಳೆ ಒಣಗಿದೆ. 400 ಕೋಟಿ ರೂಪಾಯಿ ಬೆಳೆ ಹಾನಿಯಾಗಿದ್ದು ರೈತರು ಮುಂಗಾರು ಮಳೆಯನ್ನು ನಂಬಿದ ರೈತರಿಗೆ ನಿರಾಸೆಯಾಗಿದೆ. ಹೀಗಾಗಿ ಗುಳೆ ಹೊರಟಿದ್ದಾರೆ.

ಸರಿಯಾಗಿ ಮಳೆಯಾಗಿದ್ದರೆ ರೈತರು ಬಿಡುವಿಲ್ಲವಂತಾಗುತ್ತಿದ್ದರು. ಆದರೆ ರೈತರು ಕಟ್ಟೆ ಮೇಲೆ ಕುಳಿತು ಹರಟೆ ಹೊಡೆಯುತ್ತಿದ್ದಾರೆ. ಎತ್ತುಗಳು ಮನೆಯ ಮುಂದೆ ಒಣಕಲು ಕಣಿಕೆಯನ್ನು ತಿನ್ನುತ್ತಾ ನಿಂತಿವೆ. ಆದರೆ ರೈತರ ಜಮೀನುಗಳನ್ನೇ ನಂಬಿಕೊಂಡ ಕೃಷಿ ಕೂಲಿಗಳಿಗೆ ಕೆಲಸವಿಲ್ಲ. ಹೀಗಾಗಿ





ಬಿತ್ತನೆ ಮಾಡಿದ್ದು ಸುಮಾರು 200 ಕೋಟಿ ರೂಪಾಯಿ ಖರ್ಚು ವ್ಯರ್ಥವಾಗಿದೆ.

ಜಿಲ್ಲೆಯಲ್ಲಿ 2.27 ಲಕ್ಷ ಕುಟುಂಬಗಳಿದ್ದು, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 1.43 ಲಕ್ಷ ಕುಟುಂಬದವರು ಹೆಸರು ನೊಂದಾಯಿಸಿದ್ದಾರೆ. ಜಿಲ್ಲೆಯಲ್ಲಿ ಒಟ್ಟಾರೆ 12.59 ಲಕ್ಷ ಜಾನುವಾರುಗಳಿವೆ. ಮೇವಿನ ಕೊರತೆಯಾಗುವ ಸಂಭವವಿತ್ತು. ಇತ್ತೀಚಿನ ಮಳೆಯಿಂದ ಪರಿಸ್ಥಿತಿ ಸ್ವಲ್ಪ ಸುಧಾರಿಸಬಹುದು.

ಜಿಲ್ಲೆಯಲ್ಲಿ ಶೇ.60 ರಷ್ಟು ಬೆಳೆ ತೇವಾಂಶ ಕೊರತೆಯಿಂದ ಬಾಡಿ ಹೋದೆ. ಒಟ್ಟಾರೆ 98.357 ಹೆಕ್ಟೇರ್ ಪ್ರದೇಶ ಬಂಧಿತಗೊಂಡಿದೆ.

ಗುಳೆ ಹೊರಟ ಕೂಲಿಗಳು

ಬಿಜಾಪುರ ಜಿಲ್ಲೆಗೆ ಮತ್ತೊಮ್ಮೆ ಬರ ಅಪ್ಪಳಿಸಿದೆ. ಹೊಟ್ಟೆಪಾಡಿ ಗುಳೆ ಹೊರಟಿದ್ದಾರೆ.

ಅಶ್ವಿನಿ, ಭರಣಿ, ಮೃಗಶೀರಾ, ರೋಹಿಣಿ, ಆರಿದ್ರಾ, ಕೃತಿಕಾ............. ಹೀಗೆ ಸಾಲು ಸಾಲು ಮಳೆಗಳು ಸರಿಯಾಗಿ ಹನಿಯನ್ನು ಉದುರಿಸಲಿಲ್ಲ. ಅದರ ಪರಿಣಾಮ ರೈತರು ಕಂಗಾಲಾಗಿ ಹೋದರು. ಈ ಭಾಗದ ಪ್ರಮುಖ ವಾಣಿಜ್ಯ ಬೆಳೆಗಳಾದ ಉಳ್ಳಾಗಡ್ಡಿ, ಸೂರ್ಯಕಾಂತಿ, ಹೆಸರು ಬೆಳೆಗಳನ್ನು ಬೆಳೆಯುವ ರೈತರಿಗೆ ಇದರಿಂದ ದೊಡ್ಡ ಹಾನಿಯಾಗಿದೆ.

ಕೃಷಿ ಕಾರ್ಮಿಕರು ಗುಳೆ ಹೋಗದಂತೆ ಜಿಲ್ಲಾಡಳಿತ ತಡೆಯಬೇಕು ಎನ್ನುವುದು ಸ್ಥಳೀಯರ ಒತ್ತಾಯವಾಗಿದೆ.

ಶಂಕರರಾವ್, ಬಿಜಾಪುರ

ಬರ : ಬೆಂಗಳೂರು ಗ್ರಾಮಾಂತರ ಜಿಲ್ಲೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕನ್ನು ಹೊರತುಪಡಿಸಿ ಮಿಕ್ಕ 3 ತಾಲ್ಲೂಕುಗಳು ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ಬರಪೀಡಿತವೆಂದು ಘೋಷಿಸಲ್ಪಟ್ಟಿವೆ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಳೆದ 2008 ಜುಲೈ ತಿಂಗಳಲ್ಲಿ ಬಿತ್ತನೆಯಾಗಿರುವುದು ರಾಗಿ ಮಾತ್ರ. ಮತ್ತೊಂದು ಪ್ರಮುಖ ಬೆಳೆ ಜೋಳ. ಇದುವರೆವಿಗೂ ಬಿತ್ತನೆಯಾಗಿಲ್ಲ. ಬಿತ್ತನೆಯಾಗಿರುವ ರಾಗಿ ಬೆಳೆ ಸಹ ಶೇ.15 ರಿಂದ 20 ನಾಶವಾಗಿದೆ. ಅಥವಾ ಅರೆಬರೆ ಮೊಳಕೆ ಬಂದಿದೆ. ನಾಲ್ಕು ವಾರ ಸತತವಾಗಿ ಮಳೆ ಬಾರದ ಕಾರಣ ತೋಟದ ಬೆಳೆಗಳಿಗೆ ಅಡಿಕೆ, ತೆಂಗು ಮತ್ತು ತರಕಾರಿ ಬೆಳೆಗಳಿಗೆ ನೀರಿನ ಅಭಾವ ಉಂಟಾಗಿತ್ತು. ಬೋರ್‌ವೆಲ್‌ಗಳಲ್ಲಿ ನೀರಿಲ್ಲದಂತಾಗಿತ್ತು. ಗ್ರಾಮಾಂತರದಲ್ಲಿ 3 ರಿಂದ 4 ಗುಂಟೆ ವಿದ್ಯುತ್ (3 ಪೇಸ್ ಪೂರೈಕೆ ಮಾಡಲಾಗುತ್ತಿದೆ. ಇದರಿಂದಾಗಿ ಪಂಚಾಯತಿಗಳು ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಸಹ ಪೂರೈಸಲಾಗುತ್ತಿಲ್ಲ.

ಜಿಲ್ಲೆಯಲ್ಲಿ ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ. ಅಲ್ಲಿ ಕೇವಲ 30 ರಿಂದ 35 ರಷ್ಟು ಮಾತ್ರ ಬಿತ್ತನೆಯಾಗಿದೆ.

ಅಸಂಘಟಿತ ಕಾರ್ಮಿಕರು ಸೆಪ್ಟೆಂಬರ್ ಚಳುವಳಿಯತ್ತ

ಏನಿದು?! ಬೆಲೆ ಏರಿಕೆಯ ಉಬ್ಬರ

ಆರು ತಿಂಗಳಿಗೊಮ್ಮೆ ಮೂರು ತಿಂಗಳಿಗೊಮ್ಮೆ ಸಮುದ್ರದ ಉಬ್ಬರದಂತೆ ಉಕ್ಕೇರುತ್ತಿರುವ ಅವಶ್ಯ ವಸ್ತುಗಳ ಬೆಲೆಗಳ ಪರಿಸ್ಥಿತಿಯಲ್ಲಿ ಜನತೆಯ ಗತಿಯೇನು. ಮೂಗಿನ ಮಟ್ಟದ ನೀರಿನಲ್ಲಿ ಮುಖವೆತ್ತಿ ನಿಂತು ಜೀವ ಉಳಿಸಿಕೊಳ್ಳಲು ಒದ್ದಾಡುವಂತಾಗಿದೆ ದುಡಿಯುವ ಜನರ ಪಾಡು. ಸಗಟು ಬೆಲೆ ಸೂಚ್ಯಾಂಕ (ಡಬ್ಲ್ಯುಪಿಐ)ದ ಆಧಾರದಲ್ಲಿ ನೋಡಿದರೆ ಹಣ ದುಬ್ಬರ ಇಳಿಯುತ್ತಿದೆ ಎಂಬ ವರದಿಗಳು ಪ್ರಕಟಗೊಳ್ಳುತ್ತಿವೆ. ಡಬ್ಲ್ಯುಪಿಐ ಎಂಬುದು 1.61 ರಷ್ಟು ಇಳಿದಿದೆ ಎನ್ನಲಾಗುತ್ತದೆ. ಇವೆಲ್ಲಾ ಪತ್ರಿಕೆಯ ಕಾಗದದ ಮೇಲಿನ, ಟಿ.ವಿ. ಪರದೆ ಮೇಲಿನ ಕಸರತ್ತುಗಳು ಅಷ್ಟೆ. ಬಳಕೆದಾರರ ಬೆಲೆಸೂಚಿ (ಸಿಪಿಐ) ಅನ್ನು ನೋಡಿದರೆ ವಾಸ್ತವ ಏನೆಂದು ಗೊತ್ತಾಗುತ್ತದೆ. ಆಹಾರ ವಸ್ತುಗಳ ಬೆಲೆಯು ಜನರು ದುಡ್ಡುಕೊಟ್ಟು ಕೊಂಡುಕೊಳ್ಳುವ ಹಂತದಲ್ಲಿ ಶೇ.10 ಕ್ಕಿಂತಲೂ ಹೆಚ್ಚು ಏರಿದೆ. ತೊಗರಿಬೇಳೆ, ಸಕ್ಕರೆ ಯಂತಹ ಪದಾರ್ಥಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಬೆಲೆ ಏರಿಕೆಯನ್ನು ಶೇಕಡಾವಾರು ಲೆಕ್ಕ ಹಾಕುವುದರಲ್ಲಿ ಅರ್ಥವೇ ಇಲ್ಲ. ಬೆಲೆ ಎಷ್ಟುಪಟ್ಟು ಏರಿಕೆ ಕಂಡಿದೆ ಅಂತ ನೋಡಬೇಕಷ್ಟೆ. ಅಂದರೆ ಎರಡು ಪಟ್ಟು, ಮೂರು ಪಟ್ಟು ಅಂತ.

ಬೆಲೆ ಏರಿಕೆ ಏಕೆ?

ಜನರ ಕೈಗೆಟುಕದಂತೆ ಮೇಲೇರುವ ವಿಷಯದಲ್ಲಿ ಸಕ್ಕರೆ, ಬೇಳೆ, ಎಣ್ಣೆ ಇತ್ಯಾದಿ ಬೆಲೆಗಳು ಸ್ಪರ್ಧೆಗೆ ಇಳಿದಿವೆ. ಈ ಅಗತ್ಯ ವಸ್ತುಗಳಲ್ಲಿ ಬಾರಿ ಬೆಲೆ ಏರಿಕೆಯಾಗಲು ಕಾರಣಗಳೇನು? ಜೂಜುಕೋರ ಬಂಡವಾಳವು ಅವಶ್ಯ ವಸ್ತುಗಳ ಮಾರುಕಟ್ಟೆಯಲ್ಲಿ ತನ್ನ ಆಟಗಳನ್ನು ಆಡಲು ನಿರ್ದಯ, ಕುರುಡು ಕುಣಿತವನ್ನು ನಡೆಸಲು ಅವಕಾಶ ಮಾಡಿಕೊಟ್ಟಿರುವುದೇ ಅದಕ್ಕೆ ಕಾರಣ. ವಾಯಿದಾ ವ್ಯಾಪಾರ ಅಥವಾ ಮುಂಗಡ ವ್ಯಾಪಾರ ಅಥವಾ ಭವಿಷ್ಯತ್ ವ್ಯಾಪಾರ ಎಂದೆಲ್ಲಾ ಕರೆಯಲಾಗುವ ಪ್ರವೃತ್ತಿ ಇದಕ್ಕೆ ಪ್ರಧಾನ ಹೊಣೆಯಾಗಿದೆ. 'ಫಾರ್ವರ್ಡ್ ಮಾರ್ಕೆಟ್ಸ್ ಕಮಿಷನ್ ಆಫ್ ಇಂಡಿಯಾ' (ಭಾರತೀಯ ಮುಂಗಡ ವ್ಯಾಪಾರ ಆಯೋಗ)ದ ಅಧಿಕೃತ ಮಾಹಿತಿಯಂತೆ ಅವಶ್ಯಕ ವಸ್ತುಗಳ ಮಾರುಕಟ್ಟೆಯಲ್ಲಿ ಮುಂಗಡ ವ್ಯಾಪಾರದಲ್ಲಿ ಜೂನ್ 2007 ರಲ್ಲಿ ಹೂಡಲಾಗಿದ್ದ ಬಂಡವಾಳ 2, 21, 888.06 ಕೋಟಿಗಳು. ಈಗ ಇದು 15,64,114.96 ಕೋಟಿಗಳಿಗೆ ಏರಿದೆ. ಎಡಪಕ್ಷಗಳು, ಜನರು, ಜನಪರ ಕಾಳಜಿಯ ಆರ್ಥಿಕ ತಜ್ಞರು ಎಷ್ಟೆಲ್ಲಾ ವಿರೋಧ ತೋರುತ್ತಿದ್ದರೂ ಇದು ಈ ಪರಿಯಾಗಿ ಏರುತ್ತಿದೆ ಎಂದರೆ ಯುಪಿಎ ಸರ್ಕಾರ ಹಿಡಿದ ಜಾಡು ಯಾವುದೆಂದು ನಿಸ್ಸಂಶಯವಾಗಿ ಯಾರಿಗೆ ಆದರೂ ತಿಳಿಯುತ್ತದೆ. ಇನ್ನು ಅವಶ್ಯಕ ವಸ್ತುಗಳ ಬೆಲೆ ಇಳಿಯುವುದು ಹೇಗೆ? ಯುಪಿಎ ಸರ್ಕಾರವನ್ನು ಜನ ನಂಬುವುದು ಹೇಗೆ?

ಕೂಲಿ ಏರುವುದೇ?

ಬೆಲೆಗಳೇನೋ ಮೇಲೆ ಮೇಲೆ ಏರುತ್ತವೆ. ಅದೇ ರೀತಿ ದುಡಿಯುವ ಜನರ ಕೂಲಿ ಏರುವುದೇ? ಊಹುಂ ಖಂಡಿತ ಏರುವುದಿಲ್ಲ. ಸಂಘಟಿತ ಕಾರ್ಮಿಕರ ಹೋರಾಟದ ಫಲವಾಗಿ ಅಷ್ಟಿಷ್ಟು ತುಟ್ಟಿಭತ್ಯೆ ಪಡೆಯುತ್ತಾರೆ. ಅಸಂಘಟಿತ ಕಾರ್ಮಿಕರ ಪರಿಸ್ಥಿತಿ ಏನು? ಬೆಲೆ ಏರಿಕೆ, ಬರ, ಬಿಕ್ಕಟ್ಟಿನ ಬಾಣಲೆಯಲ್ಲಿ ಬೇಯುವುದೇ ಅಸಂಘಟಿತ ಕಾರ್ಮಿಕರ ಬದುಕಾಗಿದೆ. ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯತ್ ನೌಕರರು, ಕಟ್ಟಡ ಕಾರ್ಮಿಕರು, ಹಮಾಲಿಗಳು, ಗಾರ್ಮೆಂಟ್ಸ್ ನೌಕರರು, ಹೋಟೆಲ್ ಕಾರ್ಮಿಕರು, ಅಂಗಡಿ ಮುಂಗಟ್ಟುಗಳಲ್ಲಿ ಕೆಲಸ ಮಾಡುವ ನೌಕರರು, ಅಗರಬತ್ತಿ ಹೊಸೆಯುವವರು, ಗುತ್ತಿಗೆ ಕಾರ್ಮಿಕರು, ಅರೆಕಾಲಿಕ ನೌಕರರು, ಪೌರ ಕಾರ್ಮಿಕರು..... ಹೀಗೆ ಇವರೆಲ್ಲಾ ಏನು ತಿನ್ನುವುದು? ಅವರು ಬದುಕುವುದು ಹೇಗೆ? ಸಿಐಟಿಯು ಸಂಘಟ ಅಸಂಘಟಿತ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ ಕೂ 6000ವಾದರೂ ಸಿಗಬೇಕು. ಬೆಂಗಳೂರು ನಗರದ 10,000 ಕನಿಷ್ಟ ಕೂಲಿ ಸಿಗಬೇಕೆಂದು ಸೆಪ್ಟೆಂಬರ ತಿಂಗಳಿನಲ್ಲಿ ತೀವ್ರ ಆಂದೋಲನ ರೂಪಿಸಿದೆ.

ಅನ್ನ ಅನ್ನ.....

ಪುಟ 9 ರಿಂದ

ರಚನಾತ್ಮಕ ಹೊಸ ಕ್ರಮಗಳನ್ನು ವಿವರಿಸಿದರು. ಈ ಎರಡೂ ರಾಜ್ಯಗಳಲ್ಲಿ ಅತ್ಯಧಿಕವಾಗಿ ವಸ್ತುಗಳನ್ನು ಪಡಿತರ ವ್ಯವಸ್ಥೆ ಮೂಲಕ ನೀಡಲಾಗುತ್ತಿರುವುದು ಮಾತ್ರವಲ್ಲ ಅರ್ಹರನ್ನು ಗುರುತಿಸುವಲ್ಲಿ ವಿಶಾಲವಾದ ಮಾನದಂಡಗಳ ಮೂಲಕ ಫಲಾನುಭವಿಗಳನ್ನು (ಕೇಂದ್ರ ಹಾಗೂ ರಾಜ್ಯ ಇತರೆ ಸರ್ಕಾರಗಳು ಕಾರ್ಡ್‌ದಾರರನ್ನು ಕಡಿಮೆ ಮಾಡುತ್ತಿರುವಾಗ) ಗುರುತಿಸಿ ವ್ಯಾಪ್ತಿಗೆ ತಂದಿರುವುದನ್ನು ತಿಳಿಸಿದರು. ವಿಶೇಷವಾಗಿ ಕೇರಳದಲ್ಲಿಯಂತೂ ಕೇಂದ್ರ ಅನುಮೋದಿತ ಕಾರ್ಡ್‌ಗಳಿಗಿಂತಲೂ ಎರಡರಷ್ಟು ಪ್ರಮಾಣದಲ್ಲಿ ಬಿ.ಪಿ.ಎಲ್ ಕಾರ್ಡ್‌ದಾರರನ್ನು ಗುರುತಿಸಿ, ವಸ್ತುಗಳನ್ನು ಪೂರೈಸಲಾಗುತ್ತಿರುವುದರತ್ತ ಗಮನ ಸೆಳೆಯಲಾಯಿತು. ಹಾಗೆಯೇ ಮಹಾರಾಷ್ಟ್ರ, ರಾಜಸ್ಥಾನಗಳಲ್ಲಿ ಚುನಾಯಿತ ಶಾಸಕರು ಜನಪ್ರತಿನಿಧಿಗಳ ಪಾತ್ರವನ್ನು ವಿವರಿಸಲಾಯಿತು.

ಈ ಸಮಾವೇಶದಲ್ಲಿ ಖ್ಯಾತ ಆರ್ಥಿಕ ತಜ್ಞರಾದ ಪ್ರೊ. ಮದುರಾಸ್ವಾಮಿನಾಥನ್, ಪ್ರೊ. ಜಯತಿಘೋಷ್ ಭಾಗವಹಿಸಿ ಮಾತನಾಡಿದರು. ಎಸ್.ರಾಮಚಂದ್ರನ್ ಪಿಳ್ಳೈ, ಕೆ.ವರದರಾಜನ್, ವಿವಿಧ ಘೋಷ್ಠಿಗಳಲ್ಲಿ ಮಾತನಾಡಿದ್ದಾರೆ. ಪಿ.ಬಿ.ಸದಸ್ಯರಾದ ಕಾಂ.ಸೀತಾರಾಮ್ ಯೆಚೂರಿಯವರು ಸಮಾವೇಶ, ಸಮಾರೋಪ ಗೊಳಿಸುತ್ತ ಅಧಿಕೃತ ವಿರೋಧ ಪಕ್ಷವಾಗಿರುವ ಬಿಜೆಪಿ ಗೊಂದಲದಲ್ಲಿದ್ದು, ಕೇಂದ್ರ ಸರ್ಕಾರ ತನಗೇನು ಅನ್ನಿಸುತ್ತದೆಯೋ ಹಾಗೆ ಮಾಡಲು ಹೊರಟಿರುವುದನ್ನು ತೀವ್ರವಾಗಿ ಟೀಕಿಸಿದರು. ಆದ್ದರಿಂದ ಜನತೆಯ ಪ್ರಬಲ ಪ್ರತಿಭಟನೆ, ಚಳುವಳಿಯನ್ನು ನ್ಯಾಯಕ್ಕಾಗಿ ಮತ್ತು ಅಸಮಾನತೆಯ ವಿರುದ್ಧ ತೀವ್ರಗೊಳಿಸಬೇಕು ಎಂದು ಕರೆ ನೀಡಿದರು. ರಾಷ್ಟ್ರವ್ಯಾಪಿ ಆಂದೋಲನ ನಡೆಸಲು ಸಮಾವೇಶ ನಿರ್ಧರಿಸಿತು.

ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ವಿವಿಧ ರಾಜ್ಯಗಳ ಪಕ್ಷದ ನಾಯಕರೂ ಭಾಗವಹಿಸಿ ಮಾತನಾಡಿದ್ದಾರೆ. ಕರ್ನಾಟಕದಿಂದ ಪಕ್ಷದ ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ.ಕೆ.ಆರ್. ಶ್ರೀಯಾನ್, ಕಾಂ.ಪ್ರಸನ್ನಕುಮಾರ್, ಕಾಂ.ಮಾರುತಿ ಮಾನ್ಪಡೆಯವರು ಭಾಗವಹಿಸಿದ್ದರು. ○

'ಅಂಗವಿಕಲರ ಬವಣೆ....

ಪುಟ 8 ರಿಂದ

ಭಾಗವಾಗಿಸುವ ಅಗತ್ಯವೂ ಇದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟವನ್ನು ರಚಿಸಲಾಯಿತು. ಇದು ಕರ್ನಾಟಕವ್ಯಾಪಿಯಾಗಿ ಎಲ್ಲ ರೀತಿಯ ಅಂಗವಿಕಲರನ್ನು ಒಂದೇ ಸಂಘಟನೆಯಡಿ ಸಂಘಟಿಸುವ ಮತ್ತು ಪಾಲಕರನ್ನು ಒಳಗೊಳ್ಳುವ ಮಹತ್ವಾಕಾಂಕ್ಷೆ ಹೊಂದಿದೆ.

ಜನಶಕ್ತಿ : ಅಂಗವಿಕಲರನ್ನು ಪೋಷಕರನ್ನು ಸಂಘಟಿಸುವ ನಿಟ್ಟಿನಲ್ಲಿ ಏನಾಗಿದೆ?

ಜಿ.ಎನ್.ನಾಗರಾಜ್: ಇದರಲ್ಲಿ ಮೊದಲನೆಯ ದಾಗಿ ಹಗರಿಬೊಮ್ಮನ ಹಳ್ಳಿಯಲ್ಲಿ ಸದಸ್ಯತ್ವ ಚಳುವಳಿ ನಡೆಸಿ 2 ದಿನಗಳ ತಾಲ್ಲೂಕು ಸಮ್ಮೇಳನವನ್ನು ನಡೆಸಲಾಗಿದೆ. ವ್ಯವಸ್ಥಿತವಾದ ಸಮ್ಮೇಳನದಲ್ಲಿ ಬಹಿರಂಗ ಸಭೆಯಲ್ಲಿ 500 ಕ್ಕೂ ಹೆಚ್ಚು ಅಂಗವಿಕಲರು ಹಾಗೂ ಪೋಷಕರು ಪಾಲ್ಗೊಂಡಿದ್ದರು. ಇವರಲ್ಲಿ ಶೇ.90 ರಷ್ಟು ಅತ್ಯಂತ ಬಡತನಕ್ಕೆ ತುತ್ತಾದ ಗ್ರಾಮೀಣ ಪ್ರದೇಶದ ಜನರಾಗಿದ್ದರು. ಈ ಸಮ್ಮೇಳನದ ಕರೆಯಂತೆ ತಾಲ್ಲೂಕುಮಟ್ಟದ ಹೋರಾಟವನ್ನು ನಡೆಸಲಾಗಿದೆ. ಬೇರೆ ಸಂಸ್ಥೆಗಳ ಜೊತೆಯಲ್ಲಿ ಅಂಗವಿಕಲರನ್ನು ಗುರುತಿಸಲು ವೈದ್ಯಕೀಯ ಶಿಬಿರಗಳನ್ನು ಸಂಘಟಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಅಂಗವಿಕಲರ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರದ ಎಲ್ಲ ಸೌಲಭ್ಯಗಳನ್ನು ದೊರಕಿಸಲು ಪ್ರಯತ್ನಿಸಲಾಗುತ್ತಿದೆ ಮತ್ತು ಅನೇಕ ಭ್ರಷ್ಟಾಚಾರದ ಪ್ರಕರಣಗಳನ್ನು ಬಯಲಿಗೆಳೆದು ಅಂಗವಿಕಲರಿಗೆ ಆಗುವ ವಂಚನೆ ತಪ್ಪಿಸಿದೆ. ಅದರಲ್ಲಿ ಒಂದೇ ಊರಿನಲ್ಲಿ 150 ಜನ ಅಂಗವಿಕಲರನ್ನು ಸೃಷ್ಟಿಸಿ ಮನೆ ಕಟ್ಟಿಸಿ ಅಂಗವಿಕಲರ ಸೌಲಭ್ಯ ಲಪಟಾಯಿಸಿದ ಪ್ರಕರಣವನ್ನು ಪತ್ತೆಹಚ್ಚಲಾಗಿದೆ. ವೈದ್ಯರ ನಕಲು ಸಹಿಯನ್ನು ಮಾಡಿ ಅಂಗವಿಕಲರ ಸೌಲಭ್ಯ ಕಬಳಿಸಿ, ಭ್ರಷ್ಟಾಚಾರ ನಡೆಸಿರುವ ಪ್ರಕರಣ ಸೇರಿದಂತೆ ನಿರಂತರವಾಗಿ ಅಂಗವಿಕಲರ ಸಮಸ್ಯೆಗಳ ಬಗೆಗೆ ಕ್ರಿಯಾಶೀಲವಾಗಿದೆ. ಇದರಿಂದಾಗಿ ತಾಲ್ಲೂಕಿನಲ್ಲಿ ಎಲ್ಲ ಅಂಗವಿಕಲರಿಗೆ ಮಾಸಿಕ ವೇತನ ಗುರುತಿನ ಚೀಟಿ ದೊರಕಿದೆ.

ಉಳಿದ ಸೌಲಭ್ಯಗಳಿಗಾಗಿ ಹೋರಾಟ ಮುಂದುವರೆದಿದೆ. ನಂತರ ಹಡಗಲಿ ತಾಲ್ಲೂಕಿನಲ್ಲಿ ಕೂಡ ಸಮ್ಮೇಳನ ನಡೆಸಿ ತಾಲ್ಲೂಕು ಸಮಿತಿ ರಚಿಸಲಾಗಿದೆ. ಬಳ್ಳಾರಿ ತಾಲ್ಲೂಕಿನಲ್ಲಿ ಅಂಗವಿಕಲರ ತಾಲ್ಲೂಕು ಸಮಾವೇಶ ನಡೆಸಿ ಸಂಘಟನಾ ಸಮಿತಿ ರಚಿಸಲಾಗಿದೆ. ಬಳ್ಳಾರಿ ಜಿಲ್ಲಾಮಟ್ಟದ ಸಭೆ ನಡೆಸಿ ಅಂಗವಿಕಲರ ಪಾಲಕರ ಒಕ್ಕೂಟದ ಜಿಲ್ಲಾ ಸಂಘಟನಾ ಸಮಿತಿ ರಚಿಸಲಾಗಿದೆ.

ಬಳ್ಳಾರಿ ಸಂಘಟನಾ ಸಮಿತಿಯ ನೇತೃತ್ವದಲ್ಲಿ ಜುಲೈ 21 ರಂದು ಜಿಲ್ಲಾಮಟ್ಟದ ಒಂದು ಹೋರಾಟವನ್ನು ಹಮ್ಮಿಕೊಳ್ಳಲಾಗಿತ್ತು. ಈ ಒಂದು ಹೋರಾಟಕ್ಕೆ 5 ತಾಲ್ಲೂಕುಗಳಿಂದ ಅಂಗವಿಕಲರು 500 ಕ್ಕೂ ಹೆಚ್ಚು ಅಂಗವಿಕಲರು ಮತ್ತು ಪೋಷಕರು ಭಾಗವಹಿಸಿದ್ದರು. ಸುಮಾರು ಅರ್ಧ ಕಿ.ಮೀ.ನಷ್ಟು ಮೆರವಣಿಗೆಯಲ್ಲಿ ತೆವಳುತ್ತಾ, ಕುಂಟುತ್ತಾ ಮತ್ತೆ ಗಾಲಿ ಖುರ್ಚಿಗಳನ್ನು ನಡೆಸುತ್ತಾ ಬಂದು ಜಿಲ್ಲಾಧಿಕಾರಿ ಕಛೇರಿಗೆ ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಯಾಗಿ ಜಿಲ್ಲಾಧಿಕಾರಿ ಅಂಗವಿಲಕರ ಬಗೆಗೆ ತ್ರೈ ಮಾಸಿಕ ಸಭೆ ನಡೆಸಿ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳ ಪರಿಶೀಲನೆ ಮಾಡಿದ್ದಾರೆ. ಅಂದೇ ಆಗಸ್ಟ್ 25, 09 ರಂದು ಮಧ್ಯಾಹ್ನ ಅಂಗವಿಕಲರ ಒಕ್ಕೂಟದ ಮುಖಂಡರ ಜೊತೆಯಲ್ಲಿ ಮಾತುಕತೆ ನಡೆಸಿದರು. ಇದರಿಂದ ಅಂಗವಿಕಲರ ಒಕ್ಕೂಟದ ಕೆಲವು ಮು ಬೇಡಿಕೆಗಳನ್ನು ಈಡೇರಿಸುವ ಭರವಸೆ ದೊರೆತಿದೆ.

ಮುಖ್ಯವಾಗಿ ತಾಲ್ಲೂಕು ಮಟ್ಟದ ತಹಶೀಲ್ದಾರರು ಮತ್ತು ತಾಲ್ಲೂಕು ಪಂಚಾ ಮುಖ್ಯಾಧಿಕಾರಿಗಳು ಪ್ರತಿ ತಿಂಗಳೂ ಅಂಗವಿಕ ಕುಂದುಕೊರತೆಗಳ ಬಗೆಗೆ ಸಭೆ ನಡೆಸುವು ಅಂಗವಿಕಲ ಗುರುತಿನ ಚೀಟಿಯನ್ನು ಕೊ ಮತ್ತೊಂದು ಸುತ್ತು ವೈದ್ಯಕೀಯ ಶಿಬಿರ ನಡೆಸುವ ಅದರಲ್ಲಿ ಶ್ರವಣ ತಜ್ಞರು ಮತ್ತು ಮನಶಾಸ್ತ್ರಜ್ಞ ಒಳಗೊಂಡು ಅತ್ಯಂತ ನಿರ್ಲಕ್ಷಕ್ಕೆ ಒಳಗಾಗಿ ಶ್ರವಣ ದೋಷವಿರುವವರು ಮತ್ತು ಅಂಗವಿಲಕ ನಿವೇಶನ, ಮನೆಯನ್ನು ಆದ್ಯತೆಯ ಮೇ ನೀಡುವುದು, ಇತ್ಯಾದಿ ಹಲವು ಬೇಡಿಕೆಗಳ ಚರ್ಚೆಯಾಗಿದೆ.

ಕೋಲಾರ ತಾಲ್ಲೂಕಿನಲ್ಲಿ ಕೂಡ ಒ ಸಂಘಟನಾ ಸಮಾವೇಶ ನಡೆದು ಸಂಘಟ ಸಮಿತಿಯನ್ನು ರಚಿಸಲಾಗಿದೆ. ಮತ್ತು ಸಂಘಟ ಸಮಿತಿಯ ನೇತೃತ್ವದಲ್ಲಿ ಕೋಲಾರ ಜಿಲ್ಲಾಧಿಕಾರಿ ಕಛೇರಿ ಮುಂದೆ ಹೋರಾಟ ನಡೆಸಿ, ಹಲವು ಬೇ ಈಡೇರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಮ ತಾಲ್ಲೂಕು ಗೌರಿಬಿದನೂರು ತಾಲ್ಲೂ ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿಯ ಸಂಪರ್ಕಗಳನ್ನು ಬೆಳೆಸಲಾಗಿದೆ. ಗಂಗಾ ತಾಲ್ಲೂಕಿನಲ್ಲಿ ಸಭೆಯೊಂದನ್ನು ನಡೆಸಿ ಸಂಘ ಸಮಿತಿಯೊಂದನ್ನು ರಚಿಸಲಾಗಿದೆ. ಅಂಗವಿಕಲರ ಒಕ್ಕೂಟ ಕರ್ನಾಟಕ ಬೆಳೆಯಲಾರಂಭಿಸಿದೆ.

ಪೋಖ್ರಾನ್-2 ಮತ್ತು ಸಿಟಿಬಿಟಿ

ಯುಪಿಎ ದರ್ಬಾರ್ II ನಲ್ಲಿ

ಹನ್ನೊಂದು ವರ್ಷಗಳ ಹಿಂದೆ ಪೋಖ್ರಾನ್‌ನಲ್ಲಿ ನಡೆಸಿದ ಭಾರತದ ಎರಡನೇ ಪರಮಾಣು ಪರೀಕ್ಷಣಾ ಸ್ಫೋಟ ಈಗ ಮತ್ತೆ ಚರ್ಚೆಯಲ್ಲಿದೆ. ಅದರಲ್ಲಿ ಮೊದಲ ಅಂದರೆ ಜಲಜನಕ ಬಾಂಬಿನ ಪರೀಕ್ಷಣೆಗಳು ಪೂರ್ಣ ಯಶಸ್ವಿಯಾಗಿರಲಿಲ್ಲ, ಇನ್ನಷ್ಟು ಪರೀಕ್ಷಣೆಗಳ ಅಗತ್ಯವಿದೆ, ಆದ್ದರಿಂದ ಭಾರತ ಸಿಟಿಬಿಟಿ(ಪರಮಾಣು ಪರೀಕ್ಷಣಾ ನಿಷೇಧ ಸಂಧಿ)ಗೆ ಸಹಿ ಹಾಕಲು ಧಾವಿಸಬಾರದು ಎಂದು ಭಾರತದ ಪರಮಾಣು ಶಸ್ತ್ರಾಸ್ತ್ರ ಕಾರ್ಯಕ್ರಮದ ಸಂಯೋಜಕರಾಗಿದ್ದ ಡಾ.ಕೆ.ಸಂತಾನಂ ಹೇಳಿಕೆ ಮತ್ತು ಅದಕ್ಕೆ ಹಲವು ಪರಮಾಣು ವಿಜ್ಞಾನಿಗಳಿಂದ ಬಂದಿರುವ ಬೆಂಬಲ ಸರಕಾರೀ ವಲಯಗಳಲ್ಲಿ ಕಸಿವಿಸಿಯುಂಟು ಮಾಡಿದೆ.

ಸಿಟಿಬಿಟಿ ಪಕ್ಷಪಾತಪೂರ್ಣ ಸಂಧಿಯಾದ್ದರಿಂದ ಅದಕ್ಕೆ ಸಹಿ ಹಾಕವುದಿಲ್ಲ ಎಂಬ ಭಾರತದ ದೀರ್ಘಕಾಲದ ನಿಲುವನ್ನು ಬದಲಿಸಲು ಅಮೆರಿಕಾ ಹಾಕುತ್ತಿರುವ ಒತ್ತಡ, ಅದಕ್ಕೆ ಯುಪಿಎ-2 ಸರಕಾರ ಬಲಿಬಾಗಬಹುದೆಂಬ ಭಯದ ಹಿನ್ನೆಲೆಯಲ್ಲಿ ಈ ಹೇಳಿಕೆ ಬಂದಿದ. ಆಗ ಭಾರತ ಸರಕಾರದ ರಕ್ಷಣಾ ಸಲಹೆಗಾರರಾಗಿದ್ದ, ಮುಂದೆ ಭಾರತದ ರಾಷ್ಟ್ರಪತಿಗಳಾದ ಡಾ. ಅಬ್ದುಲ್ ಕಲಾಂ ಇದನ್ನು ನಿರಾಕರಿಸಿ ಅದು ಪೂರ್ಣ ಯಶಸ್ವಿಯಾಗಿತ್ತು ಎಂದಿದ್ದಾರೆ.

ಆಗ ಅಧಿಕಾರದಲ್ಲಿದ್ದ ಎನ್‌ಡಿಎ ಸರಕಾರದ ಭದ್ರತಾ ಸಲಹೆಗಾರರಾದ ಬ್ರಜೇಶ್ ಮಿಶ್ರಾ ಮತ್ತು ಆಗಿನ ಯುಪಿಎ ಪ್ರಧಾನ ಮಂತ್ರಿಗಳು ಇಬ್ಬರೂ ಕಲಾಂ ಅವರ ಹೇಳಿಕೆಯನ್ನು ಉದ್ದರಿಸಿ ಕೆಲವು ವಿಜ್ಞಾನಿಗಳು ಈ ಬಗ್ಗೆ ಅನಗತ್ಯ ಗೊಂದಲ ಬಿತ್ತುತ್ತಿದ್ದಾರೆ ಎಂದಿರುವುದು ಗಮನಾರ್ಹ. ಅಲ್ಲದೆ ಮುಂದಿನ ತಿಂಗಳು ನಮ್ಮ ಪ್ರಧಾನಿಗಳು ಅಮೆರಿಕಾದ ಅಧ್ಯಕ್ಷರನ್ನು ಭೇಟಿ ಮಾಡುವ ಸಂದರ್ಭದಲ್ಲಿ ಸಿಟಿಬಿಟಿಯ ವಿಷಯ ಪ್ರಸ್ತಾಪವಾಗಲಿದೆ ಎಂಬುದನ್ನು ಕೂಡಾ ಇಲ್ಲಿ ಗಮನಿಸಬೇಕು.

ಆದರೆ ಭಾರತದ ಅಣುಶಕ್ತಿ ಆಯೋಗದ ಅಧ್ಯಕ್ಷರಾಗಿದ್ದ ಮತ್ತು 35 ವರ್ಷಗಳ ಹಿಂದೆ ಪೋಖ್ರಾನ್-1 ಪರೀಕ್ಷಣೆಯ ಉಸ್ತುವಾರಿ ವಹಿಸಿದ್ದ ಡಾ. ಹೋಮಿ ಸೇಥ್ನಾ ರವರು ಕಲಾಂರವರಿಗೆ ಈ ಬಗ್ಗೆ ಏನೂ ಗೊತ್ತಿಲ್ಲದಿರುವಾಗ ಸಂತಾನಂರವರ ಹೇಳಿಕೆಯನ್ನು ಟೀಕಿಸಲು ಅವರಿಗೇನು ಅಧಿಕಾರವಿದೆ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ. ರಾಷ್ಟ್ರಪತಿಗಳಾದ ಮೇಲೆ ತನಗೆ ಹೀಗೆ ಹೇಳುವ ಸ್ಥಾನಮಾನ ದೊರೆತಿದೆಎಂದು ಅವರು ಭಾವಿಸಿದಂತಿದೆ; ಇನ್ನಷ್ಟು ಸ್ಥಾನಮಾನ ಪಡೆಯಲು ಅವರು ಅಣುಶಕ್ತಿಯನ್ನು ಅವಲಂಬಿಸಿದ್ದಾರೆ ಎಂದು ಡಾ.ಸೇಥ್ನಾ ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.

ಅಣುಶಕ್ತಿ ಆಯೋಗದ ಇನ್ನೊಬ್ಬ ಮಾಜಿ ಅಧ್ಯಕ್ಷ ಡಾ. ಪಿ.ಕೆ. ಅಯ್ಯಂಗಾರ್ ಕೂಡಾ ಪೋಖ್ರನ್-2 ಪರೀಕ್ಷಣೆಯನ್ನು ಆಗಿನ ಸರಕಾರದ ಆದೇಶದ ಮೇರೆಗೆ ತರಾತುರಿಯಲ್ಲಿ ನಡೆಸಲಾಗಿತ್ತು ಎಂದಿದ್ದಾರೆ. ವಾಜಪೇಯಿ ನೇತೃತ್ವದ ಸರಕಾರ ಆಗಷ್ಟೇ ಅಧಿಕಾರಕ್ಕೆ ಬಂದಿತ್ತು. ಆದರೆ ಈ ಟಿಪ್ಪಣಿಗಳು ಯುಪಿಎ-2 ಸರಕಾರಕ್ಕೆ ಮುದ ಕೊಡುವ ಬದಲು ಮುಜುಗರ ಉಂಟುಮಾಡಿರುವುದು ಆಶ್ಚರ್ಯದ ಸಂಗತಿ ಯೇನಲ್ಲ.

★

ಸಕ್ಕರೆ ಬೆಲೆಗಳು ಮತ್ತು ಚುನಾವಣೆ

ಸಕ್ಕರೆ ಬೆಲೆಗಳು ಗಗನಕ್ಕೇರಲು ಆಹಾರ ಮಂತ್ರಿ ಶರದ್ ಪವಾರ್ ಕಾರಣ ಎಂದು ಮಹಾರಾಷ್ಟ್ರದ ಕಾಂಗ್ರೆಸ್ ಮುಖಂಡರು ಹೇಳುತ್ತಿದ್ದಾರಂತೆ. ಎನ್‌ಸಿಪಿ ಮುಖಂಡಪವಾರ್ ಅವರ ಪಕ್ಷದ ನೇತೃತ್ವದ ಯುಪಿಎ ಸರಕಾರದಲ್ಲಿ ಆಹಾರ ಮಂತ್ರಿಗಳು .ಮಹಾರಾಷ್ಟ್ರ ದೇಶದ 35ಶೇ. ಸಕ್ಕರೆ ಉತ್ಪಾದಿಸುವ ರಾಜ್ಯ. ಅಲ್ಲಿ ಸಧ್ಯದಲ್ಲಿ ವಿಧಾನ ಸಭಾ ಚುನಾವಣೆಗಳು ನಡೆಯಲಿವೆ . ಕಾಂಗ್ರೆಸ್- ಎನ್‌ಸಿಪಿ ಮೈತ್ರಿ ಕೂಟ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ ಹತ್ತುವರ್ಷಗಳಿಂದ ಅಧಿಕಾರ ವಂಚಿತ ಬಿಜೆಪಿ- ಶಿವಸೇನೆ ಕೂಟ ಹಬ್ಬಗಳ ಸೀಜನಿನಲ್ಲಿ ಸಕ್ಕರೆಯ ಅಭಾವವನ್ನು ಬಳಸಿಕೊಳ್ಳಬಹುದು ಎಂಬ ಭಯ ಅವರನ್ನು ಕಾಡುತ್ತಿದೆ.

ಅತ್ತ ಪವಾರ್ ಸಕ್ಕರೆ ಬೆಲೆಯೇರಿಕೆಗೆ ಅಂತರ್ರಾಷ್ಟ್ರೀಯ ಬೆಲೆಗಳು ಸತತವಾಗಿ ಏರಿರುವುದು ಕಾರಣವೇ ಹೊರತು ಉತ್ಪಾದನೆಯ ಕೊರತೆ ಮಾತ್ರವಲ್ಲ ಎಂದು ಹೇಳಿದ್ದಾರೆ. ಭಾರತದಲ್ಲಿ ಸಕ್ಕರೆಯ ಬೇಡಿಕೆ ಹೆಚ್ಚಬಹುದೆಂಬ ನಿರೀಕ್ಷೆಯಿಂದ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಇನ್ನಷ್ಟು ಏರುವ ಸಂಭವವಿದೆ ಎಂದು ಹೇಳಲಾಗುತ್ತಿದೆ. ಲಂಡನಿನಲ್ಲಿ ಸಕ್ಕರೆ ವಾಯಿದಾ ವ್ಯವಹಾರ ತೇಜಿಯಲ್ಲಿದೆ, ಕಳೆದ 28ವರ್ಷಗಳಲ್ಲಿ ಕಾಣದ ಮಟ್ಟಕ್ಕೆ ಅದರ ಬೆಲೆ ತಲುಪಿದೆ. ಆದರೆ ಕಾಂಗ್ರಸಿನವರು ಆಹಾರವಸ್ತುಗಳಲ್ಲಿ ಈ ಸಟ್ಟಾ ವ್ಯಾಪಾರದ ಬಗ್ಗೆ ಈಗಲೂ ಮೌನವಾಗಿದ್ದಾರೆ.

ಈ ನಡುವೆ ಕಳೆದೆರಡು ಸೀಜನ್‌ಗಳಲ್ಲಿ ಕಬ್ಬು ಬೆಳೆಗಾರರಿಗೆ ಕೊಡಬೇಕಾಗಿದ್ದ ಬಾಕಿ ಹಣವನ್ನು ಕೊಡದೇ ಇದ್ದುದರಿಂದ ಬಹಳಷ್ಟು ರೈತರು ಬೇರೆ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ್ದಾರೆ ಎಂದೂ ವರದಿಯಾಗಿದೆ.

★



ಬಳಕೆದಾರರಿಗೆ ಹಣದುಬ್ಬರ 11.89ಶೇ.

ಗ್ರಾಹಕ ಬೆಲೆ ಸೂಚ್ಯಂಕದ ಪ್ರಕಾರ ಜುಲೈ ತಿಂಗಳಲ್ಲಿ ಹಣದುಬ್ಬರ 11.89ಶೇ.ಕ್ಕೆ ಏರಿದೆ. ಕಳೆದ ತಿಂಗಳು ಇದು 9.29ಶೇ. ಇತ್ತು. ಮುಖ್ಯವಾಗಿ ಬೇಳೆಕಾಳುಗಳು, ಹಣ್ಣು-ತರಕಾರಿಗಳ ವಿಪರೀತ ಬೆಲೆಯೇರಿಕೆ ಇದಕ್ಕೆ ಕಾರಣ ಎನ್ನಲಾಗಿದೆ. ಆದರೆ ಸಗಟು ಬೆಲ ಸೂಚ್ಯಂಕದ ಆಧಾರದ ಹಣದುಬ್ಬರ ಈಗಲೂ ಋಣಾತ್ಮಕ(ನೆಗೆಟಿವ್) ಆಗಿದೆ, ಅಮದರೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಇಳಿದಿವೆ!

★

ಮತ್ತಷ್ಟು ಮುಷ್ಕರಗಳು

ಯುಪಿಎ-II ಸರಕಾರ ಅಧಿಕಾರಕ್ಕೆ ಬಂದ ಮೇಲೆ ಮುಷ್ಕರಗಳ ಪ್ರಮಾಣ ಹೆಚ್ಚುತ್ತಿದೆ. ಇದು ಈ ಸರಕಾರದ ಕಾರ್ಮಿಕ-ವಿರೋಧಿ ನೀತಿಯ ಪ್ರತಿಫಲನ. ಬ್ಯಾಂಕ್ ಮತ್ತು ಬಿಎಸ್‌ಎನ್‌ಎಲ್ ಮುಷ್ಕರಗಳ ನಂತರ ಈಗ ಸಾರ್ವಜನಿಕ ವಲಯದ ಇನ್ನೂ ಹಲವು ಉದ್ದಿಮೆಗಳಲ್ಲಿ ಮುಷ್ಕರಗಳು ನಡೆಯುವ ಸಂಭವವಿದೆ. 2006ರಲ್ಲಿ ಹಿಂದಿನ ವೇತನ ಒಪ್ಪಂದಗಳು ಮುಗಿದು ಹೋಗಿದ್ದರೂ, ಯುಪಿಎ-1 ಸರಕಾರ ಆರನೇ ವೇತನ ಆಯೋಗದ ಶಿಫಾರಸುಗಳನ್ನು ಸ್ವೀಕರಿಸಿದ್ದರೂ ಈ ಉದ್ದಿಮೆಗಳಲ್ಲಿ ಇನ್ನೂ ವೇತನ ಹೆಚ್ಚಳದ ಇತ್ಯರ್ಥವಾಗದೇ ಇರುವುದು ಇದಕ್ಕೆ ಕಾರಣವೆನ್ನಲಾಗಿದೆ. ಹಿಂದಿನ ವೇತನ ಇತ್ಯರ್ಥವಾಗಿದ್ದು 1997ರಲ್ಲಿ.

ಬರೇ 2 ಸಾವಿರ



ಬಿಜೆಪಿ ದರ್ಬಾರ್‌ನಲ್ಲಿ

ಹಂದಿಜ್ವರ ಅಥವಾ ಎಚ್1 ಎನ್1 ಜ್ವರವು ಮಹಾರಾಷ್ಟ್ರದ ನಂತರ ಕರ್ನಾಟಕದಲ್ಲಿ ವ್ಯಾಪಕಗೊಳ್ಳುತ್ತಾ ಜನರಲ್ಲಿ ಆತಂಕ ಸೃಷ್ಟಿಸುತ್ತಾ ಇದೆ. ಜನರ ಗಮನ ಈಗ ಈ ಕಡೆ ಇದೆ ಖಾಸಗಿ ಆಸ್ಪತ್ರೆಯೇ ಇರಲಿ ಈ ಖಾಯಿಲೆಗೆ ಚಿಕಿತ್ಸೆ ಉಚಿತ. ಸರ್ಕಾರವೇ ವೆಚ್ಚ ಭರಿಸುತ್ತದೆ ಎಂದಿತು. ಹಲವು ಕಡೆಗಳಿಂದ ಸರ್ಕಾರಕ್ಕೆ ಅಭಿನಂದನೆ, ಮೆಚ್ಚುಗೆಗಳು ವ್ಯಕ್ತವಾದವು.

ಸರ್ಕಾರದ ಘೋಷಣೆಯ ನಿಜ ಸ್ವರೂಪ ಇದೀಗ ಬಯಲಾಗುತ್ತಿದೆ. ಶಂಕಿತ ಸೋಂಕು ಪೀಡಿತರ ಗಂಟಲು ಮತ್ತು ಮೂಗಿನ ಕಫದ ಮಾದರಿಯನ್ನು ಸಂಗ್ರಹಿಸಿ ನಿಮ್ಹಾನ್ಸ್ ಮತ್ತು ಮಣಿಪಾಲದ ಆಸ್ಪತ್ರೆಯ ಪ್ರಯೋಗಾಲಯಕ್ಕೆ ಕಳಿಸಲು ತಗಲುವ ಎರಡು ಸಾವಿರ ರೂಪಾಯಿ ವೆಚ್ಚವನ್ನು ಸರ್ಕಾರ ಭರಿಸುವುದಂತೆ.!! ಅಬ್ಬಬ್ಬ ಸಾಕು ಸಾಕು ಅಂದಿರಾ? ಇರಿ. ಆ ಬಗೆಗೆ ಸುತ್ತೋಲೆ ಕೂಡ ತಲುಪಬೇಕಾದ ಕಡೆಗಳಿಗೆ ಅಂದರೆ ಖಾಸಗಿ ಆಸ್ಪತ್ರೆಗಳಿಗೆ ತಲುಪಿಲ್ಲ. ಜಾಣಾಕ್ಷತೆ ಅಂದರೆ ಹೀಗಿರಬೇಕು ಅಲ್ಲವೇ?

ಇವೆಲ್ಲಾ ಬೇಕಿಲ್ಲ

ಅಲ್ಪಸಂಖ್ಯಾತರನ್ನು ಹುಡುಕಿ, ಹುಡುಕಿ ಬಡಿಯುವುದು ಬೇರೆ, ಬೇರೆ ಕೋಮಿನ ಸ್ನೇಹಿತರು ಒಂದೆಡೆ ಕಲೆತರೆ ಹಿಡಿದು ಚಚ್ಚುವುದು, ಹುಡುಗ ಹುಡುಗಿ ಜೊತೆಯಲ್ಲಿದ್ದರೆ, ನಕ್ಕರೆ, ಹಲ್ಲೆ ನಡೆಸುವುದು ಇವೆಲ್ಲಾ ಕರ್ನಾಟಕದ ಕರಾವಳಿಯಲ್ಲಿ ಅದರಲ್ಲೂ ದಕ್ಷಿಣ ಕನ್ನಡದಲ್ಲಿ ತೀರಾ ಮಾಮೂಲಿ ಎಂಬಂತಾಗುತ್ತಿದೆ. ಇನ್ನು ಪಬ್ ಮೇಲಿನ ದಾಳಿ, ಪೂಜಾ ಸ್ಥಳಗಳಲ್ಲಿ ಪ್ರಾಣಿಗಳ ಮಾಂಸದ ಎಸೆದಾಟ ಇವೆಲ್ಲಾ ಇಲ್ಲಿ 'ನಿತ್ಯೋತ್ಸವ'ದಂತೆ ನಡೆದಿವೆ. ಈ ಎಲ್ಲ ಗಲಭೆಗಳ ಹಿಂದೆ ಮುಖ್ಯವಾಗಿ ಭಜರಂಗ, ಶ್ರೀರಾಮಸೇವೆ, ಜೊತೆಗೆ ಕೆಎಫ್‌ಡಿಯಂತಹ ಮೂಲಭೂತವಾದಿ ಸಂಘಟನೆಗಳಿವೆ ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದೆ.

ಮಂಗಳೂರಿನ ಮಣ್ಣಗುಡ್ಡೆಯಲ್ಲಿನ ಉಗ್ರಾಣದಲ್ಲಿ ಸುಮಾರು 5 ಕೋಟಿ ರೂಪಾಯಿ ಬೆಲೆಬಾಳುವ ಆಹಾರ ಪದಾರ್ಥಗಳಿಗೆ ಹುಳು ಹಿಡಿದು ಹಾಳಾಗಿದೆಯಂತೆ. ಆ ಕಾರಣಕ್ಕಾಗಿ ರಾಜ್ಯ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ಬಗೆಗೆ ತನಿಖೆ ನಡೆಸುವಂತೆ ಮಾನವ ಹಕ್ಕುಗಳ ಆಯೋಗ ಸೂಚಿಸಿದೆ.

ಭಜರಂಗದಳ, ಶ್ರೀರಾಮಸೇನೆ. ಕೆಎಫ್‌ಡಿ ಮುಂತಾದ ಸಂಘಟನೆಗಳ ಸೈನಿಕರ ಕಣ್ಣಿಗೆ ಇಂಥ ಅನಾಹುತ ಯಾಕೆ ಕಣ್ಣಿಗೆ ಬೀಳುವುದಿಲ್ಲವೋ? ಅಂಗನವಾಡಿಯಲ್ಲಿ ಸಂಗ್ರಹಿಸಲಾಗಿದ್ದ ಆಹಾರ ಕೆಟ್ಟಿದೆ ಎಂದಿದ್ದಕ್ಕೆ ಡಿವೈಎಫ್‌ಐ ಮುಖಂಡರ ಮೇಲೆ ದೌರ್ಜನ್ಯ ಎಸಗಿತು ಬಿಜೆಪಿ ಸರ್ಕಾರ. ಹಿಂದೂ ಮತಾಂಧರು ಮಾತ್ರ ಏನು ಮಾಡಿದರೂ ಮನ್ನಾ ಹೀಗಿದೆ ಬಿಜೆಪಿ ದರ್ಬಾರ್‌ನಲ್ಲಿ.

ಆತ್ಮವಂಚನೆ

ಚೀನಾ ಪ್ರವಾಸದಲ್ಲಿರುವ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಚೀನಾದ ಬಂಡವಾಳವನ್ನು ಆಹ್ವಾನಿಸುತ್ತಾ, ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಉತ್ತಮವಾಗಿದೆ. ಇಲ್ಲಿ ಬಂಡವಾಳ ಹೂಡಿ ಎಂದಿದ್ದಾರೆ. ಸಂಘ ಪರಿವಾರದ ಸಂಘಟನೆಗಳು ರಾಜ್ಯದಲ್ಲಿ ಅದರಲ್ಲೂ ಕರಾವಳಿ ನಡೆಸುತ್ತಿರುವ ಅವಾಂತರಗಳನ್ನು ಯಡಿಯೂರಪ್ಪ ಮರೆತುಬಿಟ್ಟರಾ ಹೇಗೆ? ಮರೆತಿರಲಿಕ್ಕಿಲ್ಲ. ಇದೊಂಥರಾ ಆತ್ಮವಂಚನೆ. ಅದು ಬಿಜೆಪಿ ಮುಖಂಡರುಗಳಿಗೆ ತುಂಬಾ ಅಭ್ಯಾಸವಾಗಿರುವುದರಿಂದ ಇಂಥ ಮಾತುಗಳೆಲ್ಲಾ ಸರಾಗವಾಗಿ ಹೊರಬೀಳುತ್ತವೆ. ಯಾವುದೇ ಅಳುಕು ಇಲ್ಲದೆ.

ಜಗದಗಲ

ಶರತ್‌ಚಂದ್ರ

ಜಪಾನಿನ ರಾಜಕೀಯ ಸುನಾಮಿ ಆಳುವ ಎಲ್.ಡಿ.ಪಿ.ಗೆ ಪರಾಭವ

ಜಪಾನಿನಲ್ಲಿ ಇತ್ತೀಚೆಗೆ ನಡೆದ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಕಳೆದ 50 ವರ್ಷಕ್ಕಿಂತಲೂ (1993-94ರಲ್ಲಿ ಒಂದು ವರ್ಷ ಬಿಟ್ಟು) ಹೆಚ್ಚು ಕಾಲ ಆಳುವ ಪಕ್ಷವಾಗಿದ್ದ ಎಲ್.ಡಿ.ಪಿ. (ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿ) ಪರಾಭವ ಹೊಂದಿದೆ. ಪ್ರಮುಖ ವಿರೋಧ ಪಕ್ಷವಾಗಿದ್ದ ಡೆಮೊಕ್ರಾಟಿಕ್ ಪಾರ್ಟಿ ಇತರ ಸಣ್ಣ ಪಕ್ಷಗಳ ಜತೆಗೆ ಬಹುಮತ ಗಳಿಸಿದೆ. ಇದು ಜಪಾನಿ ರಾಜಕೀಯದಲ್ಲಿ ಸುನಾಮಿಯಷ್ಟೇ ಅನಿರೀಕ್ಷಿತ ಮತ್ತು ತೀವ್ರಗತಿಯ ಬದಲಾವಣೆ. ಎಲ್.ಡಿ.ಪಿ. ಸೋಲುತ್ತಿರುವುದು ಎರಡನೇ ಸಲ. ಮೊದಲ ಬಾರಿ ಅದು ಪಾರ್ಲಿಮೆಂಟಿನಲ್ಲಿ ಅತೀ ದೊಡ್ಡ ಪಕ್ಷವಾಗಿರುವುದಿಲ್ಲ. ಆಳುವ ರಂಗದ ಇನ್ನೊಂದು ಪಕ್ಷ ನ್ಯೂ ಕೊಮಿಟೊ ಸಹ ಪರಾಭವಗೊಂಡಿದೆ.

ಶೇಕಡಾ ಮತಗಳಿಕೆ ಮತ್ತು ಸೀಟುಗಳಿಕೆಯಲ್ಲಿ ಎಲ್.ಡಿ.ಪಿ. ಮತ್ತು ಡೆಮೊಕ್ರಾಟಿಕ್ ಪಾರ್ಟಿ ಪಾತ್ರ ತಿರುವು ಮುರುವಾಗಿದೆ. 2005 ರಲ್ಲಿ ನಡೆದ ಚುನಾವಣೆಗಳಲ್ಲಿ ಎಲ್.ಡಿ.ಪಿ. 480 ಪಾರ್ಲಿಮೆಂಟರಿ ಸೀಟುಗಳಲ್ಲಿ 303 ಸೀಟು ಮತ್ತು ಶೇ. 47.7 ಮತ ಗಳಿಸಿದ್ದರೆ, ಈಗ ಅದು 119 ಸೀಟು ಮತ್ತು ಶೇ. 26.7 ಮತಗಳಿಕೆಗೆ ಕುಸಿದಿದೆ. ಬದಲಾಗಿ ಡೆಮೊಕ್ರಾಟಿಕ್ ಪಾರ್ಟಿ ಈಗ 308 ಸೀಟು ಮತ್ತು ಶೇ. 42.4 ಮತ ಗಳಿಸಿದ್ದರೆ, 2005 ರಲ್ಲಿ ಅದು 113 ಸೀಟು ಮತ್ತು ಶೇ. 36.4 ಮತಗಳಿಕೆ ಇತ್ತು. ಎಲ್.ಡಿ.ಪಿ. ಯದ್ದೇ ಗತಿ ನ್ಯೂ ಕೊಮಿಟೊ 2005 ರಲ್ಲಿ 31 ಸೀಟು ಮತ್ತು ಶೇ. 13.3 ಮತ ಗಳಿಸಿದ್ದರೆ, ಈಗ ಅದು 21 ಸೀಟು ಮತ್ತು ಶೇ. 11.5 ಮತಗಳಿಕೆಗೆ ಕುಸಿದಿದೆ. ಜಪಾನ್ ಮಿಶ್ರ ಚುನಾವಣಾ ವ್ಯವಸ್ಥೆ ಅನುಸರಿಸುತ್ತಿದ್ದು, 300 ಸೀಟುಗಳು ನೇರ ಚುನಾವಣೆಯ ಆಧಾರದ ಮೇಲೆ, ಮತ್ತು ಉಳಿದ 180 ಸೀಟುಗಳು ಪಕ್ಷಗಳು ಗಳಿಸಿದ ಮತಗಳಿಕೆಯ ಅನುಪಾತದ ಮೇಲೆ ನಿರ್ಧಾರ ಆಗುತ್ತವೆ.

ಡೆಮೊಕ್ರಾಟಿಕ್ ಪಾರ್ಟಿ ನಿಚ್ಚಳ ಬಹುಮತ ಪಡೆದಿದ್ದರೂ ಎರಡು ಸಣ್ಣ ಪಾರ್ಟಿಗಳಾದ ಸೋಶಿಯಲ್ ಡೆಮೊಕ್ರಾಟಿಕ್ ಪಾರ್ಟಿ ಮತ್ತು ನ್ಯೂ ಪೀಪಲ್ಸ್ ಪಾರ್ಟಿ ಜತೆ ಸಮಿಶ್ರ ಸರ್ಕಾರ ನಡೆಸಲಿದೆ. ಈ ಸಮಿಶ್ರ ಸರ್ಕಾರ ಮೂರನೇ ಎರಡು ಬಹುಮತ ಹೊಂದಿ ಹಲವು ಪ್ರಮುಖ ಬದಲಾವಣೆಗೆ ಅನುವಾಗುತ್ತದೆ. ಡೆಮೊಕ್ರಾಟಿಕ್ ಪಾರ್ಟಿಯ ನಾಯಕ ಹಟೊಯಾಮಾ ಪ್ರಧಾನಿಯಾಗಲಿದ್ದಾರೆ.

ಬದಲಾವಣೆಗೆ ಮತ

ಎಲ್.ಡಿ.ಪಿ.ಯು ಪರಾಭವ ಮತ್ತು ಡೆಮೊಕ್ರಾಟಿಕ್ ಪಾರ್ಟಿಯ ನಾಯಕತ್ವದಲ್ಲಿ ಸರ್ಕಾರ ರಚನೆ, ಬರಿಯ ಆಳುವ ಪಾರ್ಟಿಯ ಬದಲಾವಣೆ ಮಾತ್ರವಲ್ಲ. 50 ವರ್ಷಗಳ ಕಾಲ ಬೇರೂರಿದ್ದ ಬಲಪಂಥೀಯ ಶಕ್ತಿಗಳಿಗೆ ಭಾರೀ ಪರಾಭವ. ಮಧ್ಯಮ-ಎಡ ಪಂಥೀಯ ಶಕ್ತಿಗಳಿಗೆ ದೊರೆತ ದೊಡ್ಡ ನೆಗೆತ. ಎಲ್.ಡಿ.ಪಿ. ಜಪಾನಿನ ದೈತ್ಯ ಕಂಪನಿಗಳ, ರೂಪಿಸುವ ಹೋರಾಟದಲ್ಲಿ 1998 ರಲ್ಲಿ ಹುಟ್ಟಿದ ಡೆಮೊಕ್ರಾಟಿಕ್ ಪಾರ್ಟಿ ತೊಡಗಿತ್ತು. ಎಲ್.ಡಿ.ಪಿ.ಯ ನಾಯಕರ ಭ್ರಷ್ಟಾಚಾರ ಹಗರಣಗಳು ಅದರ ಪ್ರಭಾವಕ್ಕೆ ಭಾರೀ ಹಾನಿ ಉಂಟು ಮಾಡಿತ್ತು. ಎಲ್.ಡಿ.ಪಿ.ಯ ಒಳಗೆ ಗುಂಪುಗಾರಿಕೆ ಸಹ ತೀವ್ರವಾಗಿತ್ತು.

ಇತ್ತೀಚಿನ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಏರುತ್ತಿದ್ದ ನಿರುದ್ಯೋಗ ಮತ್ತು ಸಂಕಟಗಳನ್ನು ಎದುರಿಸುವಲ್ಲಿ ಸರ್ಕಾರದ ನಿಷ್ಕಿಯತೆ ಮತ್ತು ವೈಫಲ್ಯ ಎಲ್.ಡಿ.ಪಿ. ಜನಬೆಂಬಲ ಕಳೆದುಕೊಳ್ಳಲು ಮುಖ್ಯ ಕಾರಣವಾಗಿತ್ತು. ಅಮೆರಿಕದ ಬಾಲಂಗೋಚಿಯಾಗುವ ಎಲ್.ಡಿ.ಪಿ. ನೀತಿಗೆ ಸಹ ವ್ಯಾಪಕ ವಿರೋಧ ಇತ್ತು. ಹಾಗೆ ನೋಡಿದರೆ ಜಪಾನಿನ ಆರ್ಥಿಕ ಬಿಕ್ಕಟ್ಟು 1990 ರ ದಶಕದಲ್ಲೇ ಆರಂಭವಾಗಿತ್ತು. ಆಗಲೇ ಜಪಾನಿನ ರಾಜಕೀಯ ರಂಗದ ತಲ್ಲಣ ಸಹ ಆರಂಭವಾಗಿತ್ತು. 1996 ರಲ್ಲಿ ಹುಟ್ಟಿದ ಡೆಮೊಕ್ರಾಟಿಕ್ ಪಾರ್ಟಿ ರಾಜಕೀಯ ರಂಗದಲ್ಲಿ ಬದಲಾವಣೆಗಳ ಪ್ರತಿನಿಧಿಯಾಗಿ ಜನಬೆಂಬಲ ಗಳಿಸಲು ಆರಂಭಿಸಿತ್ತು. ಇಂದಿನ ಪರಿಸ್ಥಿತಿಯಲ್ಲಿ ಜಪಾನಿಯರು ಬದಲಾವಣೆ ಪರವಾಗಿ ಮತ ಚಲಾಯಿಸಿದ್ದು ಅನಿರೀಕ್ಷಿತವೇನಲ್ಲ. ಜಪಾನೀ ರಾಜಕೀಯ ರಂಗದಲ್ಲಿ ಗಟ್ಟಿಯಾಗಿ ಬೇರೂರಿದ್ದ ಬಲಪಂಥೀಯ ನೆಲೆಗಳು ಒಡೆದು, ಮಧ್ಯಮ-ಎಡ ಪಂಥೀಯ ನೆಲೆಗಳು ಬೇರೂರಲು ಆರಂಭವಾಗಿರುವುದು ಖಂಡಿತ ಸಕಾರಾತ್ಮಕ ಬೆಳವಣಿಗೆ.

ಬದಲಾವಣೆಯ ಅಜೆಂಡಾ

ಪ್ರಧಾನಿ ಹಟೊಯಾಮಾ ಚುನಾವಣೆ ಫಲಿತಾಂಶ ಬದಲಾವಣೆಗೆ ಜನರ ತಹತಹ ಕಾರಣ ಎಂದಿದ್ದಾರೆ. ಅವರ ಪಾರ್ಟಿ ಜನರ 'ಆರೈಕೆ' ಮಾಡುವ ಜಪಾನಿ ಸಮಾಜ ಕಟ್ಟುವ ನಿಟ್ಟಿನಲ್ಲಿ ಸರ್ಕಾರದ ಪಾತ್ರದ ಬದಲಾವಣೆ ಮಾಡುವ ಆಶ್ವಾಸನೆ ನೀಡಿದೆ. ಮಕ್ಕಳ ಆರೈಕೆ, ಯುವಜನರ ಶಿಕ್ಷಣ, ವೃದ್ಧರ ಆರೈಕೆ ಮೇಲೆ ಒತ್ತು ನೀಡುತ್ತದೆ. ಅಮೆರಿಕದ ಬಾಲಂಗೋಚಿಯಾಗದೆ ಇರುವ, ಜಗತ್ತಿನಲ್ಲಿ ಚೀನಾದ ಹೊಸ ಪಾತ್ರ ಗಮನಕ್ಕೆ ತೆಗೆದುಕೊಳ್ಳುವ, ಕೊರಿಯಾ ಸೇರಿದಂತೆ ನೆರೆಹೊರೆಯಲ್ಲಿ ಶಾಂತಿಗೆ ಬೆಂಬಲ ನೀಡುವ, ಹವಾಮಾನ ಬದಲಾವಣೆ ಎದುರಿಸುವ ತುರ್ತು ನೀತಿ ಅಂಗೀಕರಿಸುವ - ಬದಲಾವಣೆಗಳ ಭರವಸೆಯನ್ನು ಪ್ರದಾನಿ ಹಟೊಯಾಮಾ ಹುಟ್ಟಿಸಿದ್ದಾರೆ. ಆದರೆ ಇವೆಲ್ಲಾ ಬದಲಾವಣೆಗಳನ್ನು ಬಂಡವಾಳಶಾ ವ್ಯವಸ್ಥೆಯನ್ನು ಸುಧಾರಿಸುವುದರಿಂದ ಮಾ ಸಾಧ್ಯವೇ?

ಕೃಪೆ: ದಿ ಹಿಂದೂ



ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತುಹಾ ನಿಜವಾದ ಬದಲಾವಣೆ ಸಾಧ್ಯವಿಲ್ಲ ಎಂದು ಜ ಮುಂದೆ ಹೋದ ಜಪಾನಿ ಕಮ್ಯುನಿಸ್ಟ್ ಪಾರ್ಟಿ ಸೀಟು (9) ಅಥವಾ ಮತಗಳಿಕೆಯಲ್ಲಿ (ಶೇ ಬದಲಾವಣೆ ಆಗಿಲ್ಲ. ತೀವ್ರ ಆರ್ಥಿಕ ಬಿಕ್ಕ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಾರ್ಟಿ ಮ ಮಾರ್ಕ್ಸ್‌ವಾದ ಭಾರೀ ಜನಬೆಂಬಲ (ಪ್ರತೀ ತಿಂಗ ಸಾವಿರ ಹೊಸ ಸದಸ್ಯರು ಪಾರ್ಟಿ ಸೇರುತ್ತಿದ್ದಾ ಗಳಿಸುತ್ತಿದ್ದ ಹಿನ್ನೆಲೆಯಲ್ಲಿ ಇದು ಸ್ವಲ್ಪ ಮ ಅನಿರೀಕ್ಷಿತವಾಗಿತ್ತು. ಆರ್ಥಿಕ ಬಿಕ್ಕಟ್ಟು ಜಪಾ ಜನತೆಯ ರಾಜಕೀಯ ಕಣ್ಣೋಟದಲ್ಲಿ ಮಹ ಬದಲಾವಣೆ ತಂದರೂ, ಬಂಡವಾಳಶಾ ವ್ಯವಸ್ಥೆ ಬಗ್ಗೆ ನೆಚ್ಚಿಕೆ ದುರ್ಬಲವಾಗಿದೆ ವಿನಹ ಪೂರ್ತಿ ಹೋಗಿಲ್ಲ ಎಂಬುದು ಇ ಅರ್ಥ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತಿ ಸುಧಾರಣೆಗಳನ್ನು ಜನ ಬಯಸುತ್ತಿದ್ದಾರೆ ವಿನಹ ವ್ಯವಸ್ಥೆಯನ್ನು ಕಿತ್ತು ಹಾಕುವುದನ್ ಈ ಸನ್ನಿವೇಶದಲ್ಲಿ ಜಪಾನೀ ಕಮ್ಯುನಿ ಪಾರ್ಟಿ 'ರಚನಾತ್ಮಕ ವಿರೋಧ ಪಕ್ಷ' ಕೆಲಸ ಮಾಡುತ್ತಾ ಬದಲಾವಣೆಗೆ ಹೇರುವುದಾಗಿ ಹೇಳಿದೆ. ಪ್ರಧಾನಿ ಹಟೊಯಾ ಅವರ ಬದಲಾವಣೆಯ ಭರವಸೆ ಅಮೆರಿಕದ ಒಬಾಮಾರ ಹಾದಿ ಹಿಡಿಯುವುದಿಲ್ಲ. ಹಿ ಜಪಾನಿ ಕಮ್ಯುನಿಸ್ಟ್ ಪಾರ್ಟಿ ಅದರ ಮೇಲೆ ಹೇರಲು ಸಮರ್ಥವಾಗುತ್ತದೆ ಎಂದು ಆಶಿಸಬೇಕಾ

ಅಫ್ಘಾನಿ ಜನರ ಬುರುಡೆಗಳ ಮೇಲೆ ಗನ್ನು ಹಿಡಿದ ಚುನಾವಣೆಗಳ

ಅಫ್ಘಾನಿಸ್ತಾನಿ ಅಧ್ಯಕ್ಷೀಯ ಚುನಾವಣೆಗಳು ನಡೆದಿದ್ದು, ಅದು ದುರಂತ ನಾಟಕವೋ ಅಥವಾ ಪ್ರಹಸನವೋ ಎಂದು ಕಾದು ನೋಡಬೇಕಾಗಿದೆ. ಚುನಾವಣೆಗಳ ವಾರಗಳ ನಂತರವೂ ಸರಿಯಾದ ಮತ ಚಲಾವಣೆಯ ಅಂಕಿ ಅಂಶ ಅಥವಾ ಫಲಿತಾಂಶ ಇಲ್ಲದಿರುವುದೇ ಈ ಚುನಾವಣೆಗಳ ವೈಚಿತ್ರ್ಯ ತೋರಿಸುತ್ತದೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಈ ಚುನಾವಣೆಗಳು ಅಫ್ಘಾನಿಸ್ತಾನಿ ಜನತೆಯ ಬುರುಡೆ ಮೇಲೆ ಗನ್ನು ಹಿಡಿದು ನಡೆಸಿದ ಚುನಾವಣೆಗಳು. ಒಂದು ಲಕ್ಷಕ್ಕೂ ಹೆಚ್ಚು ವಿದೇಶೀ ಸೈನ್ಯ ಮತ್ತು 1.8 ಲಕ್ಷ ಅಫ್ಘಾನೀ ಸೈನ್ಯದ ಗನ್ನುಗಳು, ದಿನಾ ಅಮೆರಿಕನ್-ನಾಟೋ ಯುಧ್ಧವಿಮಾನಗಳ ಬಾಂಬುದಾಳಿ ಒಂದು ಕಡೆಗೆ. ಇನ್ನೊಂದು ಕಡೆಗೆ ಚುನಾವಣೆ ಬಹಿಷ್ಕಾರಕ್ಕೆ ಕರೆ ಕೊಟ್ಟು ಮತಗಟ್ಟೆಗೆ ಹೋದರೆ ಮುಗಿಸಿ ಬಿಡುತ್ತೇವೆ ಎಂದು ಬೆದರಿಸುವ ಕುಖ್ಯಾತ ಮೂಲಭೂತವಾದಿ ತಾಲಿಬಾನಿಗಳು. ವಿದೇಶೀ ಮಿಲಿಟರಿ ಇರುವಾಗ ಯಾವುದೇ ದೇಶದಲ್ಲಿ ಚುನಾವಣೆ ನಡೆಸುವುದೇ ಅರ್ಥಹೀನ.

ಕಳೆದ 4 ವರ್ಷಗಳಿಗಿಂತ ಹೆಚ್ಚು ಕಾಲ ಆಳಿದ ಮೇಲೂ ಅಫ್ಘಾನಿ ಜನತೆಗೆ ಕನಿಷ್ಟ ಶಾಂತಿ-ಭದ್ರತೆ ಸಹ ಒದಗಿಸಲಾಗದ ಕರ್ಜಾಯಿ ಅಥವಾ ಆತನ ಮಾಜೀ ಸಹಚರರ ಮಧ್ಯೆ ಇದ್ಯಾವ ಆಯ್ಕೆ ? ರಕ್ಷಣೆ ಕೊಡಬೇಕಾದ ಅಮೆರಿಕ-ನಾಟೋ ಸೈನ್ಯದಲ್ಲಿ ಪ್ರತೀ ತಿಂಗಳು ಸರಾಸರಿ 50 ಸೈನಿಕರು ಸಾಯುತ್ತಿದ್ದಾರೆ. ಅವರ ಆಳ್ವಿಕೆಯಲ್ಲಿ ತಾಲಿಬಾನ್ ಇನ್ನಷ್ಟು ಪ್ರಬಲವಾಗಿದೆ. ಶೇ. 60 ರಷ್ಟು ಪ್ರದೇಶದಲ್ಲಿ ಸರ್ಕಾರದ ಅಡ್ರೆಸ್ಸೇ ಇಲ್ಲ. ಇನ್ನು ಮತಗಟ್ಟೆಗಳಿಗೆ ರಕ್ಷಣೆ ಕೊಡುವ ಪ್ರಶ್ನೆ ಎಲ್ಲಿ ಬಂತು ? ನಂಬಬಹುದಾದ ಮತದಾನದ ಅಂಕೆ ಸಂಖ್ಯೆ ಇನ್ನೂ ವರದಿಯಾಗಿಲ್ಲ. ಆದರೆ ಇದು ಶ. 20 ಕ್ಕಿಂತ ಹೆಚ್ಚು ಇರುವ ಸಾಧ್ಯತೆ ಕಡಿಮೆ.

ಆಳುತ್ತಿರುವ ಅಮೆರಿಕದ ಈಗಿನ ಬಾಲಬಡ (ಕರ್ಜಾಯಿ ಮತ್ತು ಕಂಪನಿ) ಮತ್ತು ಅವರ ಮ ಅಕ್ರಮ ಸಂತಾನ ತಾಲಿಬಾನಿಗಳೆರಡನ್ನೂ ದ್ವೇಷಿ ಬಹುಸಂಖ್ಯಾತ ಅಫ್ಘಾನಿ ಜನತೆಗೆ ಎಲ್ಲಿದೆ ಆ ಇದು ಅಫ್ಘಾನಿ ಜನತೆಗೆ ಬೇಡವಾಗಿರುವ ಚುನಾ ಅಫ್ಘಾನಿ ಸರ್ಕಾರ ಅಲ್ಲಿನ ಜನತೆ ಮೇಲೆ ಹೊ ಕರ್ಜಾಯಿ ಅಥವಾ ಇತರ ಅಮೆ ಬಾಲಬಡುಕರ ಸರ್ಕಾರ ಅಲ್ಲ. ಅದು ಜನತೆ ಆರಿಸಲ್ಪಟ್ಟ ಸರ್ಕಾರ ಎಂದು ವಿಶ್ವದ ಜ ತೋರಿಸಲು ಒಬಾಮಾರಿಗೆ ಬೇಕಾಗಿದ ಚುನಾವಣೆ. ಎಲ್ಲಾ ದೇಶಗಳಲ್ಲೂ 'ಪ್ರಜಾಪ್ರ ಸ್ಥಾಪಿಸಲು' ಮಾತ್ರ ನಾವು ಮಿಲಿಟರಿ ದಾಳಿ ಮಾ ಎಂದು ಹೇಳಲು ಅಮೆರಿಕದ ಆಳುವ ವರ್ಗ ಬೇಕಾಗಿದೆ ಈ ಚುನಾವಣೆ.




ಅಕಾಲಿಕವಾಗಿ ಕಣ್ಮರೆಯಾದರೂ ಯಶಸ್ವಿಯಾದ ಚಂದ್ರಯಾನ

ಮ್ಮ ದೇಶದ ಬಾಹ್ಯಾಕಾಶ ಸಂಸ್ಥೆ ಇಸ್ರೋ ವರ್ಷ ಅಂತರಿಕ್ಷಕ್ಕೆ ಉಡಾಯಿಸಿದ್ದ ಯಾನ-1 ಎಂಬ ಉಪಗ್ರಹ ನಿಯಂತ್ರಣಕ್ಕೆ ಅದರ ಕಾರ್ಯಾಚರಣೆಗಳು ಕಳೆದ ವಾರ ಕೊಂಡಿವೆ. ಇಸ್ರೋ ಉಡಾಯಿಸಿದ್ದ ಈ ಹದಲ್ಲಿ ಭಾರತದ ಐದು ಕರಣಗಳಲ್ಲದೆ ಸೇರಿದಂತೆ ಇನ್ನೂ ದೇಶಗಳು ನೀಡಿದ್ದ 6 ರಣಗಳಿದ್ದವು. ಇವು ರು ಹತ್ತು ತಿಂಗಳಿಗೂ ಕಾಲ ನಿರತವಾಗಿದ್ದವು.



ಕ್ಕೆ ಕಾರಣಗಳು:

ಪಗ್ರಹವು 700 ವ್ಯಾಟ್ ಸೋಲಾರ್-ಚಾಲಿತ ಯನ್ನು ಹೊಂದಿತ್ತು. ಒಂದು ಕೆಟ್ಟು ಹೋಗಿದ್ದನ್ನು ಉಡಾವಣೆ ದಲ್ಲಿಯೇ ಗಮನಿಸಲಾಗಿತ್ತು. ಆದರೂ ಳು ಪರ್ಯಾಯ ಸೆನ್ಸಾರ್‌ಗಳ ಮೂಲಕ ಕವು ಚಾಲನೆಯಲ್ಲಿರುವಂತೆ ಮಾಡುವಲ್ಲಿ ಗಿದ್ದರು. ಉಡಾವಣೆಯಾದ 312 ದಿನಗಳ ಉಪಗ್ರಹದೊಂದಿಗೆ ರೇಡಿಯೋ ನಿಯಂತ್ರಣ ಂಡಿತು. ಇದರಿಂದಾಗಿ ದೂರ ಅಂತರಿಕ್ಷ ಯೋಜನೆಯು ನಿರೀಕ್ಷಿತ 24 ತಿಂಗಳ ಮುನ್ನವೇ ಮುಗಿದಿದೆ. ಇದಕ್ಕೆ ತಕ್ಷಣದ ಳೆಂದರೆ, ಚಂದ್ರನ ಸುತ್ತಲಿನ ರಣದಲ್ಲಿ ಹೆಚ್ಚಿನ ವಿಕಿರಣತೆಯಿಂದಾಗಿ ಹದಲ್ಲಿದ್ದ ಎರಡೂ ಟರ್ ಘಟಕಗಳನ್ನು ಸುತ್ತಿದ್ದ ವಿದ್ಯುತ್ ಜು ಘಟಕಗಳು ಂಡವು. ಇದರಿಂದ ವ್ಯವಸ್ಥೆ ಕುಸಿದುಬಿದ್ದಿತು. ಸಂಸ್ಥೆಯ ಮುಖ್ಯಸ್ಥ ನ್ ನಾಯರ್ ುವುದು ಹೀಗಿದೆ. ಡು ಹೆಚ್ಚಿನ ವಿಕಿರಣ ಉಷ್ಣಾಂಶ ಏರಿಳಿತವನ್ನು ರೀಕ್ಷಿಸಿರಲಿಲ್ಲ. ಆದರೆ ಳಿ ಉಪಗ್ರಹವನ್ನು ತಂದಾಗಷ್ಟೆ ಇದು ಬಂದಿತು. ಮೊದಲಿಗೆ ಚಂದ್ರನಿಂದ ದೂರದ ಕಕ್ಷೆಯಲ್ಲಿ ಉಪಗ್ರಹವನ್ನು



ಸೇರಿಸಲು ಯೋಜಿಸಿತ್ತಾದರೂ ವಾತಾವರಣ ಏರುಪೇರಿನಿಂದಾಗಿ ಚಂದ್ರನ ಬಳಿಯಿದ್ದ ಉಪಗ್ರಹವನ್ನು ದೂರದ ಕಕ್ಷೆಗೆ ತಳ್ಳಲು ಪ್ರಯತ್ನಿಸಲಾಯಿತು. ಅತ್ಯುತ್ತಮ ಪಾಠಗಳನ್ನು ಈ ಯೋಜನೆಯಿಂದ' ಕಲಿತಿದ್ದೇವೆ. ಮುಂದೆ ವಾತಾವರಣದ ಹೆಚ್ಚಿನ ವಿಕಿರಣವನ್ನು ಮತ್ತು ಉಷ್ಣಾಂಶದ ಏರಿಳಿತವನ್ನು ತಾಳಿಕೊಳ್ಳಬಲ್ಲ ಉಪಕರಣಗಳನ್ನು ಅಳವಡಿಸುತ್ತೇವೆ.”

ಚಂದ್ರಯಾನ-1 ಉತ್ತಮ ಯಶಸ್ಸು :

ಅವಧಿಗೆ ಮುನ್ನವೇ ಉಪಗ್ರಹವು ಉಪಯುಕ್ತತೆಯನ್ನು ಕಳೆದುಕೊಂಡಿದ್ದರೂ ಭಾರತೀಯ ವಿಜ್ಞಾನಿಗಳು ನಿರಾಶೆಗೊಂಡಿಲ್ಲ. ಚಂದ್ರನೆಡೆಗೆ ಉಪಗ್ರಹವನ್ನು ಒಯ್ಯುವಲ್ಲಿ ಇದು ಭಾರತದ ಪ್ರಥಮ ಪ್ರಯತ್ನ. ಇದರಿಂದ ದಂತಭಗ್ನವೇನೂ ಆಗಿಲ್ಲ. ಏಕೆಂದರೆ, ಇಂತಹ ಸಂಕೀರ್ಣ ಬಾಹ್ಯಾಕಾಶ ಉಪಗ್ರಹಗಳನ್ನು ಚಂದ್ರನಲ್ಲಿಗೆ ಕಳುಹಿಸುವಾಗ ಅಮೇರಿಕಾ ಮತ್ತು ರಷ್ಯಾ ಹಲವು ಬಾರಿ ವಿಫಲಗೊಂಡಿವೆಯಲ್ಲದೆ, ಈ ಉಪಗ್ರಹ ಈಗಾಗಲೇ ಶೇ. 95ರಷ್ಟು ಕೆಲಸ ಪೂರ್ಣಗೊಳಿಸಿ ಯಶಸ್ವಿಯಾಗಿದೆ. ಆ ಲೆಕ್ಕಾಚಾರದಲ್ಲಿ ಹೇಳುವುದಾದರೆ, ಭಾರತ ಮತ್ತು ಚೀನಾ ಮಾತ್ರವೇ ಒಂದೇ ಪ್ರಯತ್ನಕ್ಕೆ ಯಶಗಳಿಸಿರುವುದು. ಅಲ್ಲದೆ ಇದಕ್ಕೆ ತಗುಲಿದ ವೆಚ್ಚ ರೂ. 380 ಕೋಟಿಯಾಗಿದ್ದು, ಇದು ಇತರೆ ದೇಶಗಳು ಇಂತದೇ ಯೋಜನೆಗಾಗಿ ವ್ಯಯಿಸಿರುವ ವೆಚ್ಚಕ್ಕಿಂತ ಕಡಿಮೆಯದ್ದು.

ಈ ಉಪಗ್ರಹವು ಸುಮಾರು ಹತ್ತು ತಿಂಗಳ ಕಾಲ ನಿರಂತರವಾಗಿ ಚಂದ್ರನಿಂದ ನಮಗೆ 70,000 ಫೋಟೋಗಳನ್ನು ಕಳುಹಿಸಿಕೊಟ್ಟಿದೆ. ತನ್ನ ಕಾರ್ಯಾವಧಿಯಲ್ಲಿ ಚಂದ್ರನ ಸುತ್ತಲೂ 3400 ಬಾರಿ ಪ್ರದಕ್ಷಿಣೆ ಹಾಕಿರುವ ಈ ಉಪಗ್ರಹ ಮತ್ತು ಅದರಲ್ಲಿದ್ದ ದೇಶೀಯ ಮತ್ತು ವಿದೇಶೀಯ ಉಪಕರಣಗಳು ಅತ್ಯಮೂಲ್ಯ ಮಾಹಿತಿ ಮತ್ತು ಫೋಟೋಗಳನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿವೆ. ಕ್ಷ-ಕಿರಣಗಳು ಮತ್ತು ರೇಡಾರ್‌ಗಳನ್ನು ಬಳಸಿಕೊಂಡು ಚಂದ್ರನ ಮೇಲ್ಮೈಯ ಕುರಿತಾಗಿ ಅಭೂತಪೂರ್ವ ಮಾಹಿತಿಗಳನ್ನು ಹಿಡಿದುತಂದಿವೆ. ಇಂತಹ ಮಾಹಿತಿಗಳು ಮುಂದಿನ ದಿನಗಳಲ್ಲಿ ಚಂದ್ರನ ಉಗಮ, ವಿಕಾಸ ಮತ್ತು ಅದರಲ್ಲಿರುವ ಖನಿಜಗಳು, ಮತ್ತು ಚಂದ್ರನ ಧ್ರುವಗಳಲ್ಲಿ ಇನ್ನೂ ನೀರಿನ ಮೂಲಗಳು ಅಡಗಿವೆಯೇ? ಇತ್ಯಾದಿಗಳ ಕುರಿತು ಬೆಳಕು ಚೆಲ್ಲಲಿದೆ.


ಪ್ರಥಮ ಪ್ರಯತ್ನದಲ್ಲೇ ಎರಡು ಗುರಿ ಸಾಧನೆ:

ಚಂದ್ರಯಾನ-1 ಯೋಜನೆಯು ಎರಡು ಗುರಿಗಳನ್ನು ಹೊಂದಿತ್ತು. ಚಂದ್ರನಿಂದ 100 ಕಿ.ಮೀ ದೂರದ ಕಕ್ಷೆಯೊಂದರಲ್ಲಿ ಉಪಗ್ರಹವನ್ನು ಸೇರಿಸಬೇಕಿತ್ತು ಮತ್ತು ಚಂದ್ರನ ಮೇಲ್ಮೈಗೆ ಉಪಕರಣವೊಂದನ್ನು ತಲುಪಿಸಬೇಕಿತ್ತು. ಇಡಿ ವಿಶ್ವದಲ್ಲಿಯೇ ಒಂದೇ ಉಪಗ್ರಹ ಉಡಾವಣೆಯಿಂದ ಇವೆರಡೂ ಗುರಿಸಾಧಿಸಿದ ಕೀರ್ತಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯದು.

ಚಂದ್ರಯಾನ-2:

ರಷ್ಯಾದ ಸಹಕಾರದೊಂದಿಗೆ ಇಸ್ರೋ ಸಂಸ್ಥೆಯು ಅಭಿವೃದ್ಧಿಪಡಿಸುತ್ತಿರುವ ಚಂದ್ರಯಾನ-2 ಉಪಗ್ರಹವನ್ನು 2011-12ರಲ್ಲಿ ಉಡಾಯಿಸಲು ಸಿದ್ಧತೆ ನಡೆಸಿದೆ. ಇದರಲ್ಲಿ ಲ್ಯಾಂಡರ್ ಮತ್ತು ರೋಬೋಟ್ ಚಾಲಿತ ರೋವರ್ ಗಳನ್ನು ಚಂದ್ರನ ಮೇಲೆ ಇಳಿಸಲಾಗುವುದು.

ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ದುರಸ್ತಿ ಕಾರ್ಯ:



ಅಮೇರಿಕಾದ 'ಡಿಸ್ಕವರಿ' ಗಗನನೌಕೆಯು ಹೊತ್ತೊಯ್ದಿದ್ದ ಗಗನಯಾತ್ರಿಗಳು ಅಂತರಿಕ್ಷದಲ್ಲಿರುವ ಬಾಹ್ಯಾಕಾಶ ನಿಲ್ದಾಣದ ದುರಸ್ತಿ ಕಾರ್ಯದಲ್ಲಿ ಪ್ರಗತಿ ಸಾಧಿಸಿದ್ದಾರೆ ಎಂದು ಅಮೇರಿಕಾದ ಬಾಹ್ಯಾಕಾಶ ನಾಸಾ ತಿಳಿಸಿದೆ. ನಿಲ್ದಾಣದಲ್ಲಿ ಈ ಮೊದಲು ಅಳವಡಿಸಿದ್ದ ಉಷ್ಣಾಂಶ-ನಿಯಂತ್ರಕ ಟ್ಯಾಂಕನ್ನು ಭೂಮಿಗೆ ವಾಪಸು ತರಲು ಏರ್ಪಡಿಸಲಾಗಿದೆ. ಇದು ಸುಮಾರು 800ಕೆಜಿ ತೂಕವಿದ್ದು, ರಿಪೇರಿಯ ನಂತರ ಮತ್ತೆ ಇದನ್ನು ಅಂತರಿಕ್ಷ ನಿಲ್ದಾಣಕ್ಕೆ ಸೇರಿಸಲಾಗಿದೆ.

ಮನುಷ್ಯ ಮಾತ್ರ...

ಪುಟ 2 ರಿಂದ

ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ ಘೋಷಣೆಯೊಂದಿರುವ ಎಸ್‌ಎಫ್‌ಐ ನ ಶ್ವೇತಪತಾಕೆಯನ್ನು ರಾಜ್ಯಾಧ್ಯಕ್ಷರಾದ ಹೆಚ್.ಆರ್.ನವೀನ್ ಕುಮಾರ್‌ರವರು ಹಾರಿಸುವ ಮೂಲಕ ಶಿಬಿರಕ್ಕೆ ಅಧಿಕೃತ ಚಾಲನೆ ಸಿಕ್ಕಿತು.

ಕಲಾಂಗಣ್ ನ ಗುರಿಕಾರರಾಗಿ ಯವ್ವನದಲ್ಲಿ ಕಾರ್ಮಿಕ ಚಳುವಳಿಯ ಮುಂದಾಳಾಗಿದ್ದು ಈಗ ತಮ್ಮ ಸುಂದರ ಕನಸಿನ ಸಾಂಸ್ಕೃತಿಕ ಕೇಂದ್ರವನ್ನು ನನಸಾಗಿಸಿಕೊಂಡು ಸಾಂಸ್ಕೃತಿಕ ಕ್ಷೇತ್ರದಲ್ಲಿ ನಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರು, ಶಿಬಿರದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರೂ ಆಗಿರುವ ಸಂಗಾತಿ ಎರಿಕ್ ಬಜಾರಿಯೋರವರು ಕಡಲು ತಡಿ ಕರಾವಳಿಯ ಸುಂದರ ತಾಣವಾದ ಮಂಗಳೂರಿಗೆ ಬಂದ ಎಲ್ಲಾ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸೈದ್ಧಾಂತಿಕ ಚರ್ಚೆಗೆ ಸ್ಫೂರ್ತಿ ನೀಡಿದ ಸಾಂಸ್ಕೃತಿಕ ಕಾರ್ಯಕ್ರಮ

ಸಭಾಂಗಣದ ಹೊರಭಾಗದಲ್ಲಿ ಧಾರಾಕಾರವಾದ ಮಳೆ ಸಭಾಂಗಣದ ಒಳಭಾಗದಲ್ಲಿ 200 ವಿದ್ಯಾರ್ಥಿ ಪ್ರತಿನಿಧಿಗಳು ಈ ಸಮಾಜದ ಅನಿಷ್ಟಗಳಾದ ಜಾತಿ ಅಸ್ಪೃಶ್ಯತೆ, ಕೋಮುವಾದ, ಭಯೋತ್ಪಾದನೆ, ನಕ್ಸಲ್‌ವಾದ ಇಂತಹ ವಿಚಾರಗಳ ಹುಟ್ಟಿನ ಮೂಲ ಮತ್ತು ಇವುಗಳಿಂದ ಮಾನವ ಸಮಾಜದ ಮೇಲಾಗುತ್ತಿರುವ ಪರಿಣಾಮಗಳ ಜೊತೆ ಪ್ರಸಕ್ತ ಶೈಕ್ಷಣಿಕ ಪರಿಸ್ಥಿತಿ, ಆರ್ಥಿಕ ಬಿಕ್ಕಟ್ಟು, ಪರ್ಯಾಯ, ಹಾಗೆ ಸೌರಮಂಡಲದಲ್ಲಿ ಭೂಮಿ ಹುಟ್ಟಿನಿಂದ ಹಿಡಿದು ಭೂಮಂಡಲದ ಮೇಲೆ ಜೀವಿಗಳ ಉಗಮ, ನಂತರದಲ್ಲಿ ಮಾನವನ ವಿಕಾಸ, ಮಾನವ ಸಮಾಜದ ಬೆಳವಣಿಗೆಗಳ ಕುರಿತು ಗಂಭೀರ ಚರ್ಚೆಗಳು ನಾಲ್ಕು ದಿನಗಳ ಕಾಲ ನಡೆದವು. ಇವುಗಳ ಮಧ್ಯೆ ಒಂದು ದಿನ ಸಂಜೆ ಮನಸ್ಸಿಗೆ ಮುದ ನೀಡುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸ್ವಾಗತ ಸಮಿತಿಯ ಸಂಗಾತಿಗಳು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಮೊದಲೇ ಕಲಾಂಗಣ್ ಸಾಂಸ್ಕೃತಿಕ ಕೇಂದ್ರ ಆ ಕೇಂದ್ರದಲ್ಲಿ, ಕೊಂಕಣಿ ಹಾಡು, ನಮ್ಮ ಡಿವೈಎಫ್‌ಐನ ಯುವ ಮಂಡಲಗಳ ಕಿರುನಾಟಕ, ಕ್ರಾಂತಿಗೀತೆಗಳು, ಎಸ್‌ಎಫ್‌ಐ ಸಂಗಾತಿಗಳ ನೃತ್ಯ ನಿಜವಾಗಲೂ ಮೈ ನವಿರೇಳಿಸಿತು. ಈ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತೊಂದಷ್ಟು ಸೈದ್ಧಾಂತಿಕ ಚರ್ಚೆಗಳಿಗೆ ಸ್ಫೂರ್ತಿಯನ್ನು ನೀಡಿತು.

ಅಂತಿಮವಾಗಿ ಪ್ರಸ್ತುತ ಸಮಾಜವನ್ನು ವಸ್ತುನಿಷ್ಟವಾಗಿ ಅರ್ಥ ಮಾಡಿಕೊಂಡ ಪ್ರತಿನಿಧಿಗಳು ಈ ಸಮಾಜದ ಅಸಮಾನತೆ, ತಾರತಮ್ಯ, ಶೋಷಣೆಯ ವಿರುದ್ಧ ಬಲಿಷ್ಠವಾದ ವಿದ್ಯಾರ್ಥಿ ಚಳುವಳಿಯನ್ನು ಕಟ್ಟುವ ಮೂಲಕ ಸಾಮಾಜಿಕ ಸಮಸ್ಯೆಗಳಾದ ಜಾತಿವ್ಯವಸ್ಥೆ, ಕೋಮುವಾದ, ಭಯೋತ್ಪಾದನೆ, ನಕ್ಸಲ್‌ವಾದಗಳನ್ನು ಹಿಮ್ಮೆಟ್ಟಿಸಿ ಹೊಸ ಸಮಾಜವನ್ನು ಕಟ್ಟುವ ಪ್ರತಿಜ್ಞೆಯೊಂದಿಗೆ ಆದರ್ಶ ಮತ್ತು ಸೈದ್ಧಾಂತಿಕ ತಿಳುವಳಿಕೆ, ಸಂಘಟನಾ ಕಣ್ಣೋಟದ ಅರಿವು ಹೊತ್ತು ತಮ್ಮ ಜಿಲ್ಲೆಗಳಿಗೆ ಮರಳಿದರು.



ವಿನಯ್ ಕುಮಾರ್ ಎಂ.ಜಿ

ಚಿತ್ರರಂಗಕ್ಕೆ ಕೆಲವೊಂದು ಉತ್ತಮ ಚಿತ್ರಗಳನ್ನು ನೀಡಿದ ಹಿರಿಯ ನಟ ಕಮಲ್‌ಹಾಸನ್ ಚಿತ್ರರಂಗಕ್ಕೆ ಕಾಲಿಟ್ಟು 50 ವರ್ಷಗಳು ಸಂದಿವೆ. ಈ ಹಿನ್ನೆಲೆಯಲ್ಲಿ ದೂರದರ್ಶನ ವಾಹಿನಿಯೊಂದರಲ್ಲಿ ಪ್ರಸಾರವಾದ ಸಂದರ್ಶನ ಆಯ್ದ ಭಾಗ.........ಓದಿ.

'ಆಸ್ಕರ್' ವಿಶ್ವ ಚಲನಚಿತ್ರ ಪ್ರಶಸ್ತಿ ಅಲ್ಲ

- ಕಮಲಹಾಸನ್

ಪ್ರಶ್ನೆ : ದಕ್ಷಿಣದಿಂದ ಬಂದ ನಟ, ನಟಿಯರಿಗೆ ಬಾಲಿವುಡ್‌ನಲ್ಲಿ ಕೆಲವು ತೊಡಕುಗಳಿವೆ ಅಂತ ಎಲ್ರೂ ಹೇಳ್ತಾರೆ.

ಉ : ಇರಬಹುದು. ಆದ್ರೆ ಬಾಲಿವುಡ್‌ನಲ್ಲಿ ಮಾತ್ರ ಇಲ್ಲ. ತಮಿಳು ಸಿನಿಮಾ ಕ್ಷೇತ್ರದಲ್ಲೂ ವಿರೋಧಗಳಿವೆ. ನನ್ನೊಟ್ಟಿಗೆ ಕೆಲಸ ಮಾಡಲು ಬಹಳಷ್ಟು ಜನ ಹಿಂಜರಿಯುತ್ತಾರೆ. ಅದು ಸೈದ್ಧಾಂತಿಕ ಬದ್ಧತೆಯ ಪ್ರಶ್ನೆ. ನಾನು ನನಗನಿಸಿದ್ದನ್ನ, ಜನಕ್ಕೇನಾದರೂ ಹೇಳಬೇಕು ಎನ್ನುವುದನ್ನು ಸಿನಿಮಾದಲ್ಲಿ ನಿರೂಪಿಸಬೇಕು ಅಂತ ಬಯಸ್ತೀನಿ. ನನ್ನ ಹಿಂದೆ ಇದನ್ನು ವಿರೋಧಿಸಿಯೇ ಒಂದು ಗುಂಪು ಕೆಲಸ ಮಾಡುತ್ತಿರುತ್ತದೆ. ಅವರಿಗೆ ಯುವ ಸೈದ್ಧಾಂತಿಕ ಬದ್ಧತೆಯೂ ಬೇಕಾಗಿಲ್ಲ. ಅದೃಷ್ಟವಶಾತ್ ನನ್ನ ಸಿನಿಮಾ ನೋಡುಗರಲ್ಲಿ ಇಂತಹವರು ಇಲ್ಲದಿರುವುದರಿಂದ ನನ್ನ ಸಿನಿಮಾ ಒಳ್ಳೆಯ ಪ್ರದರ್ಶನ ಕಾಣುತ್ತದೆ. ಏನು ಬೇಕೋ ಅದನ್ನೇ ನೋಡುತ್ತಾರೆ.

ಪ್ರ : ಬಾಲಿವುಡ್‌ನ ನಿರ್ದೇಶಕರು ಏಕಮುಖವಾಗುತ್ತಿದ್ದಾರೆ ಅಂತ ನಿಮಗನಿಸುತ್ತಾ?


ಉ : ಒಂದು ವಿಧದಲ್ಲಿ ಹಾಗೆಯೇ ಅಂತಿಟ್ಟುಕೊಳ್ಳಿ. ಉತ್ತರ ಭಾರತದಲ್ಲಿ ಹಲವು ರಾಜ್ಯಗಳಿವೆ. ಪ್ರತಿಯೊಂದಕ್ಕೂ ಒಂದೊಂದು ಸಂಸ್ಕೃತಿ ಇದೆ. ಬಿಹಾರ್, ಉತ್ತರಪ್ರದೇಶ, ದೆಹಲಿ ಎಲ್ಲೆಡೆಯಿಂದಲೂ ಸಿನಿಮಾ ಮಾಡಲು ಜನರು ಬರುತ್ತಾರೆ. ಅವರೆಲ್ಲರೂ ವಿಭಿನ್ನ ಹಿನ್ನೆಲೆಯಿಂದ ಬರುವವರು. ಆದರೆ ಮುಂಬೈಗೆ ಬಂದೊಡನೆ ಅವರು ದ್ವೀಪಗಳಲ್ಲಿ ಬಂಧಿಯಾಗಿಬಿಡುತ್ತಾರೆ. ಮಹಾರಾಷ್ಟ್ರದವರೇ ಮುಂಬೈಗೆ ಬಂದಾಗ ಹೊಂದಿಕೊಳ್ಳಲು ತಿಣಕಾಡುತ್ತಾರೆ. ಆದರೂ ವಿಶಾಲ್ ಭಾರದ್ವಾಜ್, ಗೋವಿಂದ ನಿಹಲಾನಿ, ಮಧುರ್ ಬಂಡಾರ್ಕರ್ ಮುಂತಾದವರು ವಿಭಿನ್ನ ರೀತಿಯ ಸಿನಿಮಾ ಮಾಡುತ್ತಾರೆ.

ಪ್ರ : ನೀವು ಸಿನಿಮಾದಲ್ಲಿ ನಟನಾಗಿ, ನಿರ್ಮಾಪಕನಾಗಿ, ನಿರ್ದೇಶಕನಾಗಿ ಕೆಲಸ ಮಾಡುತ್ತೀರಿ. ಸಂಗೀತ, ಸಾಹಿತ್ಯ ಬರೆಯುವಿಕೆ ಇದಾವುದರಲ್ಲೂ ತೊಡಗಿಸಿಕೊಳ್ಳಲು ಇಚ್ಛೆ ಇಲ್ಲವೇ?

ಉ : ಹಾಗೇನಿಲ್ಲ. ಸಂಗೀತದಲ್ಲೂ ನಾನು ತೊಡಗಿಸಿಕೊಳ್ಳಲು ಪ್ರಯತ್ನಿಸಿದೆ. ನನ್ನ ಗುರುಗಳು, ಎಂ.ಬಾಲಮುರಳೀಕೃಷ್ಣರವರ ಬಳಿ ಕಲಿಯಲು ಪ್ರಯತ್ನಪಟ್ಟೆ. ಆದರೆ ಸಾಧ್ಯವಾಗಲಿಲ್ಲ. ಬಿಟ್ಟುಬಿಟ್ಟೆ. ಆದೆ ಎಲ್ಲ ಕ್ಷೇತ್ರದಲ್ಲಿಯೂ ತೊಡಗಿಸಿಕೊಳ್ಳಲು ನನಗೆ ಹಿಂಜರಿಕೆ ಇಲ್ಲ. ನಟ, ನಿರ್ಮಾಪಕ, ನಿರ್ದೇಶಕ ಯಾವ ಕೆಲಸವೇ ಆಗಲಿ ನಾನು ನೋಡುವುದು ಸಿನಿಮಾವನ್ನು ಒಂದು ಮಾಧ್ಯಮವಾಗಿ, ಕೆಲಸವಾಗಿ. ಅಲ್ಲಿನ ಯಾವುದೇ ಕೆಲಸದಲ್ಲಿಯಾದರೂ ನಾನು ತೊಡಗಲು ಇಚ್ಛಿಸುತ್ತೇನೆ. ಅದರಿಂದ ನನಗೆ ಖುಷಿಯಾಗುತ್ತದೆ.

ಪ್ರ : ನೀವು ಹಲವು ರಾಷ್ಟ್ರ ಪ್ರಶಸ್ತಿಗಳನ್ನು, ಫಿಲಂ ಫೇರ್ ಪ್ರಶಸ್ತಿಗಳನ್ನು ಪಡೆದಿದ್ದೀರಿ. ನಿಮ್ಮ ಸಿನಿಮಾಗಳು ಅತ್ಯುತ್ತಮ ವಿದೇಶಿ ಚಿತ್ರ ವಿಭಾಗದಲ್ಲಿ ಆಸ್ಕರ್ ಪ್ರಶಸ್ತಿಗಾಗಿ ಹೆಚ್ಚು ನಾಮಿನೇಷನ್‌ಗಳು ಬಂದಿದ್ದವು. ನಿಮಗೆ, ಒಂದು ಚಿತ್ರ ಮಾಡುವಾಗ ಆಸ್ಕರ್ ಪ್ರಶಸ್ತಿ ಬರಬಹುದು ಎಂಬ ನಿರೀಕ್ಷೆಯಿರುತ್ತಾ?

ಉ : ಖಂಡಿತಾ ಇಲ್ಲ. ಆಸ್ಕರ್ ಪ್ರಶಸ್ತಿ ಎಂಬುದು ವಿಶ್ವ ಚಲನಚಿತ್ರ ಪ್ರಶಸ್ತಿ ಅಲ್ಲ. ಅದು ಕೇವಲ ಅಮೇರಿಕನ್ ಸ್ಟ್ಯಾಂಡರ್ಡ್. ಅಮೇರಿಕಾದಿಂದ ಚಲನಚಿತ್ರಗಳನ್ನು ಗುರಿಯಾಗಿರಿಸಿಕೊಂಡು ಕೊಡುವಂಥದ್ದು. ವಿಶ್ವ ಸಿನಿಮಾ ಇದಕ್ಕಿಂತಲೂ ಬೇರೆಯದೇ ಆದದ್ದು. ಅಲ್ಲಿ ಫ್ರೆಂಚ್, ಜರ್ಮನ್, ರಷ್ಯನ್, ಪಾಕಿಸ್ತಾನಿ, ಭಾರತೀಯ ಸಿನಿಮಾ... ಹೀಗೆ ದೊಡ್ಡ ಪ್ರಪಂಚವೇ ಇದೆ. ಲಗಾನ್ ಚಿತ್ರಕ್ಕೆ ಅಕಾಡೆಮಿ ನಾಮಿನೇಷನ್ ಆದದ್ದು ಖುಷಿಯ ಸಂಗತಿ. ಅಶುಂತೋಷ್ ಗೌರಿಕರ್ (ಲಗಾನ್ ಚಿತ್ರದ ನಿರ್ದೇಶಕ) ಬಗ್ಗೆ ನನಗೆ ಗೌರವ ಇದೆ. ಆತನನ್ನು ನಾನು ಒಪ್ಪುತ್ತೇನೆ. ಆದರೆ ಆತ ಅಕಾಡೆಮಿ ನಾಮಿನೇಷನ್ ಸಂದರ್ಭದಲ್ಲಿ ಹೇಳಿದ್ದರು. " ಇಡೀ ಜಗತ್ತೇ ಈ ಮೂಲಕ ಭಾರತೀಯ ಚಿತ್ರರಂಗವನ್ನು ಗೌರವಿಸಲಿದೆ". ಈ ಮಾತಿಗೆ ನನ್ನ ಸಂಪೂರ್ಣ ವಿರೋಧವಿದೆ. ಏಕೆಂದರೆ ಆಸ್ಕರ್ ಪ್ರಶಸ್ತಿಯೇ ಎಲ್ಲವೂ ಅಲ್ಲ. ಆಲ್‌ಫ್ರೆಡ್ ಹಿಚ್‌ಕಾಕ್, ಚಾರ್ಲಿ



ಚಾಪ್ಲಿನ್‌ರಂಥವರಿಗೆ ಅವರು ಆಸ್ಕರ್‌ಗಳನ್ನು ಕೊಡಲಿಲ್ಲ. ಇನ್ನೊಂದು ರೀತಿಯ ಚಿತ್ರಗಳಿಗೆ ಹತ್ತಾರು ಆಸ್ಕರ್‌ಗಳನ್ನು ಕೊಡುತ್ತಾರೆ. ಹಾಗಾಗಿ ನನಗೆ ಐಎಸ್‌ಐ ಮುದ್ರೆ ಸಾಕು ಎಎಸ್‌ಐ ಮ ಬೇಡ...! (ಒಂಥರಾ ನಗು)

ಇವಿಷ್ಟು 9x ಚಾನೆಲ್‌ನಲ್ಲಿ ನಡೆದ ಸಂದ ತುಣುಕುಗಳು.

ಸಾಂಸ್ಕೃತಿಕ ಅಂಶಗಳನ್ನು ಕೇವಲ ಮಾರಾ ವಸ್ತುವಾಗಿ ಬಳಸಿಕೊಳ್ಳುತ್ತಿರುವ ಈ ಸಂದರ್ಭ ಕಮಲ್‌ಹಾಸನ್‌ನ ಮಾತು ಬಹಳ ಪೂರ್ವವೆನಿಸುತ್ತದೆ. ಒಂದು ಸಣ್ಣ ಅವಕಾಶ ಸಿ ಸಾಕು ಅದನ್ನು ತಮ್ಮ ಮುಂದಿನ ಚಿ ಪ್ರಚಾರಕ್ಕೋಸ್ಕರ ಬಳಸಿಕೊಳ್ಳುವ ಧಾವಂತ ಎಲ್ಲ ಸಿನಿಮಾದವರು ಸ್ವಯಂ ಮಾಡುಕೊಂಡಿರುವ ಅಂಶ. ಇದನ್ನು ಮೆಟ್ಟಿನಿ ಸಾಧ್ಯವೇ ಇಲ್ಲ ಅನ್ನುವಷ್ಟರಮಟ್ಟಿಗೆ ಕಾರ್ಪೊ ಕಬಂಧಬಾಹು ಸಿನಿಮಾ ಕ್ಷೇತ್ರ ಆವರಿಸಿಕೊಂಡಿದೆ. ಅದರಿಂದ ಬಿಡಿಸಿಕೊಳ್ಳು ಹೇಗೆ? ಅದಕ್ಕೆ ಪ್ರಜ್ಞಾವಂತರು ಹೇಗೆ ಸ್ಪಂದಿಸಬ ಎರಡೂ ಚಿಂತನೆಗಳು ಸ್ಪಷ್ಟ ಸೈದ್ಧಾಂತಿಕ ದಿ ಹರಿದುಬರಲಿ ಎಂದು ಈ ತುಣುಕುಗ ಸಂಗ್ರಹಿಸಿ ಬರೆದಿದ್ದೇನೆ.

ಮರ ಮತ್ತು ಮಾಲೀಕ

ಕವಿತೆ

ಮರ ಮಾತಾಡುತ್ತದೆ
ನನಗೂ ನಿನಗೂ
ತಿಳಿದೂ ತಿಳಿಯದ
ಭಾಷೆ -ಭಾವನೆಯಲ್ಲಿ
ಪ್ರಕೃತಿ
ನಾಲ್ಕು ಹನಿ ಕರುಣಿಸಿದರೆ
ಚಿಗುರಾಗಿ
ಹಣ್ಣಾಗಿ
ಸಕಲ ಜೀವಕ್ಕೆ
ಉಸಿರಾಗಿ
ಪರೋಪಕಾರದ ಮೌನಗೀತೆ ಹಾಡುತ್ತಾ
ಮರ ಮಾತಾಡುತ್ತದೆ
ಸಾವನ್ನು ನುಂಗಿ
ಬದುಕನ್ನು ಕರುಣಿಸುತ್ತಾ

ಮರ ಮಾತಾಡುತ್ತದೆ
ಮಾಲೀಕ ಆತ್ಮಸಾಕ್ಷಿಯಾಗಿ
ಮಾತಾಡಬೇಕಾಗಿದೆ
ಶ್ರಮ ಮೊದಲೋ?
ಸಂಪತ್ತು ಮೊದಲೋ?
ಕಾರ್ಮಿಕನ ನೀಯತ್ತು
ಕೊಡುವ ದುಗ್ಗಾಣಿ ಅಲ್ಲಾ
ಮಾಲೀಕನ ಸಂಪತ್ತು
ಪಡೆಯುವ ವಸ್ತು ಅಲ್ಲಾ
ಮರ
ಆದರ್ಶ ಆಗಬೇಕಾಗಿದೆ
ಮಾಲೀಕರೆಂಬ
ಮನುಷ್ಯಪ್ರಾಣಿಗೆ

- ಲಕ್ಷ್ಮಣ್

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH